ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 26 ಸಂಚಿಕೆ 11 ಮಾರ್ಚ್ 14, 2004 ಬೆಲೆ ರೂ. 3.00

ಮಾರ್ಚ್ 8, ಮಹಿಳಾದಿನ



ಬೆಳಗುವ ಭಾರತದಲ್ಲಿ ಬಳಲುತ್ತಿರುವ ಮಹಿಳೆಯರು

ಅಡ್ವಾನಿಯ ಮತ್ತೊಂದು 'ರ(ಕ್ತ)ಥ ಯಾತ್ರೆ'






ಮಾರಿಕೊಳ್ಳುತ್ತಿರುವ ರಾಜಕಾರಣಿಗಳು ಹಬ್ಬುತ್ತಿರುವ ಕೋಮುದಳ್ಳುರಿ

- ಕೋಮುವಾದಿಗಳನ್ನು ತೊಲಗಿಸಬೇಕು
- ಭ್ರಷ್ಟಾಚಾರ ಮತ್ತು ಭಯೋತ್ಪಾದನೆ ಜಾಗತೀಕರಣ
- ಪಾಬ್ನಾದಲ್ಲಿ - ಸಾಂಸ್ಕೃತಿಕ ಸಮಾಲೋಚನೆ
- ಉದಾರೀಕರಣ ಮತ್ತು ಮುಷ್ಕರದ ಹಕ್ಕು

ಭಾರತ ಎಲ್ಲಿ ಪ್ರಕಾಶಿಸುತ್ತಿದೆ ? ಪೋಸ್ಟರ್



ಪ್ರಕಾಶಕರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ,
ಬೆಂಗಳೂರು
ಬೆಲೆ ರೂ. 50/-


ಕೈಗಾರಿಕಾ ನೇತಾರರು

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಅನೇತ ಮಹತ್ವದ ಘಟನೆಗಳು ಹಾಗೂ ವ್ಯಕ್ತಿಗಳನ್ನು ಅತ್ಯಂತ ಸನಿಹದಿಂದ ಕಂಡ ಪತ್ರಕರ್ತ ಬರ್ಲ್‌ವೈಟ್‌ರವರು ಪತ್ರಿಕೆ ಯೊಂದನ್ನು ಆಳವಾಗಿ ವಿಭಿನ್ನವಾದ ದೃಷ್ಟಿಯಿಂದ ವಿಶ್ಲೇಷಿಸಿ ದವರು. ಗಾಂಧೀಜಿ ಯವರೊಂದಿಗೆ ನಿಕಟ ಸಂಬಂಧ ವಿರಿಸಿಕೊಂಡಿದ್ದ ಬಿರ್ಲಾ, ಟಾಟಾನಂತಹ ಹಲವಾರು ಭಾರತೀಯ ಬಂಡವಾಳಗಾರರ ನಿಜವಾದ ಹಿತಾಸಕ್ತಿಗಳನ್ನು, ಗಾಂಧಿಯವರ ಚಿಂತನೆಗಳೊಂದಿಗೆ ಅವರಿಗಿದ್ದ ಭಿನ್ನತೆ ಹಾಗೂ ವರ್ಗ-ಸ್ವರೂಪವನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿರುವ ಬರ್ಲ್‌ವೈಟ್‌ರವರ ಬರಹವನ್ನಿಲ್ಲಿ ನೀಡಲಾಗಿದೆ.

ಅನುವಾದಕ್ಕೆ ಒತ್ತಾಸೆ
ಪಿ.ಲಂಕೇಶ್
ಕನ್ನಡಕ್ಕೆ ಅನುವಾದ
ಖ್ಯಾತ ಜಾನಪದ ತಜ್ಞೆ, ಲೇಖಕಿ
ಡಾ. ಕೆ.ಆರ್.ಸಂಧ್ಯಾರೆಡ್ಡಿಯವರು

ಸ್ವಾತಂತ್ರ್ಯಾನಂತರ ಸರ್ಕಾರದ ಯೋಜನೆಗಳಲ್ಲಿ ರಾಷ್ಟ್ರೀಕರಣಕ್ಕೆ ಸಂಬಂಧಿಸಿದ ವಿಷಯ ಜ್ವಲಂತವಾಗಿತ್ತು. ಈ ಬಗ್ಗೆ ಬಿರ್ಲಾ ಅಭಿಪ್ರಾಯವನ್ನು ಕೇಳಿದೆ "ಜನಕ್ಕೆ ಅದು ಬೇಕೆಂದರೆ ಇರಲಿ" ಎಂದು ಹೇಳುತ್ತಾ ತಕ್ಷಣವೇ ಅವರು "ಅದನ್ನು ಜವಳಿ ಉದ್ಯಮಕ್ಕೆ ಅನ್ವಯಿಸಬಾರದು" ಎಂದು ಸೇರಿಸಿದರು. "ಜನ ಇದರ ಪರಿಣಾಮ ಏನು ಎಂದು ಗೊತ್ತಿಲ್ಲದೇ ಮಾತನಾಡುತ್ತಿದ್ದಾರೆ. ರಾಷ್ಟ್ರೀಕರಣ ಒಂದು ಘೋಷಣೆ ಮಾತ್ರ. ರಾಷ್ಟ್ರೀಕರಣ ನೀತಿಯ ವಿಫಲತೆಗೆ ಲೇಬರ್ ಪಕ್ಷದ ಇಂಗ್ಲೆಂಡ್ ಸರ್ಕಾರವೇ ಉದಾಹರಣೆ. ಈ ನೀತಿ ಅನುಸರಿಸದ ಅಮೆರಿಕಾಕ್ಕೆ ಬಹಳ ಮೆಚ್ಚಿಕೊಂಡಿದ್ದರು. ಆ ದೇಶದೊಂದಿಗೆ ಬ್ಯುಸಿನೆಸ್ ಮಾಡುವ ಬಗ್ಗೆ ಅವರಿಗೆ ಬಹಳ ನಿರೀಕ್ಷಣೆಗಳಿದ್ದವು. ಆದರೆ ಡಾಲರುಗಳನ್ನು ಪಡೆಯುವುದೇ ತೊಂದರೆಯಾಗಿತ್ತು. ರಾಷ್ಟ್ರೀಕರಣದ ಮಾತಿಲ್ಲದಿದ್ದರೆ ವಿದೇಶಿ ಬಂಡವಾಳವನ್ನು ಬಹಳ ಸುಲಭವಾಗಿ ಭಾರತಕ್ಕೆ ಆಕರ್ಷಿಸಬಹುದಿತ್ತು ಎಂದು ಅವರು ಭಾವಿಸಿದ್ದರು. ರಾಷ್ಟ್ರೀಕರಣದ ಅಗತ್ಯವಿಲ್ಲ. ಆದರೆ ನಮ್ಮಂತಹ ಬ್ಯುಸಿನೆಸ್‌ನವರಿಗೆ ಸಾಮಾನ್ಯ ಮನುಷ್ಯನಲ್ಲಿ ಪೂರ್ಣ ವಿಶ್ವಾಸವಿದೆ. ಒಂದಲ್ಲ ಒಂದು ದಿನ ಜನರಿಗೂ ಅರ್ಥವಾಗುತ್ತದೆ. ಇದು ಒಳ್ಳೆಯದಲ್ಲ ಎಂದು.

ಬಿರ್ಲಾ ಮಾಲೀಕತ್ವದಲ್ಲಿ ಪ್ರಕಟವಾಗುತ್ತಿದ್ದ ಹದಿನಾರು ವೃತ್ತ ಪತ್ರಿಕೆಗಳ ಸಂಪಾದಕೀಯದ ಪ್ರಕಾರ ಸಾಮಾನ್ಯ ಮನುಷ್ಯನಿಗೆ ಬೆಲೆ ನಿಯಂತ್ರಣವೂ ಬೇಕಾಗಿರಲಿಲ್ಲ. ಬೆಲೆ ನಿಯಂತ್ರಣದ ಬಗ್ಗೆ ಸ್ವತಃ ಬಿರ್ಲಾ ಅವರ ಅಭಿಪ್ರಾಯ ಹೀಗಿತ್ತು. "ನಾನು ಎಂದೂ ಈ ನಿಯಂತ್ರಣಗಳ ಪರ ಅಲ್ಲ. ನಾನು ಯೋಚಿಸುವುದೇ ಬೇರೆ ರೀತಿ. ಸರ್ಕಾರ ಇತ್ತೀಚಿಗೆ ಸಕ್ಕರೆಯ ಮೇಲಿನ ನಿಯಂತ್ರಣ ತೆಗೆದಿರುವುದರಿಂದ ಸಕ್ಕರೆ ಬೆಲೆ ನಿಯಂತ್ರಣದ ವಿವಾದ ಎಷ್ಟು ಬಿಸಿ ಏರಿತ್ತೆಂದರೆ ಗಾಂಧೀಜಿಯವರು ಕೂಡ ಈ ಬಗ್ಗೆ ಪಕ್ಷ ವಹಿಸಿ ಮಾತಾಡಬೇಕಾಯಿತು. ನಿಯಂತ್ರಣ ತೆಗೆದ ಮೇಲೆ ಸಕ್ಕರೆಯ ಬೆಲೆ ನಿಜಕ್ಕೂ ಇಳಿದಂತೇ ಆಗಿತ್ತು. ಏಕೆಂದರೆ ಕಾಳಸಂತೆಯಲ್ಲಿ ಕೊಳ್ಳುತ್ತಿದ್ದ ಬೆಲೆಗಿಂತ ಕಡಿಮೆಯಾಗಿತ್ತು. ಆದರೆ ಕಾನೂನುಬದ್ಧ ನಿಯಂತ್ರಣ ಬೆಲೆಯಲ್ಲಿ ಕೊಳ್ಳುವವರಿಗೆ ಅದರ ಬೆಲೆ ಸೇರಿಗೆ 12 ಆಣೆಯಿಂದ ಒಂದು ರೂಪಾಯಿ ಎರಡಾಣೆಯಷ್ಟು ಹೆಚ್ಚಾಗಿತ್ತು. ಅದರ ಬೆಲೆ ಎರಡು ಪಟ್ಟು ಹೆಚ್ಚಾಯಿತು. ಗಾಂಧಿಯವರು ಇತ್ತೀಚಿನ ಪ್ರಾರ್ಥನಾ ಸಭೆಗಳಲ್ಲಿ ಬೆಲೆಗಳ ಮೇಲೆ ಸರ್ಕಾರದ ನಿಯಂತ್ರಣವನ್ನು ತೆಗೆಯಬೇಕು ಎಂದು ಪ್ರತಿಪಾದಿಸಿದ್ದರು. ಜನಸಾಮಾನ್ಯರಿಗೆ ಅನುಕೂಲವಾಗುವಂತಹ ಮಾತನ್ನೇ ಹೇಳಿದ್ದೇನೆ ಎಂದು ಅವರು ನಂಬಿದ್ದರು. ಗಾಂಧಿಯವರು ತಮ್ಮ ಸ್ನೇಹಿತರು ಹಾಗೂ ಅತಿಥೇಯರ ಪರವಾಗಿ ನಿಜವನ್ನು ತಿರುಗಿಸುತ್ತಾರೆ ಎಂದು ಊಹಿಸುವುದಕ್ಕೂ ಸಾಧ್ಯವಿರಲಿಲ್ಲ. ಗಾಂಧಿಯವರ ನಿಲುವನ್ನು ನೋಡಿ ಬಹಳ ಮಂದಿಗೆ ಆಶ್ಚರ್ಯವಾಗಿತ್ತು. ಈ ಬಗ್ಗೆ ಬಿರ್ಲಾ ಏನು ಹೇಳುತ್ತಾರೆ ಎಂದು ನಾನು ಕುತೂಹಲಗೊಂಡಿದ್ದೆ. ಈ ವಿಷಯದ ಬಗ್ಗೆ ನಿಮಗೂ ಗಾಂಧಿಯವರಿಗೂ ಸಮ್ಮತವಿದೆಯೇ ಎಂದು ಕೇಳಿದೆ. ಬಿರ್ಲಾ ಹೇಳಿದರು "ಇಲ್ಲವೇ ಇಲ್ಲ. ಗಾಂಧೀಜಿಗೆ ಅವರದೇ ಆದ ಅಭಿಪ್ರಾಯಗಳಿವೆ. ಒಮ್ಮೊಮ್ಮೆ ನನ್ನ ಹಾಗೂ ಅವರ ಅಭಿಪ್ರಾಯಗಳು ಕಾಕತಾಳೀಯವಾಗಿ ಒಂದೇ ಆಗಿರಬಹುದಷ್ಟೇ".



ಬಿರ್ಲಾ ಮತ್ತು ಗಾಂಧಿಯವರ ಅಭಿಪ್ರಾಯಗಳಲ್ಲಿ ಹೊಂದಿಕೆಯಾಗದ ಒಂದು ಕ್ಷೇತ್ರ ಬಹಳ ಮುಖ್ಯವಾದದ್ದು. ಆ ವಿಷಯದಲ್ಲಿ ಅವರ ಭಿನ್ನಾಭಿಪ್ರಾಯ ಎಲ್ಲರ ಟೀಕೆಗೂ ಗುರಿಯಾಗಿತ್ತು. ಬಿರ್ಲಾ, ಯಂತ್ರದಿಂದ ಬಟ್ಟೆ ತಯಾರಿಸುವ ಉದ್ಯಮಿಯಾಗಿ ಈ ದೇಶದಲ್ಲಿ ಅಗ್ರಗಣ್ಯರಾಗಿದ್ದರು. ಆದರೆ ಯಂತ್ರದಿಂದ ತಯಾರಿಸಿದ ಬಟ್ಟೆಯ ಬಗ್ಗೆ ಗಾಂಧಿಯವರ ವಿರೋಧ ಐತಿಹಾಸಿಕವಾದದ್ದು. ಅವರ ದೃಷ್ಟಿಯಲ್ಲಿ ಚರಕಾ ಕೇವಲ ನೂಲು ತೆಗೆಯುವ ಸಾಧನವಾಗಿರಲಿಲ್ಲ. ಅದು ಒಂದು ಸಂಕೇತವಾಗಿತ್ತು. ಯಂತ್ರಕ್ಕೆ ಪ್ರತಿಯಾಗಿ ಅದು ಗುಡಿ ಕೈಗಾರಿಕೆಯನ್ನು ಪ್ರತಿನಿಧಿಸುವ ಚಿಹ್ನೆಯಾಗಿತ್ತು. ಅನಂತರ ಬಿರ್ಲಾರ ಒಂದು ಮಾತು ನನ್ನನ್ನು ವಿಸ್ಮಯಗೊಳಿಸಿತು. "ಅತಿ ಉನ್ನತ ಮಟ್ಟದ ಜೀವನಶೈಲಿಯಲ್ಲಿ ತಮಗೆ ನಂಬಿಕೆಯಿಲ್ಲ ಎಂಬುದು ಗಾಂಧಿ ಅವರ ಸಿದ್ಧಾಂತ. ಜನಸಾಮಾನ್ಯರ ಮಟ್ಟ ಬಹಳ ಮೇಲೇರುವುದನ್ನು ಗಾಂಧಿ ಬಯಸುತ್ತಿರಲಿಲ್ಲ. ಜೀವನಮಟ್ಟ ಬಹಳ ಏರಿದಾಗ ಪಾಪ ಮತ್ತು ಲೋಲುಪತೆ ಹೆಚ್ಚುತ್ತದೆ ಎಂದು ಅವರು ಭಾವಿಸಿದ್ದರು. ಈ ಮಾತಿನ ಬಗ್ಗೆ ಬಿರ್ಲಾ ಹೇಳಿದ್ದು ಸರಿ ಎಂದು ಆಮೇಲೆ ನನಗೆ ಗೊತ್ತಾಯಿತು. ಬಡತನವನ್ನು ಗಾಂಧಿ ವೈಭವೀಕರಿಸುವ ರೀತಿಯನ್ನು ಒಪ್ಪಿಕೊಳ್ಳಲು ಸ್ವತಃ ನೆಹರು ಕೂಡ ಸಿದ್ಧರಿರಲಿಲ್ಲ. ಈ ವಿಷಯಕ್ಕೆ ಬಂದಾಗ ಬಿರ್ಲಾ ಅವರು ನನ್ನ ಅಭಿಪ್ರಾಯವೇ ಬೇರೆ, ನಾನು ಕೈಗಾರಿಕೋದ್ಯಮಿ" ಎಂದರು.

ಮುಂದುವರಿಯುವುದು.

ಐಕ್ಯರಂಗ

4 ದಶಕಗಳ ಹಿಂದೆ

ವಿಷಮಕ್ಕೇರಿದ ಹಿಂದಿ ವಿರೋಧ ದಕ್ಷಿಣದಿಂದ ಉತ್ತರದೆಡೆ ವ್ಯಾಪಿಸುತ್ತಿದೆ

ದಕ್ಷಿಣದ ತಮಿಳುನಾಡಿನಲ್ಲಿ ಪ್ರಜಾಪ್ರಭುತ್ವದಿನದ ಹಿಂದಿನ ದಿನದಿಂದ ಒಂದೊಮ್ಮೆಗೆ ಸಿಡಿದೆದ್ದ ಹಿಂದಿ ವಿರೋಧವೀಗ ತೀವ್ರ ವಿಷಮಕ್ಕೇರಿದೆ.

ಮದ್ರಾಸು ರಾಜ್ಯಾದ್ಯಂತ ಹಲವೆಡೆಗಳಲ್ಲಿ ನಡೆದ ಗೋಳಿಬಾರಿನಿಂದ ವಿದ್ಯಾರ್ಥಿಗಳನ್ನೊಳಗೊಂಡು ಹಲವಾರು ಮಂದಿ ಅಸುನೀಗಿದ್ದಾರೆ. ತಿರುಪ್ಪೂರಿನಲ್ಲಿ ಇಬ್ಬರು ಪೋಲೀಸು ಅಧಿಕಾರಿಗಳು ಹಿಂದಿ ವಿರೋಧಿಗಳ ರೋಷಕ್ಕೆ ಬಲಿಯಾಗಿದ್ದಾರೆ. ಈ ಇಬ್ಬರು ಪೋಲೀಸು ಸಬ್‌ಇನ್ಸ್‌ಪೆಕ್ಟರ್‌ರ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಜೀವಂತ ದಹನ ಗೈಯಲಾಯಿತು. ವಿದ್ಯಾರ್ಥಿಗಳ, ಪ್ರದರ್ಶನ, ಹಿಂಸಾಚಾರ, ಸರಕಾರೀ ಕಚೇರಿಗಳ, ರೈಲ್ವೇ ಸ್ಟೇಷನುಗಳ ಮೇಲೆ ದಾಳಿ, ಟೆಲಿಫೋನ್ ಟೆಲಿಗ್ರಾಮ್ ತಂತಿಗಳನ್ನು ಕಡಿಯುವುದು, ರೈಲುಗಳ ಮೇಲೆ ದಾಳಿ, ಬೆಂಕಿಯಿಡುವುದು - ಈ ಘಟನೆಗಳು ರಾಜ್ಯಾದ್ಯಂತ ನಡೆಯುತ್ತಲೇ ಇವೆ.

ಜನ ಬಲಿ - ಅಧಿಕಾರಿಗಳ ಜೀವಂತ ದಹನ ಕೇಂದ್ರ ಸಂಪುಟದಲ್ಲಿ ಬಿಕ್ಕಟ್ಟು - ಸೇನೆ ನಿಯಂತ್ರಣಕ್ಕೆ ಕೇಂದ್ರ ಮಂತ್ರಿಗಳಿಬ್ಬರ ರಾಜಿನಾಮೆ

ಹಿಂದಿ ವಿರೋಧ ಚಳುವಳಿಯಿಂದ ಉದ್ಭವಿಸಿದ ತೀವ್ರ ಜ್ವಾಲೆಯ ಉರಿಯು ಕೇಂದ್ರದ ಸಚಿವರ ಸ್ಥಾನಗಳಿಗೂ ತಟ್ಟಿದೆ. ಕೇಂದ್ರ ಸಚಿವಸಂಪುಟದಲ್ಲಿ ತೀವ್ರ ಬಿಕ್ಕಟ್ಟು ಉಂಟಾಗಿದೆ. ಕೇಂದ್ರ ಸಂಪುಟದಲ್ಲಿ ಮದ್ರಾಸಿನ ಪ್ರತಿನಿಧಿಗಳಾಗಿರುವ ಆಹಾರ ಸಚಿವ ಸುಬ್ರಹ್ಮಣ್ಯಂ ಪೆಟ್ರೋಲಿಯಂ ಹಾಗೂ ಕೆಮಿಕಲ್ಸ್ ಶಾಖಾ ಸಚಿವರು ಬೊಬ್ಬಿಡುತ್ತಿದ್ದಾಗಲೂ ತನ್ನ ಅಸಮರ್ಥತೆಗಾಗಿ ರಾಜಿನಾಮೆ ನೀಡದ ಶ್ರೀ ಸುಬ್ರಹ್ಮಣ್ಯಂ, ಈಗ ತನ್ನ ರಾಜ್ಯದ ಹಿಂದೀ ವಿರೋಧದ ಉರಿ ತಡೆಯಲಾರದೆ ರಾಜಿನಾಮೆ ನೀಡಬೇಕಾಗಿ ಬಂದಿದೆ.

★

ಅಮೆರಿಕನ್ ಸಾಮ್ರಾಜ್ಯವಾದಿಗಳ ಯುದ್ಧೋನ್ಮಾದ - ಉತ್ತರ ವಿಯೆಟ್ನಾಂ ಮೇಲೆ ದುರಾಕ್ರಮಣ ವಿಯೆಟ್ನಾಂ ಜನತೆಯಿಂದ ಪ್ರಬಲ ಪ್ರತಿಪ್ರಹಾರ

ಸೋವಿಯತ್ ಒಕ್ಕೂಟದ ಪ್ರಧಾನಿ ಅಲೆಕ್ಸಿಕೊಸಿಗಿನ್‌ರವರ ನೇತೃತ್ವದಲ್ಲಿನ ಉಚ್ಚಮಟ್ಟದ ಶಿಷ್ಟಮಂಡಲವು ಕಳೆದ ವಾರಾಂತ್ಯದಲ್ಲಿ ಉತ್ತರ ವಿಯೆಟ್ನಾಮನ್ನು ಸಂದರ್ಶಿಸುತ್ತಿರುವಂತೆಯೇ, ಅಮೆರಿಕನ್ ಸಾಮ್ರಾಜ್ಯವಾದಿ ವಿಸ್ತರಣಾಕಾಂಕ್ಷೀ ಯುದ್ಧಕೋರರು ಉತ್ತರ ವಿಯೆಟ್ನಾಮ್ ಗಣರಾಜ್ಯದ ಪ್ರದೇಶದೊಳಗೆ ಅತಿಕ್ರಮಿಸಿ ಅಕ್ರಮ ವಿಮಾನಧಾಳಿಯನ್ನು ಗೈದು, ಕಡಲ್ಗಳ್ಳರಿಗೂ ಮೀರಿಸುವಂತಹ ನಗ್ನ, ನಿರ್ಲಜ್ಜ ದುಸ್ಸಾಹಸೀ ದುರಾಕ್ರಮಣವನ್ನು ಫೆ 7 ರಂದು ಆರಂಭಿಸಿದರು.

★

ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿಡುವಂತೆ ರಾಷ್ಟ್ರಕವಿಯ ಒತ್ತಾಯ

ಇದೇ ಜನರಿ 7 ರಂದು ಡಾ. ಕೆ.ವಿ.ಪುಟ್ಟಪ್ಪನವರನ್ನು ರಾಜ್ಯದ ರಾಷ್ಟ್ರಕವಿಯಾಗಿ ಸನ್ಮಾನಿಸಲು ಬೆಂಗಳೂರಲ್ಲೊಂದು ಸಮಾರಂಭ ನಡೆಯಿತು.

ಮೊನ್ನೆ ತಮ್ಮನ್ನು ಗೌರವಿಸುವ ವೇಳೆ ಮೃದುವಾಗಿ ದುಃಖದಿಂದ ಹೇಳಿದರು, ಇನ್ನಾದರೂ ಮೈಸೂರೆಂಬ ಹೆಸರನ್ನು ತೆಗೆದು ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿಡಿ ಎಂದು. ಹಾಗೆಯೇ ಕನ್ನಡ ಮಾಧ್ಯಮದಲ್ಲೇ ಎಲ್ಲಾ ಮಟ್ಟಗಳಲ್ಲೂ ಶಿಕ್ಷಣ ನೀಡಬೇಕೆಂಬ ಕನ್ನಡ ಜನತೆಯ ಅಪೇಕ್ಷೆಯನ್ನೂ ನಾಯಕರ ಮುಂದಿಟ್ಟರು.

ರಾಷ್ಟ್ರಕವಿಗಳನ್ನು ಗೌರವಿಸಿ ಜನಾದರಣೆ ಸಂಪಾದಿಸಲು ಹೊರಟ ನಮ್ಮ ಮೈಸೂರು ಸರ್ಕಾರದ ಕಾಂಗ್ರೆಸ್ ಮುಖಂಡರು ಕವಿಗಳ ಸೂಚನೆಗೆ ಕಿವಿಗೊಡುವರೆ? ಇಲ್ಲವೇ ಪುಟ್ಟಪ್ಪನವರಿಗೆ ಪುಟ್ಟ ಬುದ್ಧಿಯೆಂದುಕೊಂಡು ಸುಮ್ಮನಿರುವರೆ?

★


ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಮಾರ್ಚ್ 1 ರಿಂದ 15, 2004**
  ಎನ್.ಡಿ.ಎ. ಸರಕಾರದ ಕೃಷಿ ನೀತಿಗಳನ್ನು ವಿರೋಧಿಸಿ, ಪರ್ಯಾಯ ಕೃಷಿ ನೀತಿಗಾಗಿ ರಾಷ್ಟ್ರಾದ್ಯಂತ ರೈತಸಂಘ, ಕೃಷಿಕೂಲಿಕಾರರ ಸಂಘಗಳ ಜಂಟಿ ಪ್ರಚಾರಾಂದೋಲನ
- **ಮಾರ್ಚ್ 16,17 2004**
  ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಪರ್ಯಾಯ ಕೃಷಿ ನೀತಿ ಕುರಿತು ಬಹಿರಂಗ ಸಭೆ.
  ಮಾರ್ಚ್ 16 ರಂದು ಕಮಲಾಪುರ
  ಮಾರ್ಚ್ 17 ರಂದು ಆಳಂದ
  ಮುಖ್ಯ ಅತಿಥಿ : ಕಾಂ. ಎಸ್. ರಾಮಚಂದ್ರನ್ ಪಿಳ್ಳೆ, ಎಐಕೆಎಸ್ ಅಧ್ಯಕ್ಷರು
- **ಮಾರ್ಚ್ 20, 2004**
  ಇರಾಕ್ ಮೇಲಿನ ಆಕ್ರಮಣಕ್ಕೆ 1 ವರ್ಷ. ಅಮೆರಿಕಾದ ಯುದ್ಧಕೋರ ನೀತಿ ಖಂಡಿಸಿ ವಿವಿಧ ರಾಜಕೀಯ ಪಕ್ಷಗಳ, WSF ಮುಂತಾದ ಸಂಘಟನೆಗಳ ರ್‍ಯಾಲಿ - ವರ್ಷಾಚರಣೆ

ಹಿಂದೂ ಮತೀಯವಾದದೊಂದಿಗೆ ಬೆಳೆಯುತ್ತಿರುವ ಮುಸ್ಲಿಂ ಮತೀಯವಾದ

ಕರ್ನಾಟಕದ ರಾಜಕೀಯದಲ್ಲಿ ಹಲವು ಪ್ರಮುಖ ರಾಜಕಾರಣಿಗಳ ವಲಸೆಯ ಭರಾಟೆ ಧೂಳೆಬ್ಬಿಸಿದೆ. ಈ ಆಯರಾಂ-ಗಯಾರಾಂಗೆ ಯಾವುದೇ ನೀತಿ-ನಿಯತ್ತುಗಳ ಆಧರಿಸಿ ನಡೆಯುತ್ತಿಲ್ಲ, ಬದಲಾಗಿ ವಿಜೃಂಭಿಸುತ್ತಿರುವುದು ಅತ್ಯಂತ ಸಂದರ್ಭಸಾಧಕತೆ, ಅಧಿಕಾರದ ಆಮೀಷ-ಹಣಕ್ಕಾಗಿ ತಮ್ಮನ್ನೇ ಮಾರಿಕೊಳ್ಳುತ್ತಿರು-ಅನೈತಿಕ ವ್ಯಾಪಾರಕ್ಕಿಳಿದಿರುವುದು. ಹಿಂದೆಂದೂ ಕಂಡರಿಯದಂತಹ ಒಂದು ಬೆಳವಣಿಗೆ. ಈ ಹೇಸಿಗೆ ತರಿಸುವ ವಹಿವಾಟಿನಲ್ಲಿ ಬಿಜೆಪಿ ನಿರತವಾಗಿರುವಾಗಲೇ ಚೆಡ್ಡಿಪಡೆ ಇನ್ನೊಂದೆಡೆ ಕೋಮುಗಲಭೆಗಳನ್ನೆಬ್ಬಿಸುತ್ತಿದೆ. ಈ ವಿಶಿಷ್ಟ ಸಂದರ್ಭದತ್ತ ಒಂದು ನೋಟ.

ಚುನಾವಣೆಗಳು ಸಮೀಪಿಸುತ್ತಿದ್ದಂತೆ ರಾಜ್ಯದ ರಾಜಕೀಯ ಪರಿಸ್ಥಿತಿ ರಂಗೇರುತ್ತಿದೆ. ಆದರೆ ಬಂಡವಾಳಶಾಹಿ ರಾಜಕೀಯ ಪಕ್ಷಗಳ ಕೆಲವು ನಾಯಕರು ಸಿದ್ಧಾಂತಗಳನ್ನೆಲ್ಲಾ ಗಾಳಿಗೆ ತೂರಿ, ಕೇವಲ ಅಧಿಕಾರ ಲಾಲಸೆಯಿಂದ ಪಕ್ಷದಿಂದ ಪಕ್ಷಕ್ಕೆ ಹಾರುತ್ತಿರುವುದು ಜನತೆಯಲ್ಲಿ ರಾಜಕಾರಣಿಗಳ ಬಗ್ಗೆ ಅಸಹ್ಯ ಭಾವನೆಗಳನ್ನು ಹುಟ್ಟಿಸುತ್ತಿದೆ. ಒಂದು ಪಕ್ಷದ ರಾಜಕೀಯ ಧೋರಣೆಗಳ ಬಗ್ಗೆ ಭಿನ್ನಾಭಿಪ್ರಾಯ ಉಂಟಾಗಿ, ಇನ್ನೊಂದು ಪಕ್ಷದ ರಾಜಕೀಯ ಧೋರಣೆಯನ್ನು ಮೆಚ್ಚಿಕೊಂಡು ಪಕ್ಷ ಬಿಟ್ಟು ಪಕ್ಷ ಸೇರುವುದಾದರೆ, ಸಹಿಸಿಕೊಳ್ಳಬಹುದು. ಆದರೆ ಕೇವಲ ಅಧಿಕಾರಕ್ಕಾಗಿ ತಮ್ಮನ್ನು ಇನ್ನೊಂದು ಪಕ್ಷಕ್ಕೆ ಮಾರಾಟ ಮಾಡಲು ಮುಂದಾಗುವುದು ರಾಜಕೀಯ ಸಮಯ ಸಾಧಕತನದ ಹೀನಾಯ ಮಾದರಿಯಷ್ಟೇ ಆಗಿದೆ. ಬಂಗಾರಪ್ಪನವರಿಗೆ ಎಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟು ಖರೀದಿಸಲಾಯಿತು ಎಂದು ಜನ ಬೀದಿ ಬೀದಿಗಳಲ್ಲಿ ಮಾತನಾಡುತ್ತಿದ್ದಾರೆ. ಶವ ಪೆಟ್ಟಿಗೆ ನುಂಗಿದ ಖ್ಯಾತಿಯ ಜಾರ್ಜ್ ಫರ್ನಾಂಡಿಸ್ ಸೂಟ್‌ಕೇಸ್‌ಗಳೊಂದಿಗೆ ಬಂದಿಳಿದು ಕರ್ನಾಟಕದ ಸಂಧಿಗೊಂದಿಗಳಲ್ಲಿ ಸಂಚರಿಸಿದ್ದು ಎಲ್ಲರೂ ನೋಡಿದ್ದಾರೆ.



ರಾಜ್ಯದ ರಾಜಕೀಯ ಇಷ್ಟೊಂದು ಕೀಳು ಮಟ್ಟಕ್ಕೆ ಈ ಹಿಂದೆ ಯಾವಾಗಲೂ ಹೋಗಿರಲಿಲ್ಲ. ಇದರ ಕೀರ್ತಿ ನಿಸ್ಸಂದೇಹವಾಗಿ ಬಿಜೆಪಿಗೆ ಸಲ್ಲುತ್ತದೆ. ಒಂಟಿಯಾಗಿ ಗೆಲ್ಲಲಾಗುವುದಿಲ್ಲ ಎಂಬ ಭೀತಿಯೂ ಬಿಜೆಪಿಯನ್ನು ಆವರಿಸಿದ್ದು ಸಿಕ್ಕ ಸಿಕ್ಕವರನ್ನು ಬಲೆಹಾಕಿ ಹಿಡಿಯಲಾಗುತ್ತಿದೆ. ನಿವೃತ್ತ ಅಧಿಕಾರಿಗಳನ್ನು, ಅತೃಪ್ತ ರಾಜಕಾರಣಿಗಳನ್ನು, ಸಿನೆಮಾ ನಟ ನಟಿಯರನ್ನು ಆಮಿಷವೊಡ್ಡಿ ಬರಮಾಡಿಕೊಳ್ಳಲಾಗುತ್ತಿದೆ. ಅಲ್ಪ ಸಂಖ್ಯಾತ ಮುಸಲ್ಮಾನರನ್ನು ಓಲೈಸುವ ಅಂಗವಾಗಿ ಅವರೊಳಗಿನ ಸಂದರ್ಭಸಾಧಕ ನಾಯಕರನ್ನು ಬುಟ್ಟಿಗೆ ಹಾಕಿಕೊಳ್ಳಲಾಗುತ್ತಿದೆ.

ಒಂದು ಕಡೆ ಮುಸಲ್ಮಾನರನ್ನು ಓಲೈಸಲು ಪ್ರಯತ್ನಿಸುತ್ತಿರುವ ಬಿಜೆಪಿ ಇನ್ನೊಂದು ಕಡೆ ಸಂಘ ಪರಿವಾರದ ಸಂಘಟನೆಗಳ ಮೂಲಕ ಅಲ್ಲಲ್ಲಿ ಮತೀಯ ಗಲಭೆಗಳನ್ನು ಹುಟ್ಟು ಹಾಕುತ್ತಿದೆ.

ಮತೀಯ ಗಲಭೆಗಳು ಹೆಚ್ಚಾದಂತೆ ಬಹುಸಂಖ್ಯಾತ ಹಿಂದುಗಳ ಮತಗಳು ಗಟ್ಟಿಯಾಗಿ ಬಿಜೆಪಿ ಪರವಾದ ಧ್ರುವೀಕರಣಕ್ಕೆ ಕಾರಣವಾಗುತ್ತದೆ ಎಂಬುದು ಅವರ ಲೆಕ್ಕಾಚಾರ. ಅರ್ಥವಿಲ್ಲದ ಹಿಂದೂ ಸಮಾಜೋತ್ಸವಗಳನ್ನು ಏರ್ಪಡಿಸುತ್ತಾರೆ. ಇದಕ್ಕಾಗಿ ಸಾರ್ವಜನಿಕರಿಂದ ಹಣ ಸುಲಿಯುತ್ತಾರೆ. ಪ್ರದೇಶಗಳನ್ನು ಬ್ಯಾನರು, ಬಾವುಟಗಳಿಂದ ಕೇಸರಿಮಯಗೊಳಿಸುತ್ತಾರೆ. ಬ್ಯಾನರುಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧ ಪ್ರಚೋದನಾಕಾರಿ ಘೋಷಣೆಗಳನ್ನು ಬರೆದಿರುತ್ತಾರೆ. ಸಭೆಗಳಲ್ಲಿ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಲು ಪ್ರಚೋದಿಸುವ ಭಾಷಣಗಳನ್ನು ಮಾಡುತ್ತಾರೆ. ಭಜರಂಗ ದಳದ ಪ್ರಮೋದ ಮುತಾಲಿಕರಂತವರು ಭಾಷಣ ಮಾಡಿ ಹಿಂತಿರುಗಿ ಹೋಗುವುದರೊಳಗಾಗಿ ಗಲಭೆಗಳು ಆರಂಭವಾಗುತ್ತದೆ. ಇವರ ಸಭೆಗಳಲ್ಲಿ ಭಾಗವಹಿಸುವ ಅನಿಯಂತ್ರಿತ ಜನಜಂಗುಳಿ ವಾಪಸ್ ಹೋಗುವಾಗ ದಾರಿಯಲ್ಲಿ ಸಿಕ್ಕ ಅಲ್ಪಸಂಖ್ಯಾತರ ಮೇಲೆ ಹಲ್ಲೆ ಮಾಡುತ್ತಾರೆ; ಅವರ ಅಂಗಡಿಗಳನ್ನು ಲೂಟಿ ಮಾಡುತ್ತಾರೆ. ತಾವೇ ಕೆಲವರು ಕಲ್ಲು ತೂರಾಟ ಮಾಡಿ ಇನ್ನೊಂದು ಕೋಮಿನವರು ಕಲ್ಲು ತೂರಾಟ ಮಾಡಿದರೆಂದು ಸುದ್ದಿ ಹಬ್ಬಿಸಿ ಗಲಭೆಗಳನ್ನು ಪ್ರಚೋದಿಸುತ್ತಾರೆ.

ಇತ್ತೀಚೆಗೆ, ರಾಜ್ಯದ ಕೆಲವೆಡೆ ಅಲ್ಪಸಂಖ್ಯಾತ ಮುಸ್ಲಿಂ ಯುವಕರು ಹಿಂದುತ್ವ ಶಕ್ತಿಗಳಿಂದ ಪ್ರಚೋದನೆಗೆ ಒಳಗಾಗಿ ಗಲಭೆಗಳನ್ನು ಉಂಟುಮಾಡುತ್ತಿರುವುದೂ ಕಂಡುಬರುತ್ತಿದೆ. ಸಂಘಪರಿವಾರದವರು ಹಾಕಿದ ಬಾವುಟ ಬ್ಯಾನರುಗಳನ್ನು ಕಿತ್ತು ಹಾಕುವುದು, ಪ್ರಚೋದನಾಕಾರಿ ಕರಪತ್ರಗಳನ್ನು ಮುದ್ರಿಸಿ ಹಂಚುವುದು, ಹಿಂದೂ ಸಮಾವೇಶಗಳಲ್ಲಿ ಭಾಗವಹಿಸಿ ಹಿಂತಿರುಗುವವರ ಮೇಲೆ ದಾಳಿ ಮಾಡುವುದು, ಹಿಂದೂಗಳ ಸಭೆಗಳಲ್ಲಿ ನುಗ್ಗಿ ದಾಂಧಲೆ ಮಾಡುವುದು ಇತ್ಯಾದಿ ಅಹಿತಕರ ವರ್ತನೆಗಳು ಅಲ್ಲಲ್ಲಿ ಕಂಡುಬರುತ್ತಿವೆ. ಹಿಂದೂ ಮತೀಯವಾದದಷ್ಟೇ ಅಲ್ಪಸಂಖ್ಯಾತ ಮತೀಯವಾದವೂ ಅಪಾಯಕಾರಿಯಾಗಿದೆ ಎಂದು ತಿಳಿದವರಿಗೆ ಈ ಬೆಳವಣಿಗೆಗಳು ಆತಂಕವನ್ನು ಉಂಟು ಮಾಡುತ್ತವೆ.

ಇತ್ತೀಚೆಗೆ ಕುಂದಾಪುರ ತಾಲ್ಲೂಕಿನ ಕಂಡ್ಲೂರಿನಲ್ಲಿ ಹಿಂದೂ ಸಮಾವೇಶದ ಅಂಗವಾಗಿ ಭಜರಂಗ ದಳದವರು ಹಾಕಿದ್ದ ಬ್ಯಾನರುಗಳನ್ನು ಕೆಲವು ಮುಸ್ಲಿಂ ಯುವಕರು ಕಿತ್ತು ಹಾಕಿದ್ದರು. ಪ್ರಕರಣದ ಕುರಿತು ಪೊಲೀಸರಿಗೆ ದೂರು ನೀಡಲು ಹೋದವರ ಮೇಲೆ ಹಲ್ಲೆ ಮಾಡಲಾಯಿತಲ್ಲದೆ ಕೆಲವು ಮನೆಗಳಿಗೆ, ವಾಹನಗಳಿಗೆ ಹಾನಿಯನ್ನುಂಟು ಮಾಡಲಾಯಿತು.

ಯಲ್ಲಾಪುರ ತಾಲೂಕಿನ ಕಿರವತ್ತಿಯಲ್ಲಿ ಇತ್ತೀಚಿಗೆ ನಡೆದ ಹಿಂದೂ ಸಮಾಜೋತ್ಸವದಲ್ಲಿ ಪ್ರಮೋದ ಮುತಾಲಿಕ್ ಎಂದಿನಂತೆ ಮುಸಲ್ಮಾನರ ವಿರುದ್ಧ ಪ್ರಚೋದನಾತ್ಮಕವಾಗಿ ಮಾತನಾಡುತ್ತಿದ್ದರು. ದೂರ ನಿಂತು ಭಾಷಣ ಕೇಳುತ್ತಿದ್ದ ಮುಸ್ಲಿಂ ಯುವಕರ ಗುಂಪು ಮುತಾಲಿಕನ ಮಾತುಗಳಿಂದ ಪ್ರಚೋದಿತರಾಗಿ, ಪ್ರತಿಯಾಗಿ ಘೋಷಣೆ ಹಾಕುತ್ತಾ ಸಭಾಸ್ಥಳದತ್ತ ನುಗ್ಗಿದರು. ಪೊಲೀಸರು ಲಾಠಿ ಪ್ರಹಾರ ಮಾಡಿ ಅವರನ್ನು ಚದುರಿಸಿದರು. ಇದರೊಂದಿಗೆ ನಡೆದ ಕಲ್ಲು ತೂರಾಟದಿಂದ ಅಂಗಡಿಗಳು ವಾಹನಗಳು ಹಾನಿಗೊಳಗಾದವು.

ವಿಜಾಪುರದಲ್ಲಿರುವ ಐತಿಹಾಸಿಕ ಮುಸ್ಲಿಂ ಸ್ಮಾರಕಗಳ ಅತಿಕ್ರಮಣವನ್ನು ತಡೆಯುವ ನೆಪದಲ್ಲಿ ಗಲಭೆಯೆಬ್ಬಿಸಲು ಇತ್ತೀಚೆಗೆ ಪ್ರಯತ್ನಿಸಲಾಯಿತು. ಪ್ರತಿಭಟನಾ ಸಭೆಯಲ್ಲಿ ಪ್ರಮೋದ ಮುತಾಲಿಕ್ ಪ್ರಚೋದನಾಕಾರಿ ಭಾಷಣ ಮಾಡಿದರು. ಸಭೆ ವಿಸರ್ಜನೆಯಾಗುವಾಗ ಕಲ್ಲು ತೂರಾಟ ಆರಂಭವಾಯಿತು. ಹಲವಾರು ಅಂಗಡಿ, ವಾಹನಗಳು ಜಖಂಗೊಂಡವು. ಕಲ್ಲು ತೂರಾಟದಲ್ಲಿ ನಿರತರಾದವರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿದರು.

ಒಂದೆರಡು ದಿನ ಮೊದಲು ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ ಇದೇ ರೀತಿಯ ಗಲಭೆ ನಡೆಯಿತು. ಪ್ರಚೋದನಾಕಾರಿ ಭಾಷಣಗಳಿಗೆ ಕುಖ್ಯಾತರಾದ ದುರ್ಗಾವಾಹಿನಿಯ ಅಧ್ಯಕ್ಷೆ ಸಾಧ್ವಿ ರಿತಾಂಬರಿ ಹಿಂದೂ ಸಮಾಜೋತ್ಸವ ದಲ್ಲಿ ಭಾಗವಹಿಸಿ ಪ್ರಚೋದನಾಕಾರಿ ಭಾಷಣ ಮಾಡಿದ್ದರು. ಕಾರ್ಯಕ್ರಮ ಮುಗಿಸಿ ಹಿಂತಿರುಗುವಾಗ ಅವರು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಕಲ್ಲು ತೂರಾಟ ನಡೆದು ಅವರು ಗಾಯಗೊಂಡರು ಎಂದು ವರದಿಯಾಗಿದೆ. ಪ್ರತಿಯಾಗಿ ನಗರದಲ್ಲಿ ಎರಡು ಮೂರು ದಿನಗಳವರೆಗೂ ಗಲಭೆ ಮುಂದುವರೆದಿದೆ. ಜಮಖಂಡಿ ಘಟನೆಗೆ ಸಂಬಂಧಿಸಿದಂತೆ ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗ ದಳ ನೀಡಿದ ಬಂದ್ ಕರೆ ರಾಜ್ಯದ ಇತರ ಕಡೆ ಯವುದೇ ಪರಿಣಾಮ ಬೀರದಿದ್ದರು, ಬಾಗಲಕೋಟೆ, ಜಮಖಂಡಿ, ಬನಹಟ್ಟಿ, ಮುಧೋಳ್, ಲೋಕಾ ಪುರ, ಮೊದಲಾದ ನಗರದಲ್ಲಿ ಹಿಂಸಾಚಾರ ನಡೆದಿದೆ.

ಕುಷ್ಟಗಿ ತಾಲೂಕಿನ ಹನುಮಸಾಗರದಲ್ಲಿ ದಲಿತ ಮಹಿಳೆಯೊಬ್ಬಳ ಮೇಲೆ ಮುಸಲ್ಮಾನನೊಬ್ಬ ಅತ್ಯಾಚಾರ ಮಾಡಿದ್ದಾನೆ ಎಂದು ಆರೋಪಿಸಿ ದಲಿತರನ್ನು ಗ್ರಾಮದ ಮುಸಲ್ಮಾನರ ವಿರುದ್ಧ ಎತ್ತಿ ಕಟ್ಟುವ ಪ್ರಯತ್ನವೊಂದನ್ನು ಸ್ಥಳೀಯ ಭಜರಂಗಿಗಳು ಮಾಡಿದ್ದಾರೆ. ಇದರ ಜೊತೆಯಲ್ಲಿ ಅನ್ನದಾನೇಶ್ವರ ಮಠದ ಹತ್ತಿರವೇ ಇರುವ ಮಸೀದಿ ಪಕ್ಕದಲ್ಲಿ ಕಟ್ಟಲಾಗಿದ್ದ ಶೌಚಾಲಯವನ್ನು ಕಿತ್ತುಹಾಕಬೇಕೆಂದು ಒತ್ತಾಯಿಸಿ ಗಲಭೆ ಮಾಡುವುದು ಭಜರಂಗದಳದವರ ಉದ್ದೇಶವಾಗಿತ್ತು. ಮುಸಲ್ಮಾನರು ವಿವಾದಕ್ಕೆ ಕಾರಣವಾದ ಶೌಚಾಲಯವನ್ನು ಕೆಡವಿದ್ದಾರೆ.



ಪರಿಸ್ಥಿತಿ ಸಧ್ಯಕ್ಕೆ ಶಾಂತವಾಗಿದೆ.

ಕ್ಷುಲ್ಲಕ ಕಾರಣಗಳನ್ನು ಮುಂದೆಮಾಡಿ ಗಲಭೆಗಳನ್ನು ಹಬ್ಬಿಸುವ ಪ್ರಯತ್ನ ಹೆಚ್ಚಾಗುತ್ತಿದೆ. ಹಿಂದುಗಳು ಮತ್ತು ಮುಸಲ್ಮಾನರು ಪರಸ್ಪರ ಪ್ರಚೋದಿತರಾಗುತ್ತಿದ್ದಾರೆ. ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಪರಿಸ್ಥಿತಿ ಹದಗೆಡುವ ಅಪಾಯವಿದೆ. ಸಾತ್ವಿಕ ಹಿಂದುಗಳು ಮುತಾಲಿಕ್ ಅಂತಹ ವ್ಯಕ್ತಿಗಳನ್ನು ಹಿಂಬಾಲಿಸಿ ಹೋಗಬಾರದು, ಶಾಂತಿಪ್ರಿಯ ಮುಸಲ್ಮಾನರು ಮತ್ತು ಇತರ ಅಲ್ಪಸಂಖ್ಯಾತರು ಪ್ರಚೋದನೆಗೆ ಒಳಗಾಗಿ ಕುರುಡರಾಗಬಾರದು. ದೇಶದ ಐಕ್ಯತೆಗೆ ಹಿಂದೂ ಕೋಮುವಾದ ಎಷ್ಟು ಅಪಾಯಕಾರಿಯೋ ಅಷ್ಟೇ ಅಪಾಯಕಾರಿ ಅಲ್ಪಸಂಖ್ಯಾತ ಕೋಮುವಾದವೂ ಆಗಿದೆ.

ಪ್ರಜಾಸಮಾಧಿ

ಗೋಪಾಲಗೌಡರಿಗೆ ಪತ್ರವಿದು ಬಂದು
ನೋಡಿದ್ರೆ ಒಂದೊಮ್ಮೆ ನೀವಿಲ್ಲಿ ಬಂದು
ನಿಮ್ಮವರು ಕೆಲವು ಜನ ಅಧಿಕಾರ ಗುದ್ದಿ
ಎದಿಯುವುದಕೆ ಮಾಡಿದರು ಪ್ರಜಾಸಮಾಧಿ

– ವಿಡಂಬಾರಿ

ನೀತಿಸಂಹಿತೆ ಜಾರಿಗೆ ಬಿಗಿ ಕ್ರಮ ವಹಿಸಿ

ಚುನಾವಣಾ ಆಯೋಗದ ಜೊತೆ ಸಿಪಿಐ(ಎಂ) ಚರ್ಚೆ

ಕಳೆದೆರಡು ವರುಷಗಳಲ್ಲೇ ಸುಮಾರು 50 ಕ್ಕೂ ಹೆಚ್ಚಿನ ವಿಧಾನಸಭಾ ಕ್ಷೇತ್ರಗಳಲ್ಲಿ ಯೋಜಿತ ಕೋಮುಗಲಭೆಗಳು ಸಂಭವಿಸಿರುವ ಹಿನ್ನೆಲೆಯಲ್ಲಿ ಅಂತಹ ಅತ್ಯಂತ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಭದ್ರತಾ ಕ್ರಮ ವಹಿಸಿ ನಾಗರಿಕರಿಗೆ ಮುಕ್ತ ಮತದಾನಕ್ಕೆ ಅವಕಾಶ ಕಲ್ಪಿಸುವಂತೆ ಅಗತ್ಯ ಕ್ರಮ ವಹಿಸಬೇಕೆಂದು ಇಂದು ರಾಜ್ಯಕ್ಕೆ ಭೇಟಿ ನೀಡಿರುವ ಚುನಾವಣಾ ಆಯೋಗಕ್ಕೆ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ನಿಯೋಗವು ಮನವಿ ಮಾಡಿತು. ವಿಶೇಷವಾಗಿ ಕರಾವಳಿ, ಪಶ್ಚಿಮ ಘಟ್ಟ ಪ್ರದೇಶಗಳು ಮತ್ತು ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಕಟ್ಟೆಚ್ಚರದ ಅಗತ್ಯವಿದೆ. ಇಲ್ಲಿ ಹಿಂದೆ ಕೋಮುಗಲಭೆಗಳು ಸಂಭವಿಸಿದಾಗ ಕೆಲವೆಡೆ ಆಡಳಿತ ಯಂತ್ರದ ಪ್ರಮುಖ ಪೊಲೀಸ್ ಅಧಿಕಾರಿಗಳು ಇಂತಹ ಗಲಭೆಗಳನ್ನು ತಡೆಯಲು ಕಾನೂನುಬದ್ಧ ನಿಷ್ಠುರ ಕ್ರಮವಹಿಸದೇ, ಕೆಲವೆಡೆ ಗಲಭೆಗಳಿಗೆ ಪರೋಕ್ಷ ಬೆಂಬಲ ನೀಡಿರುವ ನಿದರ್ಶನಗಳಿರುವುದರಿಂದ ಚುನಾವಣಾ ಆಯೋಗವು ಇದನ್ನು ಗಂಭೀರವಾಗಿ ಪರಿಗಣಿಸಿ ಧರ್ಮನಿರಪೇಕ್ಷತೆಗೆ ಹಾಗೂ ಕಾನೂನಿನ ಅನುಷ್ಠಾನಕ್ಕೆ ಬದ್ಧರಾದಂತಹ ಅಧಿಕಾರಿಗಳನ್ನು ನೇಮಿಸಬೇಕೆಂದು ಸಿಪಿಐ(ಎಂ) ಕೋರಿತು.

ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರುಗಳಾದ ನಿತ್ಯಾನಂದಸ್ವಾಮಿ ಮತ್ತು ಎಸ್.ವೈ.ಗುರುಶಾಂತ್‌ರವರಿದ್ದ ನಿಯೋಗವು ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿತು.

ಈ ಚುನಾವಣೆಯಲ್ಲಿ ವಿಪರೀತವಾದ ಹಣ ಹೊಳೆಯೇ ಹರಿಯುವ ಎಲ್ಲಾ ಸಾಧ್ಯತೆಗಳು ಕಾಣುತ್ತಿದ್ದು ಈಗಾಗಲೇ ಎಲೆಕ್ಟ್ರಾನಿಕ್ ಮತ್ತು ಇತರ ಮಾಧ್ಯಮಗಳಲ್ಲಿ ಅದ್ದೂರಿಯ ಜಾಹಿರಾತು ಪ್ರಕಟಣೆ ನಡೆದಿದೆ. ಚುನಾವಣಾ ನೀತಿಸಂಹಿತೆ ಘೋಷಣೆಯಾದ ಬಳಿಕವೂ ಕೆಲವು ಚಾನಲ್‌ಗಳಲ್ಲಿ ಕೆಲವು ಪಕ್ಷಗಳ ಜಾಹೀರಾತು ಪ್ರಸಾರ ಮುಂದುವರಿದಿದೆ. ಈಚೆಗಿನ ಉಪ ಚುನಾವಣೆಗಳಲ್ಲಿಯೂ ವಿಪರೀತ ಬೆಲೆಬಾಳುವ ಉಡುಗೊರೆಗಳನ್ನು ಮತದಾರರಿಗೆ ನೀಡಿ ಆಮಿಷ ಒಡ್ಡಲಾಗಿತ್ತು. ಮುಂಬರುವ ಚುನಾವಣೆಯಲ್ಲಿ ಇದು ತಾರಕಕ್ಕೇರಲಿದ್ದು ಅದನ್ನು ತಡೆಗಟ್ಟಲು ಅತ್ಯಂತ ಬಿಗಿ ಕ್ರಮ ವಹಿಸಬೇಕು. ಅಭ್ಯರ್ಥಿಯ ಖರ್ಚುವೆಚ್ಚಗಳ ಕುರಿತಾದ ನೀತಿ ಸಂಹಿತೆಯನ್ನು ನಿಷ್ಠುರವಾಗಿ ಜಾರಿಗೊಳಿಸಬೇಕು. 1994 ಚುನಾವಣೆಯಲ್ಲಿ ಕೈಗೊಳ್ಳಲಾದಂತಹ ಕ್ರಮಗಳು ನಂತರ ಸಡಿಲಗೊಂಡಿದ್ದು, ಈಗ ಹಿಂದಿನಂತೆ ಕ್ರಮವಹಿಸಿ ಖರ್ಚುವೆಚ್ಚಗಳ ಮೇಲೆ ನಿಗಾ ಇಡಬೇಕೆಂದೂ ಚುನಾವಣಾ ಆಯೋಗಕ್ಕೆ ಸಿಪಿಐ(ಎಂ) ಆಗ್ರಹಿಸಿತು.

ಚುನಾವಣಾ ನೀತಿ ಸಂಹಿತೆಯನ್ನು ಗ್ರಾಮೀಣ ಜನರಿಗೆ ತಿಳಿಯುವಂತೆ ಪೋಸ್ಟರ್ಸ್, ಕರಪತ್ರ ಗಳ ಮೂಲಕ ಸ್ಥಳೀಯ ಭಾಷೆಯಲ್ಲಿ ಪ್ರಕಟಿಸಿ ನಾಗರಿಕರಲ್ಲಿ ಎಚ್ಚರವನ್ನು ಬೆಳೆಸಬೇಕೆಂದು ಸಲಹೆ ನೀಡಲಾಯಿತು. ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಯಾದಾಗ ದೂರುಗಳನ್ನು ಪರಿಣಾಮಕಾರಿಯಾಗಿ ಸ್ವೀಕರಿಸಲು ಹಾಗೂ ಕ್ಷಿಪ್ರವಾಗಿ ಕ್ರಮ ಜರುಗಿಸುವಂತಾಗಲು ಜಿಲ್ಲಾ, ರಾಜ್ಯ ಹಾಗೂ ಕೇಂದ್ರ ಮಟ್ಟದಲ್ಲಿ 'ನಿಯಂತ್ರಣಾ ಕೊಠಡಿ'ಗಳನ್ನು ಸ್ಥಾಪಿಸಿ, ಅತ್ಯಧಿಕ ಫ್ಯಾಕ್ಸ್, ಫೋನ್ ಲೈನ್‌ಗಳು, ಇ-ಮೇಲ್ ಮುಂತಾದ ಸಂಪರ್ಕ ಸಾಧನಗಳ ಮೂಲಕ ಸನ್ನದ್ಧಗೊಳಿಸುವಂತೆ ಸಿಪಿಐ(ಎಂ) ನಿಯೋಗ ಕೋರಿತು.

ಎಲ್ಲ ಮತದಾರರಿಗೆ ಗುರುತಿನ ಚೀಟಿ ವಿತರಣೆ ಆಗದಿರುವುದರಿಂದ ಮತದಾರರ ಯಾದಿಯಲ್ಲಿ ಹೆಸರು ದಾಖಲಾದ ಎಲ್ಲಾ ಮತದಾರರಿಗೆ ಮತದಾನಕ್ಕೆ ಅವಕಾಶ ನೀಡಬೇಕೆಂದು ಸಿಪಿಐ(ಎಂ) ಒತ್ತಾಯಿಸಿತು.

ತನ್ನ ಕಾರ್ಯಕ್ರಮವನ್ನು ಸಮಕಾಲಿಕಗೊಳಿಸಿದ SFI ವಿಶೇಷ ಸಮ್ಮೇಳನ

ಫೆಬ್ರವರಿ 7ರಿಂದ 10, ರವರೆಗೆ 4 ದಿನಗಳ ಕಾಲ ಎಸ್ಸೆಫ್ಫೈನ ಅಖಿಲ ಭಾರತ ವಿಶೇಷ ಸಮ್ಮೇಳನವು ಅಸ್ಸಾಂ ರಾಜ್ಯದ ಗುವಾಹಾಟಿಯಲ್ಲಿ ನಡೆಯಿತು. ದೇಶದ ವಿವಿಧ ರಾಜ್ಯಗಳಿಂದ ಬಂದ 317 ಪ್ರತಿನಿಧಿಗಳು ಈ ಚಾರಿತ್ರಿಕ ವಿಶೇಷ ಸಮ್ಮೇಳನದಲ್ಲಿ ಪಾಲ್ಗೊಂಡು ಎಸ್ಸೆಫ್ಫೈನ 'ಸಂವಿಧಾನ ಮತ್ತು ಕಾರ್ಯಕ್ರಮ'ದ ಬಗೆಗೆ ಗಂಭೀರವಾಗಿಚರ್ಚೆ ನಡೆಸಿ, ಅದನ್ನು 'ಸಮಕಾಲೀನ'ಗೊಳಿಸಲಾಯಿತು.

ಎಸ್ಸೆಫ್ಫೈನ ಸಂವಿಧಾನ ಕಾರ್ಯಕ್ರಮ ಒಂದು ಸಾಮಾನ್ಯ ದಾಖಲೆಯಲ್ಲ. ಇಡೀ ದೇಶದ ವಿದ್ಯಾರ್ಥಿ ಚಳುವಳಿಗೆ ಮಾರ್ಗದರ್ಶಿಯಾದ ಒಂದು ಅಮೂಲ್ಯ ದಾಖಲೆ. ಇದುವರೆಗೆ ಅಸ್ತಿತ್ವದಲ್ಲಿದ್ದ 'ಕಾರ್ಯಕ್ರಮ' ಎಸ್ಸೆಫ್ಫೈ ಸಂಘಟನೆ ಸ್ಥಾಪನೆಯಾದಾಗ, ಡಿಸೆಂಬರ್30, 1970ರಂದು ಅಂಗೀಕರಿಸಿದ್ದ ದಾಖಲೆ. ಕಳೆದ ಸುಮಾರು 3 ದಶಕಗಳಿಗೂ ಮೀರಿದ ಸಂಘರ್ಷ ಅವಧಿಯಲ್ಲಿ ರಾಷ್ಟ್ರದ ಹಾಗೂ ಅಂತಾರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯಲ್ಲಿ ಎಷ್ಟೆಷ್ಟೋ ಬದಲಾವಣೆಗಳು ಜರುಗಿವೆ. ರಾಷ್ಟ್ರೀಯ ಜಾಗತಿಕ ರಾಜಕೀಯ ಆರ್ಥಿಕ ಬೆಳವಣಿಗೆಗಳು ಹಾಗು ಶಿಕ್ಷಣ ರಂಗದ ಮೇಲೆ ಸಹ ಗಾಢವಾದ ಪ್ರಭಾವ ಬೀರಿದೆ.

ಇಂತಹ ಸನ್ನಿವೇಶದಲ್ಲಿ 2000ದಲ್ಲಿ ಚೆನ್ನೈನಲ್ಲಿ ಸೇರಿದ ಎಸ್ಸೆಫ್ಫೈನ 10ನೇ ಅಖಿಲ ಭಾರತ ಸಮ್ಮೇಳನವು ಸಂವಿಧಾನ ಕಾರ್ಯಕ್ರಮವನ್ನು ಸಮಕಾಲೀನಗೊಳಿಸುವ ಕುರಿತು ತೀರ್ಮಾನಿಸಿತ್ತು.

ಭಾರತ ದೇಶದ ಶಿಕ್ಷಣ ವ್ಯವಸ್ಥೆಯ ಕುರಿತು ಹಾಗೂ ಸಾರ್ವಜನಿಕ ವ್ಯವಸ್ಥೆಯ ಕುರಿತು ಎಸ್ಸೆಫ್ಫೈನ ವಿಶ್ಲೇಷಣೆ ಮೂಲಭೂತ ತಿಳುವಳಿಕೆಯು ಅತ್ಯಂತ ಸಮರ್ಪಕವಾಗಿದೆ ಎಂದು ಚೆನ್ನೈ ಅಖಿಲ ಭಾರತ ಸಮ್ಮೇಳನ ನಿಶ್ಚಯಿಸಿತ್ತು ಮತ್ತು ಪ್ರಸಕ್ತ ಸಂಪಿಧಾನವನ್ನು ಸಮಕಾಲೀನಗೊಳಿಸಲು ನಿರ್ದೇಶನ ಮಾಡಿತ್ತು. ಇದರ ಆಧಾರದಲ್ಲಿ ಕೇಂದ್ರ ಕಾರ್ಯಕಾರಿ ಸಮಿತಿಯು 'ಕರಡು ರಚನಾ ಸಮಿತಿ'ಯೊಂದನ್ನು ರಚಿಸಿತು. (ಅಂದು ಎಸ್ಸೆಫ್ಫೈ ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷರು, ಅಖಿಲ ಭಾರತ ಉಪಾಧ್ಯಕ್ಷರೂ ಆಗಿದ್ದ ಕೆ.ಎನ್. ಉಮೇಶ್ ಸಹ ಸಮಿತಿಯಲ್ಲಿದ್ದರು). ಕರಡು ಸಮಿತಿ ರಚಿಸಿದ ನೂತನ ಸಂವಿಧಾನ ಕಾರ್ಯಕ್ರಮವನ್ನು ಸಿಇಸಿ ಚರ್ಚಿಸಿ, ಫೆಬ್ರವರಿ 2003ರಲ್ಲಿ ಕೇರಳದ ಕೋಜಿಕೋಡ್‌ನಲ್ಲಿ ನಡೆದ 11ನೇ ಅಖಿಲ ಭಾರತ ಸಮ್ಮೇಳನದ ಮುಂದಿಟ್ಟಿತ್ತು.

ಕೆಲವು ಸೂಕ್ತ ತಿದ್ದುಪಡಿಗಳನ್ನು ಅಂಗೀಕರಿಸಿದ ಸಮ್ಮೇಳನವು ರಾಷ್ಟ್ರದಾದ್ಯಂತ ಎಸ್ಸೆಫ್ಫೈನ ಸಾಮಾನ್ಯ ಸದಸ್ಯರ ಹಂತದಿಂದ, ಘಟಕ ಪ್ರದೇಶ ಸಮಿತಿ, ಹೀಗೆ ಮೇಲ್ಸಮಿತಿಗಳವರೆಗೆ ಚರ್ಚಿಸಲು 'ಕರಡು ಸಂವಿಧಾನ - ಕಾರ್ಯಕ್ರಮ'ವನ್ನು ಅಂದು ಅಂಗೀಕರಿಸಿತು.

ಫೆಬ್ರವರಿ 2003ರಿಂದ ಫೆಬ್ರವರಿ 2004ರ ನಡುವಿನ ಒಂದು ವರ್ಷದ ಅವಧಿಯಲ್ಲಿ ಸಾವಿರಾರು ಎಸ್ಸೆಫ್ಫೈ ಘಟಕಗಳು ಅಸಂಖ್ಯ ಎಸ್ಸೆಫ್ಫೈನ ಸದಸ್ಯರು, ನೂರಾರು ತಾಲ್ಲೂಕು, ಜಿಲ್ಲಾ ಸಮಿತಿಗಳು ಹತ್ತಾರು ರಾಜ್ಯ ಸಮಿತಿಗಳು ಕೇಂದ್ರ ಕಾರ್ಯಕಾರಿ ಸಮಿತಿ ಈ ಕಾರ್ಯಕ್ರಮದ ಕುರಿತು ಗಂಭಿರವಾಗಿ ಚರ್ಚಿಸಿವೆ. ಅಂತಿಮವಾಗಿ 4 ದಿನಗಳ ಸಮ್ಮೇಳನವು ಒಟ್ಟಾರೆ 86 ತಿದ್ದುಪಡಿಗಳನ್ನು ಅಂಗೀಕರಿಸಿ ಕಾರ್ಯಕ್ರಮವನ್ನು ಸಮ್ಮೇಳನ ಸಮಕಾಲೀನಗೊಳಿಸಿತು.

ಹಿಂದಿನ ಕಾರ್ಯಕ್ರಮದಲ್ಲಿ 'ನಮ್ಮ ಕಣ್ಣೋಟ' ಹಾಗೂ 'ಗುರಿ ಮತ್ತು ಉದ್ದೇಶಗಳು' ಎಂಬ ಎರಡು ಭಾಗಗಳಿತ್ತು. 1936ರಲ್ಲಿ ಸ್ಥಾಪಿತವಾಗಿ ಸಾಮ್ರಾಜ್ಯಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟದಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿದ

ಮಹಾನ್ ವಿದ್ಯಾರ್ಥಿ ಆಂದೋಲನ ಕಟ್ಟುವ ಸನ್ನದ್ಧತೆ

ಎಸ್ಸೆಫ್ಫೈನ ಹಿಂದಿನ ಪರಂಪರೆ ಕುರಿತು, ಸ್ವಾತಂತ್ರ್ಯ ನಂತರದಲ್ಲಿ ಪರಿಷ್ಕರಣವಾದಿ ಮುಖಂಡತ್ವದ ವಿರುದ್ಧ ಸೈದ್ಧಾಂತಿಕ ಹೋರಾಟ,1970ರಲ್ಲಿ ಎಸ್ಸೆಫ್ಫೈ ಸ್ಥಾಪನೆಯಾಗಬೇಕಾದ ಚಾರಿತ್ರಿಕ ಅನಿವಾರ್ಯತೆ ಶಿಕ್ಷಣದ ಹಕ್ಕಿನ ರಕ್ಷಣೆಗಾಗಿ ಎಸ್ಸೆಫ್ಫೈ ನಡೆಸಿದ ಅವಿರತ ಹೋರಾಟ 70 ದಶಕದಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧದ ಸಂಘರ್ಷ, 80 ದಶಕದ ಮಂಡಲ್ ವಿರೋಧಿ ಚಳುವಳಿ ಸೃಷ್ಟಿಸಿದ ಗಂಭೀರ ಸವಾಲನ್ನು ಎದುರಿಸಿದ ಪರಿ, 80ರ ದಶಕದಲ್ಲಿ ತೀವ್ರಗೊಂಡ ಶಿಕ್ಷಣ ವ್ಯಾಪಾರೀಕರಣ 90ರ ದಶಕದಲ್ಲಿ ಜಾರಿಗೊಂಡ ಜಾಗತೀಕರಣದ ವಿನಾಶಕಾರಿ ಪರಿಣಾಮದ ವಿರುದ್ಧ ಶಿಕ್ಷಣ ಕೋಮುವಾದೀಕರಣದ ಅಪಾಯಗಳ ವಿರುದ್ಧ ಎಸ್ಸೆಫ್ಫೈ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿರೋಧಾತ್ಮಕ ಚಳುವಳಿ ಮುಂತಾದ ವಿಷಯಗಳನ್ನೊಳಗೊಂಡ 'ನಮ್ಮ ಪರಂಪರೆ' ಭಾಗವನ್ನು ಕಾರ್ಯಕ್ರಮದ ಮೊದಲ ಭಾಗವನ್ನು ಹೊಸ ದಾಖಲೆಯಲ್ಲಿ ಸೇರ್ಪಡೆಗೊಳಿಸಲಾಗಿದೆ.





ಭಾರತದಲ್ಲಿ ತಲೆ ಎತ್ತಿರುವ ಕೋಮುವಾದದ ಗಂಭೀರ ಅಪಾಯ ಶಿಕ್ಷಣ ರಂಗ ಮಾತ್ರವಲ್ಲದೇ ಸಮಗ್ರ ಸಮಾಜದ ಮೇಲೆ ಧಾಳಿ ನಡೆಸುತ್ತಿರುವ ಜಾಗತೀಕರಣ. ಇಡೀ ಜಗತ್ತಿನ ಮೇಲೆ ತನ್ನ ನಗ್ನ ಆಕ್ರಮಣವನ್ನು ತೀವ್ರಗೊಳಿಸಿರುವ ಅಮೇರಿಕದ ನೇತೃತ್ವದಲ್ಲಿ ಸಾಮ್ರಾಜ್ಯಶಾಹಿಯ ವಿರಾಟ ಸ್ವರೂಪ ಜಾಗತೀಕರಣಗೊಳ್ಳುತ್ತಿರುವ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ.

ಬಿಕ್ಕಟ್ಟು ಆಳಗೊಳ್ಳುತ್ತಿರುವ ಭಾರತ ಇಂದಿನ ಪರಿಸ್ಥಿತಿಯಲ್ಲಿ ದಲಿತ, ಬುಡಕಟ್ಟು ಜನರ ಬದುಕಿನ ಹಿತಾಸಕ್ತಿಗಳ ರಕ್ಷಣೆಯ ಪ್ರಶ್ನೆ ಹೊಸ ಸಂಕೀರ್ಣ ಸ್ವರೂಪ ಪಡೆದಿರುವ ಲಿಂಗಾಧಾರಿತ ತಾರತಮ್ಯ, ಅಸಮಾನತೆಯ ಪ್ರಶ್ನೆ, ಪರಿಸರ ಕಾಳಜಿಯ ಪ್ರಶ್ನೆ, ಇತ್ಯಾದಿ ಹಲವು ವಿಚಾರಗಳನ್ನು ಕುರಿತು ಎಸ್ಸೆಫ್ಫೈನ ಸ್ಪಷ್ಟ ಧೋರಣೆ ಹೊಸ ಕಾರ್ಯಕ್ರಮದಲ್ಲಿ ಸೇರ್ಪಡೆಗೊಂಡಿದೆ.

ನಿರ್ಧಿಷ್ಟವಾಗಿ ಶಿಕ್ಷಣ ರಂಗದಲ್ಲಿ ಹೆಚ್ಚುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಪಾತ್ರ ಮತ್ತು ಅವುಗಳ ಮೇಲಿನ ಸಾಮಾಜಿಕ ನಿಯಂತ್ರಣ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳ ಹಕ್ಕು ಸಾಮಾಜಿಕ ಜವಾಬ್ದಾರಿ ಈ ಕುರಿತು ಎಸ್ಸೆಫ್ಫೈನ ಧೋರಣೆಯನ್ನು ಹೊಸ ಕಾರ್ಯಕ್ರಮವು ಮತ್ತಷ್ಟು ಸ್ಪಷ್ಟ ಪಡಿಸಿದೆ.

"ಸ್ವಾತಂತ್ರ್ಯ- ಪ್ರಜಾಪ್ರಭುತ್ವ ಸಮಾಜವಾದ" ಎಸ್ಸೆಫ್ಫೈನ ಮೂಲ ಘೋಷಣೆಗಳಲ್ಲಿ 'ಸಮಾಜವಾದ'ವನ್ನು ಕೈ ಬಿಡಲಾಗುವುದು ಎಂದು ಕೋಜಿಕೋಡ್ ಸಮ್ಮೇಳನದ ಸಂದರ್ಭದಲ್ಲಿ ಹುಯಿಲೆಬ್ಬಿಸಿದ ಮಾಧ್ಯಮದ ಕೆಲ ವಿಭಾಗಗಳಿಗೆ ಈ ಉನ್ನತ ಮೌಲ್ಯಗಳು ಈಗಲೂ ಎಸ್ಸೆಫ್ಫೈನ ಮೂಲಭೂತ ಘೋಷಣೆ ಮತ್ತು ಸ್ಫೂರ್ತಿಯಾಗಿ ಮುಂದುವರಿಸಿರುವುದರಿಂದ ಸಾಕಷ್ಟು ನಿರಾಶೆಯಾಗಿದೆ.

ಈ ಚಾರಿತ್ರಿಕ ಸಮ್ಮೇಳನ ಮತ್ತೊಂದು ಕಾರಣಕ್ಕಾಗಿ ರಾಷ್ಟ್ರದ ಗಮನ ಸೆಳೆಯಿತು. ಪ್ರತ್ಯೇಕತವಾದಿ ಭಯೋತ್ಪಾದಕ ಶಕ್ತಿಗಳ ಆತಂಕಕಾರಿ ಚಟುವಟಿಕೆ ನಿರಂತರವಾಗಿ ನಡೆಯುತ್ತಿರುವಾಗಲೂ ಈಶಾನ್ಯ ಭಾರತದ ಅಸ್ಸಾಂ ರಾಜ್ಯದಲ್ಲಿ ನಡೆಸುವ ಧೀಮಂತಿಕೆ ಪ್ರದರ್ಶಿಸಿತು.

ಫೆಬ್ರವರಿ 7ರಂದು ಗುವಾಹಾಟಿಯ ಬೀದಿ ಬೀದಿಗಳಲ್ಲಿ ಸಹಸ್ರಾರು ವಿದ್ಯಾರ್ಥಿಗಳ ಮೆರವಣಿಗೆಯು ಸಾಗಿ, ಕೋಮುವಾದ, ಜಾಗತೀಕರಣ, ಶಿಕ್ಷಣದ ವ್ಯಾಪಾರೀಕರಣ, ಪ್ರತ್ಯೇಕತವಾದದ ವಿರುದ್ಧ ತನ್ನ ಧಿಕ್ಕಾರವನ್ನು ಸಾರಿತು. ದೇಶದ ಐಕ್ಯತೆ, ಸಾಂಸ್ಕೃತಿಕ ವೈವಿಧ್ಯತೆ, ಭಾರತ ಒಕ್ಕೂಟ ಸ್ವರೂಪದ ರಕ್ಷಣೆ, ಶಿಕ್ಷಣದ ಹಕ್ಕಿನ ರಕ್ಷಣೆಯ ಪರವಾಗಿ ತನ್ನ ಪ್ರತಿಜ್ಞೆಯನ್ನು ದೃಡಪಡಿಸಿತು. ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ, ತ್ರಿಪುರದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಮುಂತಾದವರು ಪಾಲ್ಗೊಂಡು, ಮಾತನಾಡಿದರು. ಅಖಿಲ ಭಾರತ ಅಧ್ಯಕ್ಷರಾದ ಕೆ.ಕೆ.ರಾಘೇಶ್ ಧ್ವಜಾರೋಹಣ ನೆರವೇರಿಸುವುದರೊಂದಿಗೆ ಆರಂಭವಾದ ಸಮ್ಮೇಳನವು, 'ವಿ ಶೆಲ್ ಓವರ್ ಕಂ'ಎಂಬ ಗೀತೆಯೊಂದಿಗೆ ಮುಕ್ತಾಯವಾಯಿತು. ಕರ್ನಾಟಕದಿಂದ ಮೂವರು ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರು ಸೇರಿ ಒಟ್ಟಾರೆ 11 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಸಮ್ಮೇಳನ ಸಂದರ್ಭದಲ್ಲಿ ನಡೆದ ಅಸ್ಸಾಂನ ವೈವಿಧ್ಯಮಯ ಶ್ರೀಮಂತ ಸಾಸ್ಕೃತಿಕ ಕಾರ್ಯಕ್ರಮಗಳು ಪ್ರತಿನಿಧಿಗಳ ಮನಸೂರೆಗೊಂಡವು.

ಆರ್.ರಾಮಕೃಷ್ಣ

ಐಟಿಐ ವಿದ್ಯಾರ್ಥಿಗಳ ಯಶಸ್ವಿ ಹೋರಾಟ


ಶಿಕ್ಷಣ ರಂಗದಲ್ಲಿ ಆಂತರಿಕ ಸಂಪನ್ಮೂಲ ಕ್ರೋಢಿಕರಣ ಮಾಡಬೇಕೆಂದು ಕೇಂದ್ರ-ರಾಜ್ಯ ಸರ್ಕಾರಗಳು ಎಂದೋ ತೀರ್ಮಾನಿಸಿ ಆಗಿದೆ. ಹಂತ ಹಂತವಾಗಿ ಎಲ್ಲಾ ರಂಗಗಳಲ್ಲಿ ತೀವ್ರ ಶುಲ್ಕ ಏರಿಕೆಯ ಬಿಸಿ ವಿದ್ಯಾರ್ಥಿ ಸಮುದಾಯವನ್ನು ತಟ್ಟಿದೆ. ಇದೀಗ ಐಟಿಐ ವಿದ್ಯಾರ್ಥಿಗಳ ಸರದಿ.

ಕರ್ನಾಟಕ ರಾಜ್ಯದ ಘನ ಸರ್ಕಾರವು ರಾಜ್ಯದಲ್ಲಿ ಕ್ರಮವಾಗಿ ಒಂದು ವರ್ಷ-ಎರಡು-ಮೂರು ವರ್ಷದ ಕೋರ್ಸಿನ ಐಟಿಐ ವಿದ್ಯಾರ್ಥಿಗಳು 500 - 1000 - 1500 ರೂ. 'ತರಬೇತಿ ಶುಲ್ಕ' ತೆರಬೇಕು ಎಂದು ಫರ್ಮಾನು ಹೊರಡಿಸಿತು. ಜೊತೆಗೆ 80 ರೂ. ಇದ್ದ ಪರೀಕ್ಷೆ ಶುಲ್ಕವನ್ನು 280 ರೂ.ಗಳಿಗೆ ಏರಿಸಿತು.

ಎಸ್ಸೆಫ್ಫೈ ನೇತೃತ್ವದಲ್ಲಿ ಐಟಿಐ ವಿದ್ಯಾರ್ಥಿಗಳೂ ಬೀದಿಗಿಳಿದರು. ಫೆಬ್ರವರಿ 20ರಂದು ಬೆಂಗಳೂರಿನಲ್ಲಿ, 21ರಂದು ಬೆಂಗಳೂರು, ಹಾಸನ, ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ, ಮಂಗಳೂರು, ಉಡುಪಿ ಮುಂತಾದ ಕಡೆ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಬಹುತೇಕ ಕಡು ಬಡತನ ಹಿನ್ನಲೆಯಿಂದ, ಕೆಳ, ಮಧ್ಯಮ ವರ್ಗದಿಂದಲೇ ಐಟಿಐಗೆ ವಿದ್ಯಾರ್ಥಿಗಳು ಬರುತ್ತಾರೆ. ಅಷ್ಟು ಮಾತ್ರವಲ್ಲ, ಐಟಿಐ ವಿದ್ಯಾರ್ಥಿಗಳು ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಭಿನ್ನವಾಗಿ ತರಬೇತಿ ಪಡೆಯುವ ಅವಧಿಯಲ್ಲಿ 'ಉತ್ಪಾದನೆ' ಯಲ್ಲೂ ತೊಡಗುತ್ತಾರೆ ಎಂಬ ಕನಿಷ್ಟ ಪ್ರಜ್ಞೆ ಸರಕಾರಕ್ಕೂ ಇಲ್ಲ, ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೂ ಇಲ್ಲ. 1000- 1500 ರೂ. ಶುಲ್ಕ ಕೊಡಲು ವಿದ್ಯಾರ್ಥಿಗಳಿಗೆ ತೊಂದರೆ ಎಂದು ಎಸ್ಸೆಫ್ಫೈ ನಿಯೋಗ ಹೇಳಿದರೆ, ಕಾರ್ಮಿಕ ಇಲಾಖೆ ಅಧಿಕಾರಿಯೊಬ್ಬರು ಪರಮಾಶ್ಚರ್ಯ ವ್ಯಕ್ತಪಡಿಸಿದರು. ಕೊನೆಗೆ ತಾವೇ ಕಾರ್ಮಿಕ ಇಲಾಖೆಯ ಉನ್ನತಾಧಿಕಾರಿಯಾಗಿದ್ದು ಕಾರ್ಖಾನೆಗಳಲ್ಲಿ ಕನಿಷ್ಟ ಕೂಲಿಯನ್ನೂ ನೀಡದ ಅಸಂಖ್ಯ ಕಾರ್ಖಾನೆಗಳು ಇವೆಯಲ್ಲವೇ?

ಐಟಿಐಗೆ ಬರುವ ಬಹುತೇಕ ವಿದ್ಯಾರ್ಥಿಗಳು ಬಹುತೇಕ ಇಂತಹ ಕುಟುಂಬಗಳಿಂದ ಬರುವಂತಹವರು ಎಂದು ನಿಯೋಗ ಅವರಿಗೆ ಮನವರಿಕೆ ಮಾಡಿಕೊಡಬೇಕಾಗಿ ಬಂತು!! ಎಸ್ಸೆಫ್ಫೈ ನಿಯೋಗ ಕಾರ್ಮಿಕ ಮಂತ್ರಿ ಖಮರುಲ್ ಇಸ್ಲಾಂರನ್ನು ಭೇಟಿ ಸಹ ಮಾಡಿ ಶುಲ್ಕ ವಾಪಸಾತಿಗೆ ಒತ್ತಾಯಿಸಿತು.

ವಿದ್ಯಾರ್ಥಿಗಳ ಹೋರಾಟದ ಫಲವಾಗಿ ಸರ್ಕಾರ ಎರಡು ಶುಲ್ಕ ಏರಿಕೆಯನ್ನು 'ತಾನು ಸೂಚಿಸುವವರೆಗೆ' ತಡೆ ಹಿಡಿದಿದೆ. ಅಂದರೆ ಈ ವರ್ಷ ಶುಲ್ಕ ಏರಿಕೆ ಜಾರಿಯಾಗುವುದಿಲ್ಲ, ಮುಂದಿನ ವರ್ಷ ಮತ್ತೆ ಜಾರಿ ಮಾಡಲು ಪ್ರಯತ್ನಿಸಬಹುದು. ಕಾದು ನೋಡಬೇಕಿದೆ. ವಿದ್ಯಾರ್ಥಿಗಳು ಜಾಗೃತರಾಗಿರಲು ಎಸ್ಸೆಫ್ಫೈ ಕರೆ ನೀಡಿದೆ.



ಹಾಸನ


ಅಡ್ವಾಣಿಯವರು ಆರಂಭಿಸಿರುವ 'ಭಾರತ ಉದಯ ಯಾತ್ರೆ' ಚುನಾವಣೆಗಳಿಗೆ ಮೊದಲು ಕೋಮುದ್ವೇಷದ ಭಾವನೆ ಬಡಿದೆಬ್ಬಿಸುವ ಹುನ್ನಾರದಿಂದ ಕೂಡಿದೆ. ಈ ಪೈಶಾಚಿಕ ಯೋಜನೆಯತ್ತ ಬೆಳಕು ಚೆಲ್ಲುವ ಲೇಖನವಿಲ್ಲಿ.

ಇದೀಗ ಮತ್ತೊಂದು 'ಅಡ್ವಾಣಿ ರಥಯಾತ್ರೆ'

ಎಲ್.ಕೆ.ಅಡ್ವಾಣಿಯವರು ಮತ್ತೊಂದು 'ರಥಯಾತ್ರೆ' ಆರಂಭಗೊಂಡಿದೆ. ಶ್ರೀಯುತ ಅಡ್ವಾಣಿಯವರ ಯಾತ್ರೆಗಳ ಫಲಿತಾಂಶವಾಗಿ ಕೋಮು ಭಾವೋದ್ವೇಶಕ್ಕೆ ಕಿಚ್ಚಿಡುವ ಕೆಲಸವೇ ಆಗಿರುವುದು ನಮ್ಮ ಈ ಹಿಂದಿನ ಅನುಭವ. ಈ ಯಾತ್ರೆಗಳ ಬೆನ್ನ ಹಿಂದೆ ಸಾವು ಮತ್ತು ವಿನಾಶದ ಲೀಲೆ ಕಂಡುಬಂತು. ಅವು ನಮ್ಮ ದೇಶದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣತಂತ್ರದ ವಿಚಾರವನ್ನೇ ಬುಡಮೇಲು ಮಾಡಲು ತಮ್ಮ ಕಾಣಿಕೆ ನೀಡಿವೆ.

ಅಡ್ವಾಣಿಯವರು 33 ದಿನಗಳ 'ಭಾರತ ಉದಯ ಯಾತ್ರೆ'ಯನ್ನು ಪ್ರಕಟಿಸಿದ್ದಾರೆ. ಭಾರತವನ್ನು ಒಂದು "ಅಭಿವೃದ್ಧಿ ಹೊಂದಿದ ದೇಶ ಹಾಗೂ ಅತ್ಯುನ್ನತ ಶಕ್ತಿ"ಯಾಗಿ ಮಾಡುವ ವಿಚಾರವನ್ನು ಎತ್ತಿಹಿಡಿಯಲು ಈ ಯಾತ್ರೆಯಂತೆ ಚುನಾವಣಾ ಪ್ರಕ್ರಿಯೆಯ ಪ್ರಕಟಣೆಯ ನಂತರ ಸರಕಾರ ತಮಗೆ ಮಾಹಿತಿ ನೀಡುವ ತನ್ನ 'ಭಾರತ ಉದಯ' ಅಥವಾ 'ಭಾರತ ಪ್ರಕಾಶಿಸುತ್ತಿದೆ' ಜಾಹೀರಾತುಗಳನ್ನು ನಿಲ್ಲಿಸಬೇಕಾಗಿ ಬಂದುದರಿಂದ ಈ 'ರಥಯಾತ್ರೆ'ಯ ಮೂಲಕ ಈ ಅಪಪ್ರಚಾರದ ಮೇಳಗಾನವನ್ನು ಜನರ ನಡುವೆ ಒಯ್ಯುವುದೇ ಇದರ ಹಿಂದಿರುವ ಯೋಜನೆ.

ಆದರೆ ಹೀಗೆ ಹೇಳುವುದು ಅಡ್ವಾಣಿಯವರ ನಿರ್ಣಯದ ಒಂದು ಉದಾರ ವ್ಯಾಖ್ಯೆಯಾಗಿ ಬಿಡಬಹುದು. ಏಕೆಂದರೆ ಈ ಯಾತ್ರೆಯ ಯೋಜನೆಯನ್ನು ಪ್ರಕಟಿಸುತ್ತಾ ಅವರು "ಇದೊಂದು ಅತ್ಯಂತ ಭಾವಪೂರ್ಣ ಹಾಗೂ ಶಕ್ತಿಶಾಲಿ ಯಾತ್ರೆಯಾಗಿದ್ದು ಪ್ರತಿಯೊಬ್ಬ ಭಾರತೀಯನ ದೇಶಪ್ರೇಮದ ತಂತಿಯನ್ನು ಮೀಟಲಿದೆ" ಎಂದಿದ್ದಾರೆ. ಇದು ಅಯೋಧ್ಯೆಯಲ್ಲಿ ಬಾಬ್ರಿಮಸೀದಿ ಇದ್ದ ಸ್ಥಳದಲ್ಲೇ ಒಂದು ರಾಮ ದೇವಸ್ಥಾನ ಕಟ್ಟಬೇಕೆಂಬ ಬೇಡಿಕೆಗೆ ಬೆಂಬಲವಾಗಿ 1990 ರಲ್ಲಿ ಕೈಗೊಂಡ ಯಾತ್ರೆಯ ನಂತರ ಮೂರನೇ ಯಾತ್ರೆಯೆಂದ ಅವರು" ಈ ಯಾತ್ರೆ ಮತ್ತು ಹಿಂದಿನ ಎರಡು ಯಾತ್ರೆಗಳ ನಡುವೆ ಸಹಜ ಸಂಬಂಧವಿದೆ ಎಂದು ನನಗನಿಸುತ್ತದೆ" ಎಂದಿದ್ದಾರೆ. "ಇವೆಲ್ಲದರಲ್ಲಿ ಪುನರುಜ್ಜೀವನಗೊಂಡ ರಾಷ್ಟ್ರೀಯವಾದ (!)ದ ಪರಿಕಲ್ಪನೆಯ ಹಾಗೂ ಭಾವಪೂರ್ಣವಾದ ಎಳೆಯೊಂದಿದೆ" ಎಂದು ಒತ್ತಿ ಹೇಳಲು ಅವರು ಮರೆಯಲಿಲ್ಲ.



ಆದ್ದರಿಂದ **ಈ ಯಾತ್ರೆಯು ಹಿಂದಿನ ಯಾತ್ರೆಗಳಂತೆ ಚುನಾವಣೆಗಳಿಗೆ ಪೂರ್ವಭಾವಿಯಾಗಿ ಕೋಮುಭಾವನೆಗಳನ್ನು ಬಡಿದೆಬ್ಬಿಸಲೆಂದೇ ರೂಪಿಸಿರುವ ಇನ್ನೊಂದು ಯಾತ್ರೆಯೆಂಬುದು ಸ್ಪಷ್ಟ.** 1990 ರ ರಥಯಾತ್ರೆಯು ಬೆನ್ನ ಹಿಂದೆಯೇ ನಡೆದ ಕೋಮುಗಲಭೆಗಳು ರಕ್ತಪಾತ ಹಾಗೂ ವಿನಾಶದ ಜಾಡುಗಳನ್ನು ಬಿಟ್ಟುಹೋದುದಷ್ಟೇ ಅಲ್ಲ, ಬಾಬ್ರಿಮಸೀದಿಯ ಧ್ವಂಸಕ್ಕೆ ಅಡಿಗಲ್ಲು ಹಾಕಿತು. **ಭಾರತೀಯ ಗಣತಂತ್ರದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಸ್ವರೂಪವನ್ನು ಬುಡಮೇಲು ಮಾಡಿ ಅದರ ಸ್ಥಾನದಲ್ಲಿ ಆರ್‌ಎಸ್‌ಎಸ್‌ನ ಫ್ಯಾಸಿಸ್ಟ್ ಮಾದರಿಯ ಕಣ್ಣೋಟದ "ಹಿಂದೂರಾಷ್ಟ್ರ"ವನ್ನು ಹೇರುವ ಕುಟಿಲ ಪೈಶಾಚಿಕ ಯೋಜನೆ ಈ ಇಡೀ ಪ್ರಚಾರ - ಪ್ರಕ್ಷೋಭೆಯ ಬೆನ್ನೆಲುಬು.** ಈ ಚುನಾವಣೆಗಳಲ್ಲಿ ಬಿಜೆಪಿ ತನ್ನ ಕೋಮುವಾದಿ ಅಜೆಂಡಾವನ್ನು ಬಿಟ್ಟುಬಿಟ್ಟಿದೆ ಎಂದು ಭೋಳೆತನದಿಂದ ನಂಬುವವರು ಈಗ ಏನು ಹೇಳುತ್ತಾರೋ!

ಭಂಡತನ

"ದೇಶದ ಮುಂದಿರುವ ಬೃಹದಾಕಾರದ ಕರ್ತವ್ಯಗಳನ್ನು ಜಾರಿಗೆ ತರಲು ಬಿಜೆಪಿಗೆ ಮತ್ತು ಎನ್‌ಡಿಎಗೆ 1998 ಹಾಗೂ 1999 ಗಿಂತಲೂ ದೊಡ್ಡ ಪ್ರಮಾಣದ ಗೆಲುವು ಅಗತ್ಯ ಎಂದು ಶ್ರೀಯುತ ಅಡ್ವಾಣಿ ಸಾಕಷ್ಟು ಭಂಡತನದಿಂದಲೇ ಹೇಳಿದ್ದಾರೆ. ಭಾರತದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಒಂದು ಫ್ಯಾಸಿಸ್ಟ್ ಮಾದರಿಯ "ಹಿಂದೂ ರಾಷ್ಟ್ರ"ವಾಗಿ ಪರಿವರ್ತಿಸುವುದೇ ಈ "ಬೃಹದಾಕಾರದ ಕರ್ತವ್ಯ" "ಈ ಕೆಲಸಕ್ಕೆ ಎನ್‌ಡಿಎಗೆ ಎರಡರಷ್ಟು ಬಹುಮತ ಬೇಕು" ಎಂದು ಮುಂದುವರೆದು ಅವರು ಹೇಳಿದ್ದಾರೆ.

ಕೋಮುದ್ವೇಷದ ಸುಗ್ಗಿ?

ಅಡ್ವಾಣಿ ಹೇಳುವ ರಾಷ್ಟ್ರೀಯವಾದವೆಂದರೆ 'ಹಿಂದೂ ರಾಷ್ಟ್ರೀಯವಾದ' ಎಂಬುದು ಸ್ಪಷ್ಟ ಏಕೆಂದರೆ ಹಿಂದೂಗಳು ಮಾತ್ರವೇ ನಿಜವಾದ ರಾಷ್ಟ್ರೀಯವಾದಿಗಳು, ಬೇರೆಲ್ಲಾ ಧಾರ್ಮಿಕ ಅಲ್ಪಸಂಖ್ಯಾತರ ದೇಶಪ್ರೇಮ ಸಂದೇಹಾಸ್ಪದ ಎಂದು ಆರ್‌ಎಸ್‌ಎಸ್ ಹೇಳುತ್ತಲೇ ಬಂದಿದೆ. ಹೀಗಿರುವಾಗ ಈ ರಥಯಾತ್ರೆಯಿಂದ ಹರಡುವ ಕೋಮುವಾದಿ ದ್ವೇಷ ಬಿಜೆಪಿಗೆ ಚುನಾವಣಾ ಸುಗ್ಗಿಯ ಆಧಾರವಾಗುತ್ತದೆ. ಭಾರತೀಯ ಗಣತಂತ್ರವನ್ನು ಪರಿವರ್ತಿಸಲು ಅಥವಾ ನಾಶಮಾಡಲು ದೊಡ್ಡ ಚುನಾವಣಾ ವಿಜಯ ಬೇಕು ಎಂದು ಬಹಿರಂಗವಾಗಿಯೇ ಹೇಳುವ ಈ ಪಕ್ಷ ಎಂತಹುದೆಂದರೆ ತನ್ನ ಚುನಾವಣಾ ಗೆಲುವಿಗಾಗಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಅದು ನಾಶ ಮಾಡಬಲ್ಲದು.

1990ರ ರಥಯಾತ್ರೆಗೆ ತಕ್ಷಣದ ಒಂದು ಕಾರಣವೆಂದರೆ ಇತರ ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡುವ ಮಂಡಲ್ ವರದಿಯನ್ನು ಜಾರಿಗೆ ತರುವ ವಿ.ಪಿ.ಸಿಂಗ್ ಸರ್ಕಾರದ ನಿರ್ಧಾರ. "ಹಿಂದೂ ರಾಷ್ಟ್ರೀಯವಾದಿ" ಯ ಹೆಸರಲ್ಲಿ ಜನರಲ್ಲಿ ಪ್ರಚಾರ ಮಾಡುವ ಬಿಜೆಪಿ ಯೋಜನೆಗೆ ಇದು ಅಡ್ಡಿಯಾಗಬಹುದು ಎಂಬ ಭಯದಿಂದ ಆ ರಥಯಾತ್ರೆಯನ್ನು ಕೈಗೊಳ್ಳಲಾಯಿತು. ಅದರ ಪರಿಣಾಮ ಎಲ್ಲರ ಕಣ್ಣ ಮುಂದಿದೆ.

ಪೈಶಾಚಿಕ ಯೋಜನೆ

ಈ ಬಾರಿ, ಎನ್‌ಡಿಎ ಮಿತ್ರರೊಂದಿಗೆ ಸೇರಿಕೊಂಡು ಕೂಡಾ ಮುಂದಿನ ಸರಕಾರವನ್ನು ರಚಿಸಲು ಅನುಕೂಲವಾಗುವ ಸ್ಥಿತಿಯಲ್ಲಿ ತಾನಿಲ್ಲ ಎಂಬ ತೀರ್ಮಾನಕ್ಕೆ ಬಿಜೆಪಿ ಬಂದಂತಿದೆ. ಆದ್ದರಿಂದ ಆರ್ ಎಸ್ ಎಸ್ ಬಿಜೆಪಿಯು ಮುಂದಿರುವ ವಿಕೃತ ದಾರಿಯೊಂದರ ಕೋಮುಭಾವನೆಗಳನ್ನು ಬಡಿದೆಬ್ಬಿಸುವ ಈ ಮೂಲಕ ಹಿಂದೂ ಓಟ್ ಬ್ಯಾಂಕನ್ನು ಕ್ರೋಢೀಕರಿಸಬಹುದು ಎಂಬುದು ಅದರ ನಿರೀಕ್ಷೆ.

ಭಾರತೀಯ ಗಣತಂತ್ರವನ್ನೇ ನಾಶ ಮಾಡಲು ಪ್ರಯತ್ನಿಸುವ ಈ ದುಷ್ಟ ಪೈಶಾಚಿಕ ಯೋಜನೆ ಯಶಸ್ವಿಯಾಗಲು ಬಿಡಬಾರದು. ಸುಳ್ಳು ಮಾಹಿತಿ ಹರಡುವ ಬಿಜೆಪಿಯ ಅಭ್ಯರ್ಥಿ ಶಬ್ದಾಡಂಬರದ ನಿಜ ಹೂರಣವನ್ನು ಜನ ಕಂಡಿದ್ದಾರೆ. ಈಗ ಚುನಾವಣೆಯ ಮೊದಲು ದೇಶದ ಅಜೆಂಡಾವನ್ನು ತನಗೆ ಬೇಕಾದಂತೆ ಬದಲಿಸುವ ಬಿಜೆಪಿಯ ಪ್ರಯತ್ನಗಳಿಗೆ ಅವಕಾಶ ನೀಡಬಾರದು. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಭಾರತದ ಗಣತಂತ್ರ ಸ್ವರೂಪವನ್ನು ಉಳಿಸಿಕೊಳ್ಳಲು ಕೋಮುವಾದಿ ಶಕ್ತಿಗಳನ್ನು ಸೋಲಿಸುವ ಅಗತ್ಯ ಇನ್ನಷ್ಟು ಮಹತ್ವ ಪಡೆದುಕೊಂಡಿದೆ.



ಬಿಜೆಪಿ ಫೀಲ್ ಗುಡ್' - ನೀರಮೇಲಣ ಗುಳ್ಳೆ

'ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೆ' ಎಂಬುದು ಆಡು ಮಾತು. ಭಾರತೀಯ ಜನತಾ ಪಕ್ಷದ ಪರಿಸ್ಥಿತಿಯೂ ಹಾಗೆ ಆಗಿದೆ.

3 ರಾಜ್ಯಗಳಲ್ಲಿ ಚುನಾವಣೆ ಗೆದ್ದಾಕ್ಷಣ, ದೇಶವನ್ನೇ ಗೆದ್ದು ಬಿಡಬಹುದೆಂದು ಭಾವಿಸಿದ ಬಿಜೆಪಿ, ಲೋಕಸಭೆಗೂ ಚುನಾವಣೆ ನಡೆಸುವ ನಿರ್ಧಾರ ಕೈಗೊಂಡಿತು. ದೇಶದಾದ್ಯಂತ ಸಾವಿರಾರು ಪತ್ರಿಕೆಗಳಲ್ಲಿ 500 ಕೋಟಿ ರೂಗಳಿಗಿಂತ ಹೆಚ್ಚಿನ ಜಾಹಿರಾತಿನ ಹೊಳೆಯನ್ನು ಹರಿಸಿ, 'ಫೀಲ್ ಗುಡ್' 'ಇಂಡಿಯಾ ಶೈನಿಂಗ್' ಎಂದೆಲ್ಲಾ ಪ್ರಚಾರಿಸುತ್ತಿದ್ದರೂ ವಾಸ್ತವದ ಪರಿಸ್ಥಿತಿ ಬೇರೆಯೇ.

ಭಾರತದ ಕ್ರಿಕೆಟ್ ಪಡೆಯನ್ನು ಪಾಕಿಸ್ತಾನಕ್ಕೆ ಕಳಿಸುವ ವಿಚಾರದಲ್ಲಿ 'ಫೀಲ್‌ಗುಡ್' ಎಷ್ಟೊಂದು ತಡೆಯಾಯಿತೆಂದರೆ ಗೃಹ ಸಚಿವಾಲಯದಲ್ಲಿ ನಿರ್ಧಾರ ತೆಗೆದುಕೊಳ್ಳಲು 4 ದಿನಗಳಿಗಿಂತಲೂ ಹೆಚ್ಚು ಸಮಯ ಕಾಯ ಬೇಕಾಯಿತು. ಗೃಹ ಸಚಿವ ಎಲ್.ಕೆ.ಅಡ್ವಾನಿಯವರಿಗೆ ಭಯ. ಭಾರತದ ಟೀಮು ಒಂದು ವೇಳೆ ಸೋತರೆ ಕೋಟಿಗಟ್ಟಲೆ ಖರ್ಚು ಮಾಡಿ ಚುನಾವಣೆ ವಿಜಯಕ್ಕೆಂದು ಕಟ್ಟಿಸಿದ 'ಫೀಲ್‌ಗುಡ್' 'ಗುಳ್ಳೆ' ಒಡೆದು ಹೋಗುತ್ತದಲ್ಲಾ ಎನ್ನುವ ಭಯ. ಕ್ರಿಕೆಟ್ ಆಟದ ಸೋಲು, ಗೆಲುವಿನ ಮೇಲೆ ಆಳುವ ಪಕ್ಷದ ಚುನಾವಣಾ ಭವಿಷ್ಯ ನಿಂತಿದೆ ಎನ್ನುವುದಾದರೆ, ಇದೆಂತಹ ಸರಕಾರ. ಇಂತಹ ಸರಕಾರದ ಡಂಭಾಚಾರವನ್ನು ಬಯಲುಗೊಳಿಸಬೇಕಾಗಿದೆ.

ಈ ಸರ್ಕಾರಕ್ಕೆ ಇನ್ನೊಂದು ಭಯವೂ ಇದೆ. ಪಾಕಿಸ್ತಾನಕ್ಕೆ ಆಟವಾಡಲು ಹೋದ ಕ್ರಿಕೇಟ್ ಪಂಗಡಕ್ಕೆ ಭದ್ರತೆಯ ವಿಷಯದಲ್ಲಿ ತೊಂದರೆ ಆದರೆ? ದೇಶದ ಎಲ್ಲಾ ಜನರು ಈ ಬಗ್ಗೆ ಕಾಳಜಿ ಹೊಂದಿದ್ದಾರೆ. ಆದರೆ ಅಡ್ವಾಣಿ ಯವರ ಅಭಿಪ್ರಾಯದಲ್ಲಿ ಅದು ಪಾಕಿಸ್ತಾನ ಸರಕಾರದ ಜವಾಬ್ದಾರಿ. ಭಾರತದಿಂದ ಯಾವುದೇ ಭದ್ರತೆ ಯನ್ನು ನೀಡಲಾಗುವುದಿಲ್ಲ ಎಂದು ಅಡ್ವಾಣಿ ಹೇಳಿದ್ದಾರೆ. ಇದು ಬೇಜವಾಬ್ದಾರಿ ಹೇಳಿಕೆ. ಇದನ್ನು ಖಂಡತುಂಡವಾಗಿ ಖಂಡಿಸಬೇಕು.



ಈ ಹೇಳಿಕೆ ಪಾಕಿಸ್ತಾನಕ್ಕೆ ಹಾಕಿರುವ ಬೆದರಿಕೆ ಮಾತ್ರವಲ್ಲ. ಇದರಲ್ಲಿ ದುರುದ್ದೇಶವೂ ಇದೆ. ನಮ್ಮ ಕ್ರಿಕೇಟ್ ಆಟಗಾರರಿಗೆ ಏನಾದರೂ ತೊಂದರೆ ಆದಲ್ಲಿ ಇಡೀ ದೇಶದಲ್ಲಿ ದೊಂಬಿ ಭುಗಿಲೇಳುತ್ತದೆ. ಆದ್ದರಿಂದ ನಮ್ಮ ಆಟಗಾರರಿಗೆ ಸೂಕ್ತ ರಕ್ಷಣೆ ಕುರಿತು ಆಲೋಚಿಸದ ಸರಕಾರಕ್ಕೆ ಧಿಕ್ಕಾರ ಸಾರಬೇಕು. ಆಟಗಾರರಿಗೆ ರಕ್ಷಣೆ ನೀಡುವ ಜವಾಬ್ದಾರಿ ಪಾಕಿಸ್ತಾನಕ್ಕೆ ಎಷ್ಟಿದೆಯೋ ಅಷ್ಟೆ ಅಥವಾ ಅದಕ್ಕಿಂತ ಹೆಚ್ಚು ಜವಾಬ್ದಾರಿ ಭಾರತ ಸರಕಾರಕ್ಕಿದೆ ಎಂಬುದನ್ನು ಮರೆಯಲಾಗದು.

ಚುನಾವಣೆ ಗೆಲ್ಲಲು ಈ ಬಿಜೆಪಿ ಸರಕಾರ ಬಳಸುತ್ತಿರುವ ಅಸ್ತ್ರಗಳು ಎಂಥವರಿಗೂ ವಾಕರಿಕೆ ಬರಿಸುತ್ತಿದೆ. ಇಷ್ಟೊಂದು ಕೋಟಿ ರೂ.ಗಳನ್ನು ಜಾಹಿರಾತಿನ ಮೇಲೆ ಖರ್ಚು ಮಾಡುತ್ತಿರುವುದರ ವಿರುದ್ಧ ಚುನಾವಣಾ ಆಯೋಗ ಕೂಡಾ ಛೀಮಾರಿ ಹಾಕಿದೆ. ರಾಜಕೀಯ ನೈತಿಕತೆಯನ್ನು ಕಾಪಾಡಬೇಕೆಂದು ಚುನಾವಣಾ ಆಯೋಗ ಮಾಡಿದ ಮನವಿ ವಾಜಪೇಯಿ ಸರಕಾರದ ಕಿವುಡು ಕಿವಿಗೆ ಕೇಳಿಸಲೇ ಇಲ್ಲ. ಆದ್ದರಿಂದ ಈ ಸರಕಾರವನ್ನು ಅಧಿಕಾರದಿಂದ ಕಿತ್ತೊಗೆಯಲೇ ಬೇಕಾಗಿದೆ. ಜಾಹಿರಾತಿನ ಮೂಲಕ ಒಳ್ಳೆಯ ವಸ್ತು ಪ್ರಚಾರ ಮಾಡಿದರೆ ಮಾರಾಟಕ್ಕೆ ಅನುಕೂಲ ವಾಗುತ್ತದೆ. ಅದರೆ ಕಳಪೆ ವಸ್ತುವನ್ನು ಮಾರಾಟ ಮಾಡಲು ಎಷ್ಟು ಜಾಹೀರಾತು ಮಾಡಿದರೂ ಅಷ್ಟಕ್ಕಷ್ಟೆ.

ಗ್ರಾಮೀಣ ಪ್ರದೇಶದ ಜನರ ಅನುಭವ, ನಗರ ಪ್ರದೇಶದಲ್ಲಿರುವ ಬಡವರ ಬವಣೆಯಿಂದ ಜಾಹಿರಾತಿ ನಲ್ಲಿ ಸುಳ್ಳು ಹೇಳುತ್ತಿದೆ ಎಂಬುದು ಗೊತ್ತಾಗಿದೆ. ಕಳಪೆ ವಸ್ತುವಿನ ಜಾಹಿರಾತನ್ನು ಜನರು ತಿರಸ್ಕರಿಸುವುದು ನಿಶ್ಚಿತ. ಅಂತೆಯೇ ಸುಳ್ಳು ಜಾಹಿರಾತುಗಳನ್ನು ಸೃಷ್ಟಿಸುತ್ತಿರುವ ವಾಜಪೇಯಿ ಸರಕಾರವನ್ನು ಕೂಡಾ.

ಬೆಳಗುವ ಭಾರತದಲ್ಲಿ ಬಳಲುತ್ತಿರುವ ಮಹಿಳೆ

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ - ಮಹಿಳೆಯರು ಮತ್ತು ಮಹಿಳಾ ಪರ ಚಳುವಳಿ, ಚಿಂತನೆಗಳಿಗೆ ಸ್ಫೂರ್ತಿ ಕೊಡುವ ದಿನ. ಹೋರಾಟದ ವಿಭಾಗಕ್ಕೆ ಹೊಸ ಚೈತನ್ಯ ತುಂಬುವ ದಿನ. ಹಲವು ದಶಕಗಳಿಂದ ಈ ಅರ್ಥದಲ್ಲಿಯೇ ನಾವೀ ದಿನವನ್ನು ಆಚರಿಸುತ್ತ ಬಂದಿದ್ದೇವೆ. ಒಬ್ಬ ಮಹಿಳೆಯಾಗಿ ತನ್ನ ಹಕ್ಕುಗಳ ಕುರಿತು ಯೋಚಿಸುವ ಸ್ಪಷ್ಟತೆ ಪಡೆವ ಹಕ್ಕುಗಳನ್ನು ಸಮರ್ಥಿಸಿಕೊಳ್ಳುತ್ತ ಮಹಿಳೆ ಹೆಜ್ಜೆ ಇಡುವಂತಹ ವಾತಾವರಣ ನಿರ್ಮಾಣಕ್ಕಾಗಿ ಹಲವು ರೀತಿಯಲ್ಲಿ ಶ್ರಮಿಸುತ್ತ ಬಂದಿದ್ದೇವೆ.

ಇಂದು ಈ ಹಕ್ಕುಗಳನ್ನು ಪ್ರಾಥಮಿಕವಾಗಿ ಉಳಿಸಿಕೊಳ್ಳುವ ಮುಂದುವರೆದು ಬೆಳೆಸಿ, ಗಟ್ಟಿಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಮುಂದಾಗಬೇಕಾಗಿದೆ.


ದಿಟ್ಟ ಹೆಜ್ಜೆ

ಸಮಾಜದ ಅಭಿವೃದ್ಧಿಯ ಪಥದಲ್ಲಿ ಮಹಿಳೆಯರ ಕೊಡುಗೆಯನ್ನು ಸಂಪೂರ್ಣವಾಗಿ ಗುರುತಿಸದಿದ್ದರೂ ಯಾರೂ ಅದನ್ನು ನಿರಾಕರಿಸುವ ಪರಿಸ್ಥಿತಿ ಇಂದಿಲ್ಲ. ಲಿಂಗ ಸಮಾನತೆ ಎಂಬ ಕಾನ್ಸೆಪ್ಟ್ ಎಲ್ಲ ಸಂದರ್ಭಗಳಲ್ಲಿಯೂ ಬಹಳ ಕಾಳಜಿಯಿಂದಲೇ ಎಂದಲ್ಲದಿದ್ದರೂ ಅದನ್ನು ಅನಿವಾರ್ಯವಾಗಿ ಉಚ್ಚರಿಸಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ಮಹಿಳಾ ಸಮಾನತೆಯತ್ತ ದಿಟ್ಟ ಹೆಜ್ಜೆಗಳನ್ನಿಟ್ಟು ಮುಂದುವರೆಯಲು ಸಾಧ್ಯವಾಗುವಂತಹ ವಾತಾವರಣ ನಿರ್ಮಾಣ ಮಾಡುವಲ್ಲಿ ಮಹಿಳಾ ಚಳುವಳಿ ಸಫಲವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಮತಾಂಧತೆಯ ಕ್ರೌರ್ಯ

ಈ ರೀತಿಯ ಪ್ರಯತ್ನಗಳ ಆಧಾರದಲ್ಲಿಯೇ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸ್ಥಾನ-ಮಾನದಲ್ಲೊಂದಿಷ್ಟು ಬದಲಾವಣೆ ಕಾಣಸಿಗುತ್ತವೆ. ಮಹಿಳೆಗೆ ದೊರೆತ ಶಿಕ್ಷಣದ ಅವಕಾಶ, ಸ್ವಲ್ಪ ಮಟ್ಟಿಗಾದರೂ ಉದ್ಯೋಗ, ರಾಜಕೀಯಗಳಲ್ಲಿ ಪ್ರವೇಶಾವಕಾಶ, ಔದ್ಯೋಗಿಕ ಕ್ಷೇತ್ರದಲ್ಲಿ ಗುರುತಿಸುವಿಕೆ, ದೊರೆತ ಹಕ್ಕುಗಳು ಇತ್ಯಾದಿಗಳನ್ನು ಗುರುತಿಸಬಹುದು. ಆದರೆ ಹೀಗೆ ಸೃಷ್ಟಿಸಿಕೊಂಡ ವಾತಾವರಣದಿಂದಷ್ಟೇ ಸಂತೃಪ್ತಿ ಹೊಂದಲಾರದ ಮತ್ತೊಂದು ಕಟು ವಾಸ್ತವತೆಯ ಮಧ್ಯೆಯೂ ನಾವಿಂದು ನಿಂತಿದ್ದೇವೆ. ನಮ್ಮ ಯಶಸ್ಸನ್ನು ಮೆಲುಕು ಹಾಕುತ್ತ ಇನ್ನೂ ಮುಂದುವರೆಯಬೇಕೆನ್ನುವ ಸಂದರ್ಭದಲ್ಲಿ ನಾವಿಲ್ಲ. ಬದಲಿಗೆ ನಮ್ಮ ಅತ್ಯಂತ ಮೂಲಭೂತ ಹಕ್ಕುಗಳೇ ಅಪಾಯದಲ್ಲಿವೆ. ಒಂದೆಡೆ ಜಾಗತಿಕ ಮಟ್ಟದಲ್ಲಿ ಎಲ್ಲ ದುಡಿಯುವ ವಿಭಾಗಕ್ಕೆ ಆಪತ್ತು ಸೃಷ್ಟಿಸಿದ ಜಾಗತೀಕರಣ, ಉದಾರೀಕರಣಗಳ ನೇರ ಹೊಡೆತ, ಇನ್ನೊಂದೆಡೆ ನಮ್ಮ ದೇಶದಲ್ಲಿ ಇದರ ಜೊತೆಯೇ ಮತಾಂಧ ಮೂಲಭೂತವಾದಿ ಕೋಮುವಾದೀ ಸಂಘ ಪರಿವಾರದ ಕ್ರೌರ್ಯ ಅಟ್ಟಹಾಸಗಳು. ಇವೆರಡೂ ಎಲ್ಲ ಜನ ವಿಭಾಗವನ್ನೂ ಬಾಧಿಸುತ್ತವೆಯಾದರೂ ಮಹಿಳೆ ಎಲ್ಲದರಂತೆ ಇದರಲ್ಲಿಯೂ ಎರಡು ರೀತಿಯಲ್ಲಿ ಬಲಿಯಾಗುತ್ತಿದ್ದಾಳೆ. ಒಂದು ಈ ಸಮಾಜದ ವ್ಯಕ್ತಿಯಾಗಿ, ಇನ್ನೊಂದೆಡೆ ಮಹಿಳೆಯಾಗಿ. ಜಾಗತೀಕರಣದ ಹೊಡೆತ ಕೌಟುಂಬಿಕ ನೆಲೆಯಲ್ಲಿ ಸೃಷ್ಟಿಸುತ್ತಿರುವ ಅಶಾಂತಿ, ಅತೃಪ್ತಿಗಳಿಗೆ ಮಹಿಳೆ ಬಲಿಯಾಗುತ್ತಿದ್ದಾಳೆ. ನಾಗರೀಕತೆ, ಉನ್ನತ ಶಿಕ್ಷಣ, ಅತ್ಯಾಧುನಿಕ ತಂತ್ರಜ್ಞಾನ ಇತ್ಯಾದಿಗಳು ಅವರ ಬದುಕಿನ ಐಷಾರಾಮಗಳ ಗಳಿಕೆಗಷ್ಟೇ ಬಳಕೆಯಾಗುತ್ತಿದ್ದು ಹೆಚ್ಚಿನ ಸಂದರ್ಭದಲ್ಲಿ ಮೂಲಭೂತ ಯೋಚನಾ ಕ್ರಮದಲ್ಲಿ ಬದಲಾವಣೆಯಾಗದಿರುವುದು ಕಹಿ ಸತ್ಯ. ಉದಾಹರಣೆಗೆ, ವರದಕ್ಷಿಣೆ ಜಾಗತೀಕರಣ ಸೃಷ್ಟಿಸಿದ ಆರ್ಥಿಕ ಬಿಕ್ಕಟ್ಟಿಗೆ ಪರ್ಯಾಯ ಮಾರ್ಗವಾಗಿ ಬಳಕೆಯಾಗುತ್ತಿದೆ. ಉದ್ಯೋಗಾವಕಾಶಗಳು ಕುಸಿಯುತ್ತಿದ್ದು ಬದುಕು

ಮನುಧರ್ಮ ದೇಶದ ಸಂವಿಧಾನವಾಗುವ ಮೊದಲು ದೇಶದ ಮಹಿಳೆಯರು ಎಚ್ಚೆತ್ತುಕೊಳ್ಳಬೇಕು. ಅದಕ್ಕೀಗ ಸಕಾಲ ಹೋರಾಟದ ಪರಂಪರೆಯನ್ನು ನೆನಪಿಸುವ ಮಾರ್ಚ್-8 ಇದರ ಜೊತೆಯೇ ಬಂದ ಚುನಾವಣೆ ವಸಂತದೊಂದಿಗೆ ಬಂದ ಈ ಚುನಾವಣೆ ಭಾರತದ ಜನರ ಪಾಲಿಗೆ ವಸಂತದ ನೆನಪನ್ನಾದರೂ ತರಬೇಕೆಂದರೆ ಸಂಘ ಪರಿವಾರದ ಅಟ್ಟಹಾಸವನ್ನು ಮತ ಪೆಟ್ಟಿಗೆಯ ತಳದಲ್ಲಿ ಹೂತಿಡಬೇಕು.



ಕೆ.ಎಸ್.ವಿಮಲಾ

ಬಗ್ಗಡವಾಗುತ್ತಿದ್ದರೂ ಉದಾರೀಕರಣ ತಂದಿಟ್ಟ ಗ್ರಾಹಕ ಸಂಸ್ಕೃತಿಯ ಕೊಡುಗೆ. ವೈಭೋಗದ ಐಷಾರಾಮದ ವಸ್ತುಗಳ ಸಂಗ್ರಹಣಾ ದಾಹವನ್ನು ಹೆಚ್ಚಿಸು ತ್ತಿದೆ. ಇವುಗಳ ಸ್ವಾಧೀನತೆಗಾಗಿ ವರದಕ್ಷಿಣೆ ಸುಲಭ ಸಾಧನವಾಗಿ ಮಾರ್ಪಾಡಾಗುತ್ತಿದೆ. ಉಳಿದೆಲ್ಲದಕ್ಕೆ ಧರ್ಮ, ಸಂಪ್ರದಾಯಗಳನ್ನು ಮುಂದೆ ಮಾಡುವ ಹಲವು ವಿಭಾಗ ವರದಕ್ಷಿಣೆಯ ಸಂದರ್ಭದಲ್ಲಿ ಸಂಪ್ರದಾಯ ಉಲ್ಲಂಘಿಸಿ, ವರದಕ್ಷಿಣೆ ತೆಗೆದುಕೊಳ್ಳುವ ಮಾರ್ಗ ಹಿಡಿದರೆ, ಉದಾ: ಇಸ್ಲಾಂ ಧರ್ಮದಲ್ಲಿ ವಧುವಿನಿಂದ ಯಾವುದೇ ಕೊಡುಗೆ ತೆಗೆದುಕೊಳ್ಳುವುದು ನಿಷಿದ್ಧ. ಆದರೆ ಇಂದು ವರದಕ್ಷಿಣೆಯ ಪಿಡುಗು ಧರ್ಮ, ಮತ, ಸಂಪ್ರದಾಯಗಳ ಗಡಿಯಾಚೆ ವಿಸ್ತರಿಸಿದೆ.

ಉದ್ಯೋಗ, ಭದ್ರತೆ, ಸಂಘಟಿತ ಕ್ಷೇತ್ರಗಳ ಕುರಿತು ಮಾತನಾಡುತ್ತಿದ್ದ ನಾವು ಸಂಘಟಿತ ಕ್ಷೇತ್ರವೇ ಅಸಂಘಟಿತಕ್ಕೆ ತಳ್ಳಲ್ಪಡುತ್ತಿರುವ ಶಕ್ತಿಗಳ ವಿರುದ್ಧ ಹೋರಾಡಬೇಕಾಗಿದೆ. ನಮ್ಮ ಉದ್ದಿಮೆಗಳ ಉಳಿವಿಗಾಗಿ ಶ್ರಮಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕೃಷಿ ಕ್ಷೇತ್ರದಲ್ಲಿನ ಬಿಕ್ಕಟ್ಟು, ಒಂದೆಡೆ, ಭೀಕರ ಬರಗಾಲದಿಂದ ಜನ ತತ್ತರಿಸುತ್ತಿದ್ದರೆ ಇನ್ನೊಂದೆಡೆ ಇದು ಮಹಿಳೆಯರನ್ನು ಬೆಂಗಳೂರಿನ ಯಾವುದೇ ಬಡಾವಣೆಯಲ್ಲಿ ಬೆಳಗಿನ ವೇಳೆಯಲ್ಲಿ ಕೆಲಸ ಅರಸಿ ಕಾದು ನಿಲ್ಲುವ ಉತ್ತರ ಕರ್ನಾಟಕದ ಸಾವಿರಾರು ಹೆಣ್ಣು ಮಕ್ಕಳು ಇದಕ್ಕೆ ಜೀವಂತ ಉದಾಹರಣೆ ಗಳು. ತಮ್ಮ ಕುಟುಂಬದ ಒಂದು ಹೊತ್ತಿನ ಕೂಳಿಗಾಗಿ ಮೈಮಾರಿಕೊಳ್ಳುವ ಸ್ಥಿತಿಗಿಂದು ಹೆಣ್ಣು ಮಕ್ಕಳು ತಲುಪಿದ್ದಾರೆ.

ಕೆಲಸ, ಭದ್ರತೆ, ಸಮೃದ್ಧಿ, ಸಾಧನೆಗಳ ಬಗ್ಗೆ ಸರ್ಕಾರಗಳು ಮಾತನಾಡುತ್ತಿವೆಯಾದರೂ ವಾಸ್ತವಾಂಶವೆಂದರೆ ವರ್ಷಕ್ಕೆ ಕೇವಲ 60 ರಿಂದ 100 ದಿನಗಳ ಕೆಲಸದ ಲಭ್ಯತೆಯ ಪರಿಸ್ಥಿತಿ ದುಡಿಯುವ ಶಕ್ತಿಗೆ ಬಂದು ತಲುಪಿದೆ.

ಗೋದಾಮುಗಳ ಭರ್ತಿ, ಧಾನ್ಯ ಹುಳು ಹಿಡಿಯುತ್ತಿದ್ದರೂ ಜನ ಹಸಿವಿನಿಂದ ಸಾಯುತ್ತಿದ್ದಾರೆ.

ಗಗನ ಕುಸುಮ

ಚತುಷ್ಪಥ ಇಡೀ ದೇಶವನ್ನೇ ಸೇರಿಸಿ ಬಿಡುವ ಹೆದ್ದಾರಿ. ಇದಾವುದೂ ಗ್ರಾಮೀಣ ಭಾರತದಲ್ಲಿ ಬಸವಳಿದು ಬೆಂಡಾದ ಜನಸಾಮಾನ್ಯರ ಬದುಕಿಗೆ ಆಸರೆ ನೀಡುವುದೇ ಇಲ್ಲ. ಬಡತನ ಒಂದಿಷ್ಟು ಕಡಿಮೆಯಾಗದಿದ್ದರೂ ಸರ್ಕಾರದ ಪ್ರಕಾರ ಬಡವರ ಸಂಖ್ಯೆ ಕಡಿಮೆಯಾಗಿದೆ. ಪಡಿತರ, ಆರೋಗ್ಯ, ಸೇವಾಲಯಗಳು ಬಡವರ ಅದರಲ್ಲೂ ಮಹಿಳೆಯರ ಪಾಲಿಗೆ ಗಗನ ಕುಸುಮವಾಗುತ್ತಿದೆ. ಕೂಲಿಗಾಗಿ ಕಾಳು ಕೆಲಸ ಇವೆಲ್ಲ ಬರೀ ಬೊಗಳೆಗಳಾಗಿ ಉಳಿದಿವೆ. ದುಡಿಮೆಯ ಶಕ್ತಿಗೆ ಮಾನವ ಸಂಪನ್ಮೂಲದ ಬದಲು ದೈತ್ಯ ಯಾಂತ್ರೀಕರಣಗಳು ಬಳಕೆಯಾಗುತ್ತಿವೆ.

ಎಚ್ಚೆತ್ತುಕೊಳ್ಳಿ

ಆದರೆ ಕೇಂದ್ರದ ಸಂಘ ಪರಿವಾರದ ಸರ್ಕಾರದ ಪ್ರಕಾರ "ಭಾರತ ಪ್ರಕಾಶಿಸುತ್ತಿದೆ". ಜನರಿಗಾಗಿ ಒಂದಿಷ್ಟಾದರೂ ವೆಚ್ಚವಾಗುವ ಬದಲು ಮಾಧ್ಯಮಗಳಲ್ಲಿ ಭ್ರಷ್ಟ, ಲಂಪಟ ರಾಜಕಾರಣಿಗಳ, ಸರ್ಕಾರದ ವೈಫಲ್ಯಗಳನ್ನೇ ಸಾಧನೆಯಾಗಿ ಮೆರೆಸುವತ್ತ ಪೋಲು ಮಾಡಲಾಗುತ್ತಿದೆ. 'ಸಂತೃಪ್ತ ಭಾವ' ಯಾರಿಗೆ? ಎಂಬುದು ನಮ್ಮ ಪ್ರಶ್ನೆಯಾಗಬೇಕು. ಮನುಧರ್ಮ ದೇಶದ ಸಂವಿಧಾನವಾಗುವ ಮೊದಲು ದೇಶದ ಮಹಿಳೆಯರು ಎಚ್ಚೆತ್ತುಕೊಳ್ಳಬೇಕು. ಅದಕ್ಕೀಗ ಸಕಾಲ ಹೋರಾಟದ ಪರಂಪರೆಯನ್ನು ನೆನಪಿಸುವ ಮಾರ್ಚ್-8 ಇದರ ಜೊತೆಯೇ ಬಂದ ಚುನಾವಣೆ ವಸಂತದೊಂದಿಗೆ ಬಂದ ಈ ಚುನಾವಣೆ ಭಾರತದ ಜನರ ಪಾಲಿಗೆ ವಸಂತದ ನೆನಪನ್ನಾದರೂ ತರಬೇಕೆಂದರೆ ಸಂಘ ಪರಿವಾರದ ಅಟ್ಟಹಾಸವನ್ನು ಮತ ಪೆಟ್ಟಿಗೆಯ ತಳದಲ್ಲಿ ಹೂತಿಡಬೇಕು.

ಜಾತ್ಯಾತೀತ, ಶೋಷಣಾ ಮುಕ್ತ ಸಮಾನತೆಯ ಭಾರತದತ್ತ ಮುನ್ನಡೆಯುವ ಪಣವನ್ನು ತೊಡಬೇಕು. ಅದು ಮಾತ್ರವೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಾರ್ಥಕಗೊಳಿಸುವುದು.

ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ : ಹಿನ್ನೆಲೆ

ಮಾರ್ಚ್ 8 ಅಂತರಾಷ್ಟ್ರೀಯ ಮಹಿಳಾದಿನ ಘೋಷಿತವಾದದ್ದು ಒಂದು ರೋಮಾಂಚನಕಾಕರಿ ಇತಿಹಾಸ 19 ನೆಯ ಶತಮಾನದ ಆರಂಭ ಯುರೋಪ್ ಮತ್ತು ಸುತ್ತಲಿನ ದೇಶಗಳ ಆರ್ಥಿಕ-ಸಾಮಾಜಿಕ ಬಿಕ್ಕಟ್ಟುಗಳನ್ನು ಅನ್ಯಾಯ, ಅಸಮಾನತೆ, ಸುಲಿಗೆ ಶೋಷಣೆಗಳೆದುರು ಜನತೆಯ ಬಂಡಾಯಗಳ ಪ್ರಚಂಡ ಬಿರುಗಾಳಿಯೇಳುತ್ತಿದ್ದ ಕಾಲಘಟ್ಟದಲ್ಲಿ ಬೆಳೆದು ಬಂದ ದುಡಿಯುವ ಅವಕಾಶಗಳು, ಉತ್ಪಾದನಾ ವ್ಯವಸ್ಥೆಯ ವಿಸ್ತಾರ ಮಹಿಳೆಯರನ್ನು ಉದ್ದಿಮೆಗಳಲ್ಲಿ ದುಡಿಯುವಂತಹ ಪರಿಸ್ಥಿತಿ ಉಂಟಾಯಿತು. ಅದರಲ್ಲಿ, ಯಾರಿಗೂ ಕಡಿಮೆ ಇಲ್ಲದಂತೆ ದುಡಿದು ಸಂಪತ್ತು ಸೃಷ್ಟಿಸಿ ಹೆಗಲುಕೊಟ್ಟು ಪುರುಷರಿಗೆ ಸರಿ ಸಮಾನರಾಗಿ ಮಹಿಳೆಯರು ನಿಂತರು. ಆದರೆ ಮಾಲೀಕರು - ಜನ ಪ್ರತಿನಿಧಿಗಳು ಇವರನ್ನು ಸರಿ ಸಮಾನರಾಗಿ ನೋಡಲಿಲ್ಲ. ಪುರುಷರು - ಮಹಿಳೆಯರು ಬೇರೆಯೆಂದು ಲಿಂಗ ತಾರತಮ್ಯ ಮಾಡಿದರು. ಕೊಡುವ ಕೂಲಿಯಲ್ಲಿ ಪುರುಷರಿಗೆ ಹೆಚ್ಚು ಮಹಿಳೆಯರಿಗೆ ಕಡಿಮೆ ನೀಡಿಕೆ, ಕೆಲಸದ ಹಂಚಿಕೆಯಲ್ಲಿ ತಾರತಮ್ಯ, ರಾತ್ರಿ ಪಾಳಿಯಲ್ಲಿ ದುಡಿಯಲೇಬೇಕಾದ ಒತ್ತಡ ಹೀಗೆ ಕೆಲಸದ ಸ್ಥಳಗಳಲ್ಲಿ ನೂರೆಂಟು ದಬ್ಬಾಳಿಕೆ ಇದು ದುಡಿಯುವ ರಂಗದಲ್ಲಿ ನಡೆದಿತ್ತು. ಸಾಮಾಜಿಕವಾಗಿ, ಆರ್ಥಿಕವಾಗಿ ಮಹಿಳೆಗೆ ಎರಡನೇ ದರ್ಜೆಯ ನಾಗರೀಕರು ಎಂದು ಗುರ್ತಿಸಿ ಚುನಾವಣೆಗಳಲ್ಲಿ ಓಟಿನ ಹಕ್ಕನ್ನು ನೀಡುತ್ತಿರಲಿಲ್ಲ.

ಕೈಗಾರಿಕೆಗಳ ಬೆಳವಣಿಗೆಯೊಂದಿಗೆ ಆಧುನಿಕ ಕಾರ್ಮಿಕ ವರ್ಗ, ಅಸಮಾನತೆ ವೈರುದ್ಯಗಳ ವ್ಯವಸ್ಥೆಯಲ್ಲಿ ಕಾರ್ಮಿಕವರ್ಗ ತನ್ನ ಹಕ್ಕು, ಬದುಕಿನ ಉಳಿವಿಗಾಗಿ ಸಂಘರ್ಷ ನಡೆಸುತ್ತಿತ್ತು. ಇದರಿಂದಾಗಿ ಕಾರ್ಮಿಕ ಸಂಘಗಳು ಉದಯವಾಗಿ ಹಲವಾರು ಕ್ರಾಂತಿಕಾರಿ ಹೋರಾಟಗಳನ್ನು ನಡೆಸಿದರು. ಮಾರ್ಕ್ಸ್ ಏಂಗೆಲ್ಸರ ಮಾರ್ಗದರ್ಶನ, ಅಪಾರ ಅನುಭವಗಳು ಕಾರ್ಮಿಕ ವರ್ಗಕ್ಕೆ ದೊರೆಯಿತು. ಅದರಲ್ಲಿಯೂ ವಿಶೇಷವಾಗಿ ಮಹಿಳಾ ಕಾರ್ಮಿಕ ವರ್ಗಕ್ಕೆ ದೊರೆತು ಸ್ವಾತಂತ್ರ್ಯ ಸಮಾನತೆಯ ಬಯಕೆ ಗರಿಗೆದರುವಂತಾಯಿತು. ಪ್ಯಾರಿಸ್ ಕಮ್ಯೂನ್‌ನಂತಹ ಮಹಾನ್ ಹೋರಾಟಗಳಲ್ಲಿ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಮೆರೆದರು. ಉದಾಹರಣೆಗೆ ಯುದ್ಧ ಆಯೋಗದ ಮುಂದೆ 1051 ಮಹಿಳಾ ಖೈದಿಗಳನ್ನು ವಿಚಾರಣೆಗೆ ತರಲಾಗಿತ್ತು.

1882 ರಲ್ಲಿ ಜರ್ಮನಿಯ ಕಮ್ಯೂನಿಸ್ಟ್ ನಾಯಕಿ ಕ್ಲಾರಾ ಪಿರ್ಸ್ವೆ ಜೆಟ್ಕಿನ್ ಪ್ಯಾರೀಸ್‌ಗೆ ಬೇಟಿ ನೀಡಿ ತನ್ನ ಸೈದ್ಧಾಂತಿಕ ವಿಷಯಗಳನ್ನು ಅಳವಡಿಸಿಕೊಂಡಿದ್ದು. 1889 ರಲ್ಲಿ ಪ್ಯಾರಿಸ್‌ನಲ್ಲಿ ಸ್ಥಾಪಿತವಾದ ಎರಡನೆ ಅಂತರಾಷ್ಟ್ರೀಯ ಪುರುಷ ಮತ್ತು ಮಹಿಳೆಯರಿಗೆ ಸಮಾನ ಹಕ್ಕಿಗಾಗಿ ಮತ್ತು ಮತದಾನದ ಹಕ್ಕಿಗಾಗಿ ಪ್ರಚಾರಾಂದೋಲನ ಕ್ಲಾರಾ ನೇತೃತ್ವದಲ್ಲಿ ನಡೆಯಿತು. 1902, 1901 ರಲ್ಲಿ ಆರು ಮಹಾಧಿವೇಶನದಲ್ಲಿ ಈ ನಿರ್ಣಯಗಳು ಅಂಗೀಕೃತವಾಯಿತು.

1908 ರ ಫೆಬ್ರವರಿ ಕೊನೆ ರವಿವಾರ ಅಮೇರಿಕಾ ಸಂಸ್ಥಾನದಲ್ಲಿ ಮಹಿಳೆಯರು ಮೊದಲ ಮಹಿಳಾ ದಿನಾಚರಣೆಯನ್ನು ಆಚರಿಸಲು ಮುಂದಾದರು. ಈ ಹೋರಾಟಕ್ಕೆ 2000ಕ್ಕೂ ಅಧಿಕ ಮಹಿಳೆಯರು ಭಾಗವಹಿಸಿದ್ದರು.

ಮಹಿಳಾ ದಿನ - ತ್ಯಾಗದ ಪರಂಪರೆ

1908 ಮಾರ್ಚ್ 8 ರಂದು ನ್ಯೂಯಾರ್ಕಿನಲ್ಲಿ ಹೊಲಿಗೆ (ಗಾರ್ಮೆಂಟ್ಸ್) ಕಾರ್ಖಾನೆಗಳ ಮಹಿಳಾ ಕಾರ್ಮಿಕರು 10 ಗಂಟೆಗಳ ಕೆಲಸ, ಲಿಂಗತಾರತಮ್ಯ ವಿರುದ್ಧ ಮತ್ತಿತರೆ ಯೂನಿಯನ್ ಬೇಡಿಕೆಗಳು ಹಾಗೂ ಚುನಾವಣೆಯಲ್ಲಿ ಮತದಾನದ ಹಕ್ಕಿಗಾಗಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಆಳುವವರಿಂದ ತೀವ್ರ ದಮನ, ದಬ್ಬಾಳಿಕೆಗಳನ್ನು ಎದುರಿಸಬೇಕಾಯಿತು.

ಈ ಮಹತ್ವದ ದಿನದ ನೆನಪಿನಲ್ಲಿ 1910 ರಲ್ಲಿ ಸೇರಿದ್ದ ಅಂತರಾಷ್ಟ್ರೀಯ ಸಮಾಜವಾದಿ ಮಹಿಳಾ ಮಹಾಧಿವೇಶನವು (ಕೂಪನ್ ಹೆಗನ್) ಆ ದಿನವನ್ನು ಅಂತರಾಷ್ಟ್ರೀಯ ಮಹಿಳಾ ದಿನವೆಂದು ನಿರ್ಧರಿಸಿತು. ಇದರಲ್ಲಿ 17 ದೇಶಗಳ 100 ಮಹಿಳಾ ಪ್ರತಿನಿಧಿಗಳು ಇದನ್ನು ಅಂಗೀಕರಿಸಿದರು. ಈ ಸಮ್ಮೇಳನ ಪುರುಷರಿಗಿರುವಂತೆ ವಯಸ್ಕ ಮತದಾನದ ಹಕ್ಕು, ಆಸ್ತಿಯ ಷರತ್ತು ಇರಕೂಡದು, ಹೆರಿಗೆ ಸೌಲಭ್ಯ ರಾತ್ರಿ ಪಾಳಯ ಕೆಲಸದ ರದ್ದತಿ ಮುಂತಾದ ಬೇಡಿಕೆಗಳಿಗಾಗಿ ಆಗ್ರಹಿಸಲಾಯಿತು. ಅಂದಿನಿಂದ 1911ರಿಂದ ವಿಶ್ವದ ಎಲ್ಲೆಡೆ ಆಚರಿಸಲ್ಪಡುತ್ತದೆ.

- ಯಶೋಧ

ಮುಷ್ಕರದ ಹಕ್ಕಿಗಾಗಿ ನಡೆದ ಮುಷ್ಕರದ ಅಭೂತಪೂರ್ವ ಯಶಸ್ಸನ್ನು, ಅದರ ಮಹತ್ವವನ್ನು ಗುರುತಿಸಿರುವ ಲೇಖಕರು ಶ್ರಮ ಜೀವಿಗಳ ಸಂಪೂರ್ಣ ಬಿಡುಗಡೆಯ ಹಾದಿಯಲ್ಲಿ ಸಾಗಬೇಕಾದರೆ ಪರಿಗಣಿಸಬೇಕಾದ ಮೂಲಭೂತ ಅಂಶಗಳನ್ನು ತೆರೆದಿಟ್ಟು ಚರ್ಚಿಸಿದ್ದಾರೆ

ಉದಾರೀಕರಣ ಮತ್ತು ಮುಷ್ಕರದ ಹಕ್ಕು

ವಿ.ಜೆ.ಕೆ.ನಾಯರ್

ಫೆಬ್ರವರಿ 24 ರ ಅಖಿಲ ಭಾರತ ಮುಷ್ಕರ ಕೇವಲ ಕಾರ್ಮಿಕ ವರ್ಗದ ಅಂತರ್ಗತ ಹಕ್ಕಿನ ಘೋಷಣೆ ಮಾತ್ರವಲ್ಲ, ಪ್ರಸ್ತುತ ಜಾರಿಯಲ್ಲಿರುವ ಜಾಗತೀಕರಣದ ಹಲವಾರು ವಿಷಯಗಳಿಗೆ ಸಂಬಂಧಿಸಿದುದೂ ಆಗಿದೆ.

ಜಾಗತೀಕರಣದ ಪ್ರಕ್ರಿಯೆ ಒಂದು ಬಲವಂತದ ಹೇರಿಕೆಯಾಗಿ ಬರುತ್ತದೆಯೇ ವಿನಃ ಪ್ರಜಾಪ್ರಭುತ್ವದ ಆಯ್ಕೆಯ ಮೂಲಕ ಅಲ್ಲ ಎನ್ನುವುದು ಸರ್ವವೇದ್ಯ. ಈ ಪ್ರಜಾಪ್ರಭುತ್ವ ವಿರೋಧೀ ಬಲವಂತದ ಹೇರಿಕೆಯ ಅಂಶಗಳನ್ನು ಜಾಗತೀಕರಣದ ಪ್ರಕ್ರಿಯೆಯ ಎಲ್ಲಾ ಮಜಲುಗಳಲ್ಲೂ ಕಾಣಬಹುದು.

ಜಾಗತೀಕರಣದ ಪ್ರಕ್ರಿಯೆ ಮಾರುಕಟ್ಟೆಯ ಶಕ್ತಿಗಳ ಬಿಡುಗಡೆಗೆ ಪೂರಕವಾಗಿರುತ್ತದೆ ಎಂದು ಜಾಗತೀಕರಣ ಪರ ವಕ್ತಾರರು ವಾದಿಸುತ್ತಾರೆ. ಅದರ ಗುರಿ ಶ್ರಮಿಕರ ಮಣಿಸುವಿಕೆ (Labour flexibility)ಯನ್ನು ಸಾಧಿಸುವುದೇ ಆಗಿರುತ್ತದೆ. ಅಂದರೆ ಶ್ರಮಜೀವಿಗಳಿಗಿರುವ ಭದ್ರತೆಯನ್ನು ಕೊನೆಗಾಣಿಸುವುದು. ತಮಿಳುನಾಡಿನ ನೌಕರರ ಮುಷ್ಕರವನ್ನು ಹತ್ತಿಕ್ಕಿದ ರಾಜ್ಯ ಸರ್ಕಾರದ ಕ್ರಮಗಳು ಮತ್ತು ಅದಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು, ಜಾಗತೀಕರಣದ ಶಕ್ತಿಗಳ ದೊಡ್ಡ ಸಾಧನೆಗಳಾಗಿ ಮೂಡಿಬಂದಿವೆ.

ಈ ವಿಷಯದ ಬಗ್ಗೆ ಸಮಗ್ರವಾಗಿ ಪರಿಶೀಲಿಸುವ ಅಗತ್ಯವಿದೆ. ಸಂಬಂಧಿತ ವಿಷಯವನ್ನು ಸರಿಯಾಗಿ ಗ್ರಹಿಸದಿದ್ದರೆ, ಕಾರ್ಮಿಕ ಚಳುವಳಿ ತನ್ನ ಉದ್ದೇಶಿತ ಮಾರ್ಗದಲ್ಲಿ - ಅಂದರೆ ಶ್ರಮಜೀವಿಗಳ ಸಂಪೂರ್ಣ ಬಿಡುಗಡೆಯ ಪಥದಲ್ಲಿ - ಸಾಗಲು ಸಾಧ್ಯವಾಗದು.

ಮುಷ್ಕರದ ಹಕ್ಕು

ಸಾಮೂಹಿಕವಾಗಿ ಶ್ರಮಶಕ್ತಿಯನ್ನು ತಡೆಹಿಡಿಯುವ ಹಕ್ಕೇ ನಿಜವಾದ ಅರ್ಥದಲ್ಲಿ ಮುಷ್ಕರದ ಹಕ್ಕು. ಬಂಡವಾಳಶಾಹಿ ಸಮಾಜ, ಶ್ರಮ ಶಕ್ತಿಯನ್ನು ತಡೆಹಿಡಿಯುವ ಹಕ್ಕಿನ ವಿರೋಧಿಯಾಗಿರುವುದಿಲ್ಲ. 'ಕೆಲಸ ಮಾಡದೇ ಇರುವ' ಅಂದರೆ ತನ್ನ ಶ್ರಮ ಶಕ್ತಿಯನ್ನು ಮಾರದೇ ಇರುವ ವೈಯಕ್ತಿಕ ಹಕ್ಕನ್ನು ಅದು ಮಾನ್ಯ ಮಾಡುತ್ತದೆ. ಆ ಅರ್ಥದಲ್ಲಿ, ಬಂಡವಾಳಶಾಹಿ ಬಲವಂತದ ಶ್ರಮವನ್ನು ವಿರೋಧಿಸುತ್ತದೆ. ಇದು ಗುಲಾಮೀ ಪದ್ಧತಿಗೆ ವ್ಯತಿರಿಕ್ತವಾದದ್ದು. ಆದಾಗ್ಯೂ, ಬಂಡವಾಳಶಾಹಿ ಪದ್ಧತಿಯಲ್ಲಿ, ನಾವು ಜೀತದಾಳುಗಳ ಸಂಕಷ್ಟಗಳನ್ನು ಕಾಣುತ್ತೇವೆ. ಜೀತದಾಳು ತನ್ನ ದುಡಿಮೆಯನ್ನು ನಿಲ್ಲಿಸುವ ಹಾಗಿಲ್ಲ. ಜೀತದಾಳು ಪದ್ಧತಿ ಬಂಡವಾಳಶಾಹಿ ಪೂರ್ವ ಪದ್ಧತಿಗೆ - ಅಂದರೆ ಪಾಳೆಯಗಾರಿ ಪದ್ಧತಿಗೆ - ಸಂಬಂಧಿಸಿದೆ. ಪಾಳೆಯಗಾರಿ ಹಿಡಿತ ಇನ್ನೂ ಅಸ್ತಿತ್ವದಲ್ಲಿರುವ ಮತ್ತು ಆಧುನಿಕ ಕೈಗಾರೀಕರಣದೊಂದಿಗೆ ಬೆಸೆದುಕೊಂಡಿರುವ ಒಂದು ಸಮಾಜದಿಂದ, ಜೀತದಾಳು ಪದ್ಧತಿಯನ್ನು ನಿರ್ಮೂಲನಗೊಳಿಸಲು, ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯುವುದರ ಮೂಲಕ ಮಾತ್ರ ಸಾಧ್ಯ.

ಅಲ್ಲದೆ, ಜಾಗತೀಕರಣದ ನೀತಿಗಳ ಫಲವಾಗಿ, ಗುತ್ತಿಗೆ ಕಾರ್ಮಿಕರ ಪದ್ಧತಿಯ ಹೆಚ್ಚಳವಾಗುತ್ತಿದೆ. ಉಪಗುತ್ತಿಗೆದಾರರು ಕಟ್ಟಡ ನಿರ್ಮಾಣ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಜೀತ/ವಲಸೆಗಾರ ಕಾರ್ಮಿಕರನ್ನು ಬಳಸಿಕೊಳ್ಳುತ್ತಾರೆ. ಸಹಜವಾಗಿಯೇ ಬಂಡವಾಳಶಾಹಿ ಪೂರ್ವ ಶಕ್ತಿಗಳು ಮಾತ್ರವಲ್ಲ, ಏಕಸ್ವಾಮ್ಯ ಬಂಡವಾಳ ಕೂಡ ಈ ಶಕ್ತಿಗಳೊಂದಿಗೆ ಶಾಮೀಲಾಗಿ ಬಲವಂತದ ಶ್ರಮವನ್ನು ಮುಂದುವರಿಸುತ್ತವೆ. ಈ ಹಿನ್ನೆಲೆಯಲ್ಲಿ, ಬಂಡವಾಳಶಾಹಿ ಪದ್ಧತಿ ಬಲವಂತದ ಶ್ರಮವನ್ನು ಹೇರುವುದಿಲ್ಲವಾದರೂ, ಅಂತಹ ಪ್ರವೃತ್ತಿಯ ಆಚರಣೆಗಳನ್ನು ಕಣ್ಣು ಮುಚ್ಚಿಕೊಂಡು ಸಹಿಸುತ್ತದೆ ಎಂಬ ವಾಸ್ತವವನ್ನು ಗಮನಿಸಬಹುದು.

ಬಂಡವಾಳಶಾಹಿ ಸಾಮಾನ್ಯವಾಗಿ - ಅದರಲ್ಲೂ ಜಾಗತೀಕರಣ ಪ್ರಕ್ರಿಯೆ ವಿಶೇಷವಾಗಿ - ಪ್ರಜಾಪ್ರಭುತ್ವ ಮತ್ತು ಸಬಲೀಕರಣದ ಬಗ್ಗೆ ಹೆಚ್ಚುಹೆಚ್ಚಾಗಿಯೇ ಪ್ರಸ್ತಾಪಿಸುತ್ತದೆ. ಆದರೆ ವಾಸ್ತವದಲ್ಲಿ, ಈ ಸೌಲಭ್ಯಗಳನ್ನು ಕಾರ್ಮಿಕ ವರ್ಗಕ್ಕೆ ನೀಡುವುದರಲ್ಲಿ ಹಿಂಜರಿಯುತ್ತದೆ ಎಂಬ ಅಂಶ ಮುಷ್ಕರದ ಹಕ್ಕಿನ ಕುರಿತು ವಿಶ್ಲೇಷಿದಾಗ ಮನದಟ್ಟಾಗುತ್ತದೆ.

ಮುಷ್ಕರ ಒಂದು ಸಾಮೂಹಿಕ ಕಾರ್ಯಾಚರಣೆ

ಬಂಡವಾಳಶಾಹಿ ವ್ಯವಸ್ಥೆ ವಿರೋಧಿಸುವುದು ಶ್ರಮಶಕ್ತಿಯನ್ನು ತಡೆಹಿಡಿಯುವ ವ್ಯಕ್ತಿಗತವಾದ ಹಕ್ಕನ್ನಲ್ಲ, ಬದಲಾಗಿ ಸಾಮೂಹಿಕ ಹಕ್ಕನ್ನು. ಬಂಡವಾಳಶಾಹಿ ಸಂಘಟನೆಯ ಹಕ್ಕಿಗೆ ಅವಕಾಶ ನೀಡುತ್ತದೆ; ಸಾಮೂಹಿಕ ಚೌಕಾಶಿಯ ಹಕ್ಕನ್ನು ಕೂಡ ಒಪ್ಪಿಕೊಳ್ಳುತ್ತದೆ; ಆದರೆ ಈ ಹಕ್ಕುಗಳ ಚಲಾವಣೆ ಅದರ ಹಿತಾಸಕ್ತಿಗಳಿಗೆ ಪೂರಕವಾಗಿರಬೇಕೇ ಹೊರತು ಬಂಡವಾಳಶಾಹಿ ವಿರುದ್ಧವೇ ಬಳಕೆಯಾಗಬಾರದು ಎಂದೂ ಅದು ಬಯಸುತ್ತದೆ. ಸಾಮೂಹಿಕ ವಾಗಿ ಶ್ರಮಶಕ್ತಿಯನ್ನು ತಡೆಹಿಡಿಯುವ ಹಕ್ಕು ಇಲ್ಲದೆ ಹೋದರೆ, ಸಾಮೂಹಿಕ ಚೌಕಾಶಿಯ ಹಕ್ಕಿಗೆ ಅರ್ಥವೇ ಇರುವುದಿಲ್ಲ.

ಮುಷ್ಕರ ಒಂದು ಅಂತರ್ಗತ ಹಕ್ಕು

ಬಂಡವಾಳ ಶಾಹಿ ಪದ್ಧತಿಯಲ್ಲಿ ಮುಷ್ಕರದ ಹಕ್ಕು ಮೂಲಭೂತ ಹಕ್ಕಾಗಿರಲು ಸಾಧ್ಯವೇ ಇಲ್ಲ.



ಶ್ರಮಶಕ್ತಿಯನ್ನು ಒಂದು ಸರಕನ್ನಾಗಿ ಮಾರಾಟ ಮಾಡಲು ಒತ್ತಡ ಹೇರುವ ವ್ಯವಸ್ಥೆಯೊಂದರಲ್ಲಿ, ಈ ಹಕ್ಕು ಕಾರ್ಮಿಕರಿಗೆ ಲಭ್ಯವಾಗುತ್ತದೆ. ಬಂಡವಾಳಶಾಹಿ ಸಮಾಜ ಶ್ರಮಶಕ್ತಿಯನ್ನೊಂದನ್ನುಳಿದು, ಉಳಿದ ಎಲ್ಲಾ ಸರಕುಗಳಿಗೆ ಮುಕ್ತವಾದ ಮಾರುಕಟ್ಟೆಯೊಂದನ್ನು ನಿರ್ಮಿಸಲು ಹವಣಿಸುತ್ತದೆ. ಏಕೆಂದರೆ ಉಳಿದ ಎಲ್ಲಾ ಸರಕುಗಳನ್ನು ಉತ್ಪಾದಿಸುವ ಈ ಸರಕಿಗೆ (ಅಂದರೆ ಶ್ರಮ ಶಕ್ತಿಗೆ) ಅದು ಉತ್ಪಾದಿಸಿದ ಮೌಲ್ಯವನ್ನು ಕೊಟ್ಟಲ್ಲಿ, ಲಾಭಾಂಶ ಉಳಿಯುವುದೇ ಇಲ್ಲ. ಲಾಭವಿಲ್ಲದೆ, ಬಂಡವಾಳಶಾಹಿ ವ್ಯವಸ್ಥೆಯೇ ಇರಲಾರದು. ಎಲ್ಲಾ ಸರಕುಗಳೂ ಮಾರುಕಟ್ಟೆಯಲ್ಲಿ ಮುಕ್ತವಾಗಿ ವ್ಯವಹರಿಸಬೇಕು ಎಂದು ಬಂಡವಾಳಶಾಹಿ ಪ್ರತಿಪಾದಿಸುವ ಹಾಗೆಯೇ (ಇದು ಈ ವ್ಯವಸ್ಥೆಯಲ್ಲೇ ಅಂತರ್ಗತವಾಗಿರುತ್ತದೆ), ಕಾರ್ಮಿಕ ವರ್ಗ ಕೂಡಾ ಮಾರುಕಟ್ಟೆಯನ್ನು ಪ್ರವೇಶಿಸುವ ಅಥವಾ ಶ್ರಮಶಕ್ತಿಯನ್ನು ಮಾರುಕಟ್ಟೆಯಿಂದ ಹಿಂದೆಗೆಯುವ ತನ್ನ ಹಕ್ಕನ್ನು ಅಂತರ್ಗತ ಹಕ್ಕಾಗಿ ಪ್ರತಿಪಾದಿಸಬೇಕಾಗುತ್ತದೆ. ಆಗ ಮಾತ್ರವೇ ಅದು ಶ್ರಮಶಕ್ತಿಯ ಬೆಲೆಯನ್ನು - ಅಂದರೆ ಕೂಲಿಯನ್ನು - ನಿಗದಿ ಪಡಿಸಲು ಶಕ್ತವಾಗುತ್ತದೆ. ಇದಕ್ಕೆ ವಿರುದ್ಧವಾಗಿ, ಬಂಡವಾಳಶಾಹಿ, ಕಾರ್ಮಿಕನೊಬ್ಬ ವ್ಯಕ್ತಿಗತವಾಗಿ ಶ್ರಮಿಕ ಮಾರುಕಟ್ಟೆಯನ್ನು ಪ್ರವೇಶಿಸಲು ಅಥವಾ ಹಿಂದೆಗೆಯಲು ಇಚ್ಛಿಸುತ್ತದೆಯೇ ವಿನಹ ಎಂದಿಗೂ ಸಾಮೂಹಿಕ ಸ್ತರದಲ್ಲಿ ಅದು ನಡೆಯುವುದನ್ನು ಬಯಸುವುದಿಲ್ಲ. ಮುಕ್ತವಾದ ವ್ಯವಹಾರವು ಮಾರುಕಟ್ಟೆಯ ಅಂತರ್ಗತ ಗುಣವಾಗಿರುವ ಕಾರಣದಿಂದ, ಮುಕ್ತ ಮಾರುಕಟ್ಟೆ ಮತ್ತು ಅದರ ವಕ್ತಾರರನ್ನು ಸಂಪೂರ್ಣವಾಗಿ ಬಯಲಿಗೆಳೆಯಲು, ಶ್ರಮಶಕ್ತಿಯ ಮುಕ್ತ ವ್ಯವಹಾರವನ್ನು ನಿರಾಕರಿಸುವ ಅದರ ಅಂತರ್ಗತ ಸ್ವಭಾವದ ಮೂಲಕವೇ ಸಾಧ್ಯ. ಆದುದರಿಂದ, ಮುಷ್ಕರದ ಹಕ್ಕು ಸಂವಿಧಾನಿಕ ಹಕ್ಕಾಗಬೇಕೆಂದು ಕಾರ್ಮಿಕವರ್ಗ ಬಯಸ ಬೇಕೆಂದೇನೂ ಇಲ್ಲ. ಅದೇ ಸಂದರ್ಭದಲ್ಲಿ, ಮುಷ್ಕರದ ಹಕ್ಕನ್ನು ಸಾಂವಿಧಾನಿಕವಾಗಿ ಮೊಟಕುಗೊಳಿಸುವುದನ್ನು ತಡೆಯಲು ಅದು ಹೋರಾಟಗಳನ್ನು ನಡೆಸಬೇಕಾಗುತ್ತದೆ. ಆ ಕಾರಣದಿಂದಲೇ ಮುಷ್ಕರದ ಹಕ್ಕು ಅಂತರ್ಗತವಾದದ್ದು ಎಂಬುದನ್ನು ಒತ್ತಿ ಹೇಳಬೇಕಾಗುತ್ತದೆ. ಜತೆಗೇ, ಅದನ್ನು ಸಾಂವಿಧಾನಿಕ ಹಕ್ಕಾಗಿ ನಿರೀಕ್ಷಿಸಬೇಕಾಗಿಲ್ಲ.

ಮುಷ್ಕರದ ಹಕ್ಕಿನ ಸಮಾನತೆ

ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯಗಳಲ್ಲಿ, ನೌಕರರಿಗೆ ಮುಷ್ಕರ ಹೂಡುವ ನ್ಯಾಯಸಮ್ಮತ ಹಕ್ಕಿಲ್ಲ ಎಂಬ ಅಂಶವೂ ಅಡಕವಾಗಿದೆ. ಈ ಮೊಕದ್ದಮೆಯಲ್ಲಿನ ಕಕ್ಷಿಗಳೆಂದರೆ, ನೌಕರರು, ಮಾಲೀಕರು ಮತ್ತು ಸಮಾಜ(ಅಂದರೆ ಜನಸಮುದಾಯ). ಸರ್ವೋಚ್ಚ ನ್ಯಾಯಾಲಯ ಕಕ್ಷಿಗಳನ್ನು ಮುಂದೊಡ್ಡುವ ಹಾಗೂ ಪ್ರತಿಯೊಡ್ಡುವ ಪ್ರಕ್ರಿಯೆ ನಡೆಸಿತು ಮತ್ತು ಜನಸಮುದಾಯದ ಹಿತಾಸಕ್ತಿಗೆ ಧಕ್ಕೆ ತರಬಹುದು ಎಂಬ ಕಾರಣಕ್ಕಾಗಿ, ನೌಕರರು ಮುಷ್ಕರ ಮಾಡುವಂತಿಲ್ಲ ಎಂದು ಬಯಸಿತು. ಸಾರ್ವಜನಿಕ ವಾಹನ ಸಾರಿಗೆ, ಸಾರ್ವಜನಿಕ ವಿದ್ಯಾಭ್ಯಾಸ ಮತ್ತು ಸಾರ್ವಜನಿಕ ವೈದ್ಯಕೀಯ ಸೌಲಭ್ಯಗಳ ಪ್ರಶ್ನೆಗಳನ್ನು ಅದು ಮುಂದೊಡ್ಡಿತು. ಸಾರ್ವಜನಿಕ ಸಂಚಾರ ಸಾರಿಗೆ, ವಿದ್ಯಾಭ್ಯಾಸ ಹಾಗೂ ವೈದ್ಯಕೀಯ ಸೇವೆಗಳನ್ನು ಪಡೆಯುವ ನ್ಯಾಯಯುತ ಹಕ್ಕು ಜನಸಮುದಾಯಕ್ಕೇನೋ ಇದೆ, ನಿಜ. ಆದರೆ ಸಾರಿಗೆ ನೌಕರರ, ಶಿಕ್ಷಕರ ಮತ್ತು ವೈದ್ಯಕೀಯ ಸೇವಾನಿರತರ ಸೇವೆಯನ್ನು, ಅವರ ನ್ಯಾಯಯುತವಾದ ಮತ್ತು ಯುಕ್ತವಾದ ಸೇವಾ ನಿಯಮಗಳನ್ನು ಒದಗಿಸದೇ, ಬಲವಂತವಾಗಿ ಪಡೆಯುವುದೂ ನ್ಯಾಯಸಮ್ಮತವಲ್ಲ. ವೈಯಕ್ತಿಕವಾಗಿ ಒಬ್ಬ ಸಾಗಾಣಿಕೆದಾರ ಅಥವಾ ಬೋಧಕ ಅಥವಾ ವೈದ್ಯಕೀಯ ಸೇವೆಯನ್ನು ನೀಡುವವನಿಗೆ ತನ್ನ ದರ/ಶುಲ್ಕಗಳನ್ನು ನಿಗದಿಗೊಳಿಸುವ ಹಕ್ಕು ಇರುವಾಗ, ಅದೇ ಹಕ್ಕನ್ನು ಸಾಮೂಹಿಕ ಸ್ತರದಲ್ಲಿ ಸಾಗಾಣಿಕೆದಾರರು ಅಥವಾ ವಿದ್ಯಾಭ್ಯಾಸ ನೀಡುವವರು ಅಥವಾ ವೈದ್ಯಕೀಯ ಸೇವೆ ಸಲ್ಲಿಸುವವರಾಗಿರುವ ಒಂದು ನೌಕರರ ಗುಂಪಿಗೆ ನಿರಾಕರಿಸುವುದು, ನ್ಯಾಯಸಮ್ಮತ ಹೇಗಾಗುತ್ತದೆ? ಸಾಮಾಜಿಕ ಹಿತಾಸಕ್ತಿಯ ಅಂಶದ ಹೆಸರಿನಲ್ಲಿ ಸಮಾಜದ ಒಂದು ವಿಶಾಲ ವಿಭಾಗವಾಗಿರುವ ನೌಕರರ ಹಕ್ಕುಗಳನ್ನು ರದ್ದು ಮಾಡಲು ಸಾಧ್ಯವಿಲ್ಲ. ಆದುದರಿಂದಲೇ ಇಂತಹ ಪರಿಸ್ಥಿತಿಯಲ್ಲಿ ಮುಷ್ಕರದ ಹಕ್ಕನ್ನು ನಿರಾಕರಿಸುವುದೆಂದರೆ ನ್ಯಾಯದ ನಿರಾಕರಣೆಯೇ ಸರಿ.

ಮುಷ್ಕರ ಮಾಡುವ ನೈತಿಕ ಹಕ್ಕು

ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪಿನಲ್ಲಿ, ನೌಕರರಿಗೆ ಮುಷ್ಕರ ಮಾಡುವ ನೈತಿಕ ಹಕ್ಕನ್ನು ಸಹ ನಿರಾಕರಿಸಿತು. ಈ ಮೊಕದ್ದಮೆಯಲ್ಲಿ ಅಡಕವಾಗಿದ್ದ ನೈತಿಕ ಪ್ರಶ್ನೆ ಬರುವುದು ಏಕಪಕ್ಷೀಯವಾಗಿ ಸೇವಾ ನಿಯಮಾವಳಿಗಳನ್ನು ಬದಲಾಯಿಸಿದ ಬಗ್ಗೆ. ಸೇವಾ ನಿಯಮಗಳನ್ನು ಬದಲಾಯಿಸಿದ ತಮಿಳುನಾಡು ಸರ್ಕಾರದ ಆದೇಶಗಳೇನಾದರೂ, ಸಾಮೂಹಿಕ ಚೌಕಾಶಿಯ ನಂತರ ಅಥವಾ ನ್ಯಾಯಾಂಗದ ನಿರ್ದೇಶಗಳಿಗನುಸಾರವಾಗಿ ಬಂದದ್ದೇ ಆಗಿದ್ದಲ್ಲಿ, ನೌಕರರು ತಮ್ಮ ನೈತಿಕ ನೆಲೆಯನ್ನು ಮುಂದಿಡಲಾಗುತ್ತಿರಲಿಲ್ಲ. ಸರ್ಕಾರ ಏಕಪಕ್ಷೀಯವಾದ ಕ್ರಮಗಳನ್ನು ತೆಗೆದುಕೊಂಡದ್ದೇ ಅಲ್ಲದೇ, ನೌಕರರ ಸಾಮೂಹಿಕ ಚಳುವಳಿಯ ಹಕ್ಕನ್ನು ಕಸಿಯಲು ಸುಗ್ರೀವಾಜ್ಞೆಯ ಮೂಲಕ ಪ್ರಯತ್ನಿಸಿದ ಹಿನ್ನೆಲೆಯಲ್ಲಿ, ನೈತಿಕ ನೆಲೆಯನ್ನು ಪ್ರಶ್ನಿಸಲು ಸರ್ವೋಚ್ಚ ನ್ಯಾಯಾಲಯಕ್ಕೆ ಆಧಾರಗಳೇನೂ ಇರಲಿಲ್ಲ.

24.2.04 ರ ಮುಷ್ಕರದ ಮಹತ್ವ

ದೇಶದ ಉದ್ದಗಲಕ್ಕೂ ಕೋಟ್ಯಾಂತರ ಕಾರ್ಮಿಕರು ಯಾವುದೇ ಅಡ್ಡಿ, ಆತಂಕಗಳಿಲ್ಲದೇ ಮುಷ್ಕರದ ಹಕ್ಕನ್ನು ಪ್ರತಿಪಾದಿಸಿದ್ದಾರೆ ಎಂಬ ವಾಸ್ತವವೇ ಅಂತಹ ಹಕ್ಕುಗಳನ್ನು ಪ್ರತಿಪಾದಿಸಲು ಕಾರ್ಮಿಕ ವರ್ಗಕ್ಕೆ ಸಾಧ್ಯ ಎಂಬುದನ್ನು ದೃಢಪಡಿಸುತ್ತದೆ. ಸರ್ಕಾರಿ ನೌಕರರ ಮುಷ್ಕರದ ಹಕ್ಕಿನ ನಿರಾಕರಣೆಯೇ ಪ್ರಧಾನ ವಿಷಯವಾಗಿದ್ದರೂ ಸಹಾ, ಎಲ್ಲಾ ವಿಭಾಗದ ಕಾರ್ಮಿಕರು- ಸರ್ಕಾರಿ ನೌಕರರು, ವಿತ್ತೀಯ ಕ್ಷೇತ್ರದ ಹಾಗೂ ಸಾರ್ವಜನಿಕ ವಲಯದ ನೌಕರರು ಅಲ್ಲದೆ ಅಸಂಘಟಿತ ನೌಕರರೂ ಒಳಗೊಂಡಂತೆ - ಮುಷ್ಕರ ನಡೆಸಿದರು. ಇಡೀ ವರ್ಗವೇ ಒಂದಾಗಿ ನಡೆಸಿದ ಕಾರ್ಯಾಚರಣೆ ಅದಾಗಿತ್ತು. ತಮ್ಮ ಸಾಮೂಹಿಕ ಹಿತಾಸಕ್ತಿಯ ಪ್ರತಿಪಾದನೆಗೆ ಅನುವಾಗುವಂತೆ ಹಾಗೂ ಇಡೀ ವರ್ಗದ ಹಿತಾಸಕ್ತಿಗಳ ರಕ್ಷಣೆಗಾಗಿ ಇಂತಹ ಹೋರಾಟಗಳನ್ನು ನಿಯಮಿತವಾಗಿ ಬೆಳೆಸಬೇಕಾಗಿದೆ. ಮುಷ್ಕರದ ಹಕ್ಕು, ಜೀವನೋಪಾಯದ ಹಕ್ಕು ಮುಂತಾದ ಅಮೂರ್ತ ಹಕ್ಕುಗಳಿಗಾಗಿ ನಡೆಸುವ ಇಂತಹ ಕಾರ್ಯಾಚರಣೆಗಳ ಮೂಲಕ ಬಂಡವಾಳಶಾಹಿ ಸಮಾಜದ ಬಾಧ್ಯತೆಗಳನ್ನು ಹೆಚ್ಚು ನಿಖರವಾಗಿ ಬಯಲಿಗೆಳೆಯಬಹುದು. ❍

ದೇಶದಲ್ಲಿ ಸಾಧಾರಣ 70 ಸ್ಥಾನಗಳಿಗೆ ಸ್ಪರ್ಧಿಸಲು ಕೇಂದ್ರಸಮಿತಿ ನಿರ್ಧರಿಸಿದ್ದು ಸಂಸತ್ತಿನಲ್ಲಿ ಎಡಪಕ್ಷಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಸಿಪಿಐ(ಎಂ) ಪಕ್ಷವು ಪ್ರಯತ್ನಿಸುತ್ತದೆ.

ಕೋಮುವಾದಿಗಳನ್ನು ಸೋಲಿಸಿ

ಜಾತ್ಯತೀತ ಸರ್ಕಾರದ ಸ್ಥಾಪನೆಗೆ ಎಡಪಕ್ಷಗಳನ್ನು ಬಲಪಡಿಸಿ

ದೇಶದಲ್ಲಿ ಚುನಾವಣಾ ಹೋರಾಟದ ಕಣ ಸಿದ್ಧಗೊಳ್ಳುತ್ತಿರುವ ಸಂದರ್ಭದಲ್ಲಿ ಬಿಜೆಪಿ ಕೂಟದ ದುಷ್ಟ-ಅಪಾಯಕಾರಿ ಆಡಳಿತದ ಅನಾಹುತಗಳನ್ನು ಸೋಲಿಸಲು, ಪರ್ಯಾಯವಾಗಿ ಎಂತಹ ಸರ್ಕಾರ ಬರಬೇಕೆಂಬುದನ್ನು ಆಳವಾಗಿ ವಿಶ್ಲೇಷಿಸಿ-ಚರ್ಚಿಸಿರುವ ಸಿಪಿಐ(ಎಂ), ಜನತೆಯ ಮುಂದಿರುವ ರಾಜಕೀಯ ಕರ್ತವ್ಯಗಳನ್ನು ಗುರುತಿಸಿದೆ. ಅವೇನವು ?... ಓದಿ

1998 ರಿಂದ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಸರಕಾರ, 1999 ರ ಅಕ್ಟೋಬರ್‌ನಲ್ಲಿ ಪುನಃ ಆಯ್ಕೆಯಾಗಿ ಬಂದ ನಂತರ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ವಿದೇಶಾಂಗ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಅನುಸರಿಸಿದ ನೀತಿ ಜನರಿಗೆ ಮತ್ತು ಈ ದೇಶಕ್ಕೆ ಮಾರಕವಾಗಿದ್ದು, ಇದೇ ಸರಕಾರ ಮುಂದುವರಿದದ್ದೇ ಆದಲ್ಲಿ ವಿನಾಶ ಕಟ್ಟಿಟ್ಟ ಬುತ್ತಿ.

ಬಿಜೆಪಿ ಆಡಳಿತದ ಅಡಿಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್.ಎಸ್.ಎಸ್)ವು ಸರಕಾರದ ಎಲ್ಲಾ ಅಂಗಗಳಲ್ಲಿ ತೂರುತ್ತಿದ್ದು, ಇಡೀ ಸಮಾಜವನ್ನು ಕೋಮುವಾದೀಕರಣ ಗೊಳಿಸಲು ಯತ್ನಿಸುತ್ತಿದೆ. ತನ್ನ ಹಿಡಿತವನ್ನು ಸಾಧಿಸಲು ಎನ್‌ಡಿಎ ಮೈತ್ರಿಕೂಟ ಅದಕ್ಕೆ ಮುಖವಾಡವಾಗಿದೆ ಅಷ್ಟೆ. ಸಾಮ್ರಾಜ್ಯಶಾಹಿಪರ ಮತ್ತು ಶ್ರೀಮಂತರ ಪರ ನೀತಿಗಳನ್ನು ಜಾರಿ ಮಾಡುತ್ತಿರುವ ವಾಜಪೇಯಿ ಸರಕಾರದ ನೀತಿಗಳಿಂದ ದೇಶದ ಆರ್ಥಿಕ ಸಾರ್ವಭೌಮತೆಗೆ ಧಕ್ಕೆ ಉಂಟಾಗಿರುವುದು ಮಾತ್ರವಲ್ಲದೆ ಜನಸಾಮಾನ್ಯರ ಶೋಷಣೆಗೆ ಇನ್ನಷ್ಟು ದಾರಿ ಮಾಡಿಕೊಟ್ಟಿದೆ. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸಿ, ವಿದೇಶಿ ಮತ್ತು ದೇಶೀಯ ದೊಡ್ಡ ಉದ್ದಿಮೆದಾರರಿಗೆ ನೀಡುತ್ತಿರುವ ಸರಕಾರದ ನೀತಿ ಜನತೆಯ ಆಶೋತ್ತರಗಳಿಗೆ ವಿರುದ್ಧವಾದುದು. ಬೀದಿಗಳಲ್ಲಿ ಅಲೆದಾಡುವ ನಿರುದ್ಯೋಗಿ ಕಾರ್ಮಿಕರು, ರೈತರ ಆತ್ಮಹತ್ಯೆ, ಉದ್ಯೋಗವಿಲ್ಲದೆ ಚಿಂತೆಗೀಡಾದ ಯುವಜನರು ಮತ್ತು ಮಹಿಳೆಯರು, ರೇಶನ್ ದರ ಹೆಚ್ಚಳದಿಂದ ದಿಕ್ಕೆಟ್ಟ ಬಡಜನರು, ಹಸಿವಿನಿಂದ ಬಳಲುತ್ತಿರುವ ದಲಿತ ಮತ್ತು ಬುಡಕಟ್ಟು ಜನರು - ಈ ಸರಕಾರದ ನೀತಿಗಳ ಪ್ರತಿಬಿಂಬವಾಗಿದೆ.

ಸರ್ವಾಧಿಕಾರಿ ಹೇರಿಕೆ

ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲದ ಬಿಜೆಪಿ ಸರಕಾರ, ಅವಕಾಶ ಸಿಕ್ಕಿದಲ್ಲಿ ಸರ್ವಾಧಿಕಾರಿ ಸರಕಾರವನ್ನು ಜನತೆಯ ಮೇಲೆ ಹೇರಲು ಹಿಂಜರಿಯುವುದಿಲ್ಲ. ಜನಪರ ನೀತಿಗಳನ್ನು ಅನುಸರಿಸುವ ರಾಜ್ಯಗಳು ತಮ್ಮದೇ ಆದ ಆರ್ಥಿಕ ನೀತಿಗಳನ್ನು ಜಾರಿ ಮಾಡುವ ಹಕ್ಕುಗಳಿಗೆ ಕೇಂದ್ರ ಸರಕಾರ ಕತ್ತರಿ ಹಾಕುತ್ತಿದೆ. ಪ್ರಜಾಪ್ರಭುತ್ವ ವಿರೋಧಿ 'ಪೋಟಾ' (pota) ಕಾನೂನನ್ನು ಜಾರಿಗೆ ತಂದು ವಿರೋಧಿಗಳನ್ನು ಬಗ್ಗುಬಡಿಯಲು ಉಪಯೋಗಿಸಲಾಗುತ್ತಿದೆ.

ಬಿಜೆಪಿ ಆಡಳಿತ ಗುಜರಾತ್ ಹತ್ಯಾಕಾಂಡದ ಬರ್ಬರತೆ ಮತ್ತು ಅಲ್ಪಸಂಖ್ಯಾತರ ಮೇಲಿನ ಸತತ ಧಾಳಿಗೆ ಕುಖ್ಯಾತವಾಗಿದೆ. ಮಧ್ಯಪ್ರದೇಶದಲ್ಲಿ ಬಿಜೆಪಿ ಆಡಳಿತ ಬಂದನಂತರ ಜಬುವ ಎಂಬ ಪ್ರದೇಶದಲ್ಲಿ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆಯು, ಮುಂದುವರಿದಿದೆ. ಭಾರತದ ವೈವಿಧ್ಯಮಯ ಸಂಸ್ಕೃತಿ ಮತ್ತು ರಾಷ್ಟ್ರೀಯ ಐಕ್ಯತೆಗೆ ಬಿಜೆಪಿ ಬದ್ಧವಲ್ಲ ಎಂಬ ಕರಾಳ ಸತ್ಯವನ್ನು ಇದು ನೆನಪಿಸುತ್ತದೆ.

ವಿದೇಶಾಂಗ ನೀತಿ: ಶರಣಾಗತಿ

ಭಾರತದ ವಿದೇಶಾಂಗ ನೀತಿ ಇಂದು ಸ್ವತಂತ್ರವಾಗಿ ಅಥವಾ ಅಲಿಪ್ತ ನೀತಿಯ ಆಧಾರದಲ್ಲಿ ಉಳಿದಿಲ್ಲ. ಹಿಂದಿನ ಯಾವುದೇ ಸರಕಾರ ಅಮೇರಿಕಾದ ಕುತಂತ್ರಕ್ಕೆ ಇಷ್ಟೊಂದು ದೊಡ್ಡಮಟ್ಟದಲ್ಲಿ ಶರಣಾಗಿಲ್ಲ.

ಚುನಾವಣಾ ಆದ್ಯತೆ :

ಲೋಕಸಭೆ ಹಾಗೂ ಕೆಲವೊಂದು ರಾಜ್ಯಗಳಲ್ಲಿ ನಡೆಯಲಿರುವ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಮತ್ತು ಅದರ ಮೈತ್ರಿಕೂಟವನ್ನು ಸೋಲಿಸುವುದು, ಸಿಪಿಐ(ಎಂ) ಮತ್ತು ಇತರೆ ಎಡ, ಪ್ರಜಾಪ್ರಭುತ್ವ ಶಕ್ತಿಗಳ ಪ್ರಮುಖ ಕರ್ತವ್ಯವಾಗಿದೆ.

ಚುನಾವಣಾ ತಂತ್ರ :

ಈ ಹಿನ್ನೆಲೆಯಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳನ್ನು ಸೋಲಿಸುವುದು ತನ್ನ ಪ್ರಮುಖಕರ್ತವ್ಯ ಎಂದು ಸಿಪಿಐ(ಎಂ) ಪರಿಗಣಿಸುತ್ತದೆ. ಅಂತೆಯೇ ಕೇಂದ್ರದಲ್ಲಿ ಜಾತ್ಯಾತೀತ ಸರಕಾರವನ್ನು ಅಧಿಕಾರಕ್ಕೆ ತರಲು ತನ್ನೆಲ್ಲ ಶಕ್ತಿಯನ್ನು ಒಗ್ಗೂಡಿಸುತ್ತದೆ.

ಸ್ವತಂತ್ರ ಪ್ರಚಾರ :

ಕಾಂಗ್ರೆಸ್‌ನೊಂದಿಗೆ ಮೈತ್ರಿ ಇಲ್ಲ

ಈ ಗುರಿಯನ್ನು ಈಡೇರಿಸುವುದಕ್ಕಾಗಿ ದೇಶದಾದ್ಯಂತ ಸಿಪಿಐ(ಎಂ) ಸ್ವತಂತ್ರವಾಗಿ ಪ್ರಚಾರ ನಡೆಸುತ್ತದೆ. ಅಂತೆಯೇ ಇತರ ಎಡಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಮಿತ್ರ ಪಕ್ಷಗಳೊಂದಿಗೆ ಜಂಟಿ ಪ್ರಚಾರವನ್ನು ನಡೆಸುತ್ತದೆ. ಅದೇ ಸಂದರ್ಭದಲ್ಲಿ ಕಾಂಗ್ರೆಸ್‌ನೊಂದಿಗೆ ಯಾವುದೇ ಮೈತ್ರಿ ಅಥವಾ ರಂಗವನ್ನು ಸಿಪಿಐ(ಎಂ) ರಚಿಸುವುದಿಲ್ಲ. ಸಿಪಿಐ(ಎಂ) ನಡೆಸುವ ಸ್ವತಂತ್ರ ಪ್ರಚಾರದಲ್ಲಿ ಕಾಂಗ್ರೆಸ್ಸಿನ ಜನವಿರೋಧಿ ಆರ್ಥಿಕ ನೀತಿಯನ್ನು ವಿರೋಧಿಸುತ್ತದೆ.

ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳನ್ನು ಸೋಲಿಸುವ ನಿಟ್ಟಿನಲ್ಲಿ ಬಿಜೆಪಿ ವಿರೋಧಿ ಮತಗಳು ಹರಿದು ಹಂಚಿಹೋಗದಂತೆ ತಡೆಯಲು ಸಿಪಿಎಂ ಪ್ರಯತ್ನಿಸುತ್ತಿದೆ. ಎಡಪಕ್ಷಗಳು ದೊಡ್ಡ ಶಕ್ತಿಯಾಗಿಲ್ಲದೆ, ಬಿಜೆಪಿ ಮತ್ತು ಕಾಂಗ್ರೆಸ್ ನಡುವಣ ನೇರ ಹಣಾಹಣಿ ಇರುವ ರಾಜ್ಯಗಳಲ್ಲಿ, ಪಕ್ಷವು ಕೆಲವೇ ಸ್ಥಾನಗಳಿಗೆ ಸ್ಪರ್ಧಿಸುವುದು ಹಾಗೂ ಬಿಜೆಪಿ ಮೈತ್ರಿಕೂಟವನ್ನು ಸೋಲಿಸಲು ಪ್ರಚಾರ ನಡೆಸುವುದು ಎಂದು ನಿರ್ಧರಿಸಿದೆ.

ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

14 ನೇ ಲೋಕಸಭಾ ಚುನಾವಣೆಯ ನಂತರ ಜಾತ್ಯಾತೀತ ಸರಕಾರವನ್ನು ಕೇಂದ್ರದಲ್ಲಿ ಸ್ಥಾಪಿಸುವುದು ಸಿಪಿಐ(ಎಂ)ನ ಮೂಲಭೂತ ಗುರಿಯಾಗಿದೆ. ಜಾತ್ಯಾತೀತ ಮತ್ತು ಒಕ್ಕೂಟ ತತ್ವವನ್ನು ರಕ್ಷಿಸಲು ಮತ್ತು ಪ್ರಜಾಪ್ರಭುತ್ವ, ಆರ್ಥಿಕ ಸ್ವಾವಲಂಬನೆ ಹಾಗೂ ಸಾಮಾಜಿಕ ನ್ಯಾಯದ ಆಧಾರದಲ್ಲಿ ದೇಶವನ್ನು ಮುನ್ನಡೆಸಲು ಬಿಜೆಪಿಯನ್ನು ಸೋಲಿಸುವುದು ಅಗತ್ಯವಾಗಿದೆ.

ಇತ್ತೀಚೆಗೆ ಸಭೆ ಸೇರಿದ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯು, ಲೋಕಸಭೆಗೆ ಹಾಗೂ ಕೆಲವು ರಾಜ್ಯಗಳ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಕೋಮುವಾದಿ ಬಿಜೆಪಿಯನ್ನು ಸೋಲಿಸಿ, ಎಡಪಕ್ಷಗಳನ್ನು ಬಲಪಡಿಸುತ್ತಾ ಜಾತ್ಯಾತೀತ ಸರಕಾರದ ಸ್ಥಾಪನೆಗೆ ನೆರವಾಗಬೇಕೆಂದು ದೇಶದ ಜನತೆಗೆ ಕರೆ ನೀಡಿದೆ.


ಎಡಪಕ್ಷಗಳನ್ನು ಬಲಗೊಳಿಸಿ ಜನತೆಗೆ ಮನವಿ

14ನೇ ಲೋಕಸಭಾ ಚುನಾವಣೆಯು ನಿರ್ಣಾಯಕ ಹೋರಾಟವಾಗಲಿದೆ. ಬಿಜೆಪಿ, ಆರ್.ಎಸ್.ಎಸ್. ಕೂಟ ಹಿಂದುತ್ವ ಕಾರ್ಯಸೂಚಿಯನ್ನು ತಡೆಗಟ್ಟಬೇಕು. ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ತತ್ವಗಳನ್ನು ಸದೃಢಗೊಳಿಸಲು ಜನರು ನಿರ್ಧರಿಸಬೇಕು. ಈ ನಿಟ್ಟಿನಲ್ಲಿ ಕೋಮುವಾದಿ ಕಾರ್ಯಸೂಚಿಗೆ ಮುಖವಾಡವಾಗಿರುವ ಬಿಜೆಪಿ - ಎನ್.ಡಿ.ಎ ಮೈತ್ರಿಯನ್ನು ನಿರ್ಣಾಯಕವಾಗಿ ಸೋಲಿಸಬೇಕು. ಜನರ ದೈನಂದಿನ ಜೀವನಕ್ಕೆ ಮಾರಕವಾದ ಆರ್ಥಿಕ ನೀತಿಗಳನ್ನು ಅನುಸರಿಸುತ್ತಿರುವ ಸರಕಾರದ ಹಿಡಿತದಿಂದ ಜನರನ್ನು ಬಿಡುಗಡೆಗೊಳಿಸಬೇಕು.

ಜಾತ್ಯಾತೀತ ಸರ್ಕಾರದ ಸ್ಥಾಪನೆಗಾಗಿ ಹಾಗೂ ಸಿಪಿಐ(ಎಂ) ಪ್ರಮುಖ ಭಾಗವಾಗಿರುವ ಎಡಪಕ್ಷಗಳನ್ನು ಬಲಪಡಿಸುವುದಕ್ಕಾಗಿ ದೇಶದ ಜನರು ಮತ ಚಲಾಯಿಸಬೇಕೆಂದು ಕೇಂದ್ರಸಮಿತಿ ಮನವಿ ಮಾಡುತ್ತದೆ.

ಇಡೀ ಜನ ಸಮೂಹದ ನಡುವೆ ವಿಶಾಲವಾದ ಮತ್ತು ತೀವ್ರವಾದ ರಾಜಕೀಯ ಪ್ರಚಾರ ನಡೆಸುವ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಗೆಲುವಿಗೆ ಸಿದ್ಧತೆ ನಡೆಸಬೇಕೆಂದು ಕೇಂದ್ರಸಮಿತಿಯು ತನ್ನೆಲ್ಲ ಪಕ್ಷದ ಘಟಕಗಳಿಗೆ ಕರೆ ನೀಡಿದೆ.

ಬಿ.ಜೆ.ಪಿ. ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದನಂತರ.....?



ಏರುತ್ತಿರುವ ಬೆಲೆಗಳು

ಉತ್ಪನ್ನ	ಏಪ್ರಿಲ್ 1998	ಅಕ್ಟೋಬರ್2000	ಜನವರಿ-2003	ಜನ/ಫೆಬ್ರವರಿ-2004
ಸೀಮೆ ಎಣ್ಣೆ	ರೂ 2.56	8.35	10.50	12.50
ಡೀಸೆಲ್	ರೂ.10-01	16.55	23.65	25-22
ಪೆಟ್ರೋಲ್	ರೂ.22.84	28.44	36.10	39-68
ಎಲ್.ಪಿ.ಜಿ.ಗ್ಯಾಸ್	ರೂ.136.00	232.25	262.20	262-80

ಸೀಮೆ ಎಣ್ಣೆ ಮತ್ತು ಎಲ್‌ಪಿಜಿ ಗ್ಯಾಸ್ ಮೇಲಿನ ಸಬ್ಸಿಡಿಯನ್ನು ಮಧ್ಯಾವದಿ ಬಜೆಟ್ ಸಂದರ್ಭದಲ್ಲಿ ಇನ್ನಷ್ಟು ಕಡಿತಗೊಳಿಸಲಾಗಿದ್ದು ಬಿಜೆಪಿ ಸರಕಾರ ಪುನಃ ಅಧಿಕಾರಕ್ಕೆ ಬಂದಲ್ಲಿ ದರವನ್ನು ಹೆಚ್ಚಿಸಲಾಗುತ್ತದೆ. 1999 ರಲ್ಲಿ ಲೋಕಸಭಾ ಚುನಾವಣೆ ಫಲಿತಾಂಶ ಬಂದು ಅಧಿಕಾರ ವಹಿಸಿಕೊಳ್ಳುವ ಮೊದಲೇ ಡೀಸೇಲ್ ಮತ್ತು ಪೆಟ್ರೋಲ್ ಬೆಲೆ ಹೆಚ್ಚಿಸಿದುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ರಾಸಾಯನಿಕ ಗೊಬ್ಬರದ ಬೆಲೆ

	ಜೂನ್ 1998	2004
ಯೂರಿಯಾ (ಟನ್ನಿಗೆ)	ರೂ.3680	ರೂ.4380
ಡಿಎಪಿ (ಟನ್ನಿಗೆ)	ರೂ.8300	ರೂ. 9350
ಎನ್.ಪಿ.ಕೆ (ಟನ್‌ಗೆ)	ರೂ. 7500	ರೂ. 8060



ವಸೂಲಿಯಾಗದ ತೆಂಗೆ

ಮಾರ್ಚ್ 31, 1998 - 47,888 ಕೋಟಿ ರೂ.
ಮಾರ್ಚ್ 31,2003 - 86,342 ಕೋಟಿ ರೂ.
(ಈಗ ಬಹುಶಃ 1 ಲಕ್ಷ ಕೋಟಿ ದಾಟಿರಬೇಕು)

ಇದಲ್ಲದೆ ವಾಪಾಸು ಬಾರದ ಬ್ಯಾಂಕ್ ಸಾಲ (ಎನ್.ಪಿ.ಎ) 1 ಲಕ್ಷ ಕೋಟಿ ರೂ. ಇದೆಲ್ಲ ಶ್ರೀಮಂತರ, ದೊಡ್ಡ ಕಂಪನಿಗಳ ಜೇಬಿಗೆ

ರೇಶನ್ ಬೆಲೆ

	1999 ಬಡತನ ರೇಖೆಗಿಂತ ಕೆಳಗಿರುವವರು (BPL)		2003-04 ಬಡತನದ ರೇಖೆಗಿಂತ ಮೇಲಿರುವವರು	
1. ಗೋಧಿ ಪ್ರತಿ ಕೆ.ಜಿ.ಗೆ	ರೂ.2-50	4-50	ರೂ-4.50	ರೂ. 9.00
2. ಅಕ್ಕಿ	3.50	5.90	ರೂ.5-90	11.80

ಉದ್ಯೋಗ ಅವಕಾಶ

	ವಿನಿಮಯ ಕಛೇರಿಗಳಲ್ಲಿ ನೋಂದಣಿಯಾದವರು	ಉದ್ಯೋಗ ಸಿಕ್ಕಿದ್ದು ವರ್ಷದ ಕೊನೆಯಲ್ಲಿ	ಒಟ್ಟು ನೋಂದಣಿ ಸಂಖ್ಯೆ
1997	63,21,900	2,75,000	3,91,39,000
2002(ಜನ-ಅಗಸ್ಟ್)	35,11,700	98,900	4,16,15,000

ಭಾರತ ದೇಶದ ಜನಪರ ಸಂಸ್ಕೃತಿಯನ್ನು ಬೆಳೆಸುವಲ್ಲಿ, ಸಕ್ರಿಯವಾಗಿರುವ ಪ್ರಮುಖ ಸಾಂಸ್ಕೃತಿಕ ಸಂಘಟನೆಗಳ ಸಭೆಯು ಈಚೆಗೆ ಬಿಹಾರದ ಪಾಟ್ನಾದಲ್ಲಿ ಸಮಾವೇಶಗೊಂಡಿತ್ತು. ವರ್ತಮಾನದ ವಿದ್ಯಮಾನಗಳನ್ನು ವೈಜ್ಞಾನಿಕವಾಗಿ ಅವಲೋಕಿಸಿದ ಸಭೆ ಒಂದು ಮಹತ್ವದ ಕರೆಯನ್ನು ಜನತೆಗೆ ನೀಡಿದೆ. ಅದಲ್ಲಿ ಭಾಗಿಯಾದ ಸುರೇಂದ್ರ ರವರಿಂದ ಒಂದು ವರದಿ

‘ಸಂಸ್ಕೃತಿ ಉಳಿಯಬೇಕು’

ಜನಪರ ರಂಗಕರ್ಮಿಗಳ ಸಭೆ ನಿರ್ಧಾರ

ದೇಶಾದ್ಯಂತ ಅನೇಕ ಜನಪರ ನಾಟಕ ತಂಡಗಳು ಜನಜಾಗೃತ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಬಹುಪಾಲು ಎಲ್ಲಾ ರಾಜ್ಯಗಳಲ್ಲೂ - ಕರ್ನಾಟಕದ “ಸಮುದಾಯ” ತಂಡವನ್ನೂ ಒಳಗೊಂಡಂತೆ - ಜನಪರ ಕಾರ್ಯದಲ್ಲಿ ನಿರತವಾಗಿವೆ. ಈ ಎಲ್ಲಾ ತಂಡಗಳನ್ನು ಒಂದು ಕಡೆ ಸೇರಿಸಿ ವಿಚಾರವಿನಿಮಯ ನಡೆಸುವ ಕೆಲಸವನ್ನು ದೆಹಲಿಯ ಜನನಾಟ್ಯಮಂಚ್ ತಂಡ ಕಳೆದ ಎರಡು ವರ್ಷಗಳಿಂದ ನಡೆಸಿಕೊಂಡುಬಂದಿದೆ. ಈಗಾಗಲೇ ಅಂತಹ ಸಭೆಗಳು ದೆಹಲಿ, ಹೈದರಾಬಾದ್, ಗೌಹತಿಗಳಲ್ಲಿ ನಡೆದಿವೆ. ಫೆಬ್ರವರಿ 26 ರಿಂದ 28 ರವರೆಗೆ ಮೂರು ದಿನಗಳ ಸಭೆಯೊಂದನ್ನು ಬಿಹಾರದ ರಾಜಧಾನಿ ಪಾಟ್ನಾದಲ್ಲಿ ಸಂಘಟಿಸಲಾಗಿತ್ತು. ಕರ್ನಾಟಕದ ಸಮುದಾಯದ ಪರವಾಗಿ ಸುರೇಂದ್ರರಾವ್ ಹಾಗೂ ಹೊಸಪೇಟೆಯ “ಭಾವೈಕ್ಯತಾ ವೇದಿಕೆಯ” ಅಬ್ದುಲ್ಲಾ ಸಂಗಡಿಗರು ಭಾಗವಹಿಸಿದ್ದರು. ಸರ್ವಾನುಮತದಿಂದ ಅಂಗೀಕರಿಸಿದ ನಿರ್ಣಯವನ್ನು ಇಲ್ಲಿ ನೀಡಲಾಗಿದೆ.

ಜನಸಂಸ್ಕೃತಿ ಉಳಿಸಲು ಕೋಮುವಾದಿ ಶಕ್ತಿಗಳನ್ನು ಸೋಲಿಸಿ

ನಮ್ಮ ಸಾಮಾಜಿಕ ಬದುಕಿನ ಪ್ರತಿಯೊಂದು ರಂಗದಲ್ಲಿ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ತನ್ನ ಆಕ್ರಮಣಕಾರೀ ಅಧಿಪತ್ಯವನ್ನು ಸ್ಥಾಪಿಸುತ್ತಿದೆ. ಪ್ರಜಾಸತ್ತಾತ್ಮಕ ಚಿಂತನೆಗಳು, ಸಂಸ್ಥೆಗಳು ಮತ್ತು ಚಳುವಳಿಗಳು ಅದರ ಅತ್ಯಂತ ದೊಡ್ಡ ಶತ್ರುಗಳಾಗಿವೆ. ಹೆನ್ರಿ ಕಿಸಿಂಜರ್‌ನ ದೃಷ್ಟಿಯಲ್ಲಿ ಜಾಗತೀಕರಣವೆಂದರೆ ಅಮೇರಿಕೀಕರಣ. ಕಿಸಿಂಜರ್‌ನ ಈ ಅಭಿಪ್ರಾಯವು, ಪ್ರಜಾಪ್ರಭುತ್ವಕ್ಕೆ ನೇರ ಅಪಾಯವನ್ನೊಡ್ಡಿದೆ ಮತ್ತು ಭಾರತದ ಜನರ ಸಂವಿಧಾನಿಕ ಹಕ್ಕುಗಳ ಮೇಲೆ ಧಾಳಿ ಮಾಡುವ ಪ್ರಯತ್ನವಾಗಿದೆ. ಏಕೆಂದರೆ ಅವ್ಯಾಹತವಾಗಿ ಭಾರತದ ಜನರ ಮೇಲೆ ಹೇರುತ್ತಿರುವ ನವ ಉದಾರೀಕರಣ ನೀತಿಯು ಜಾಗತೀಕರಣದ ಬಹು ಪ್ರಮುಖ ಅಂಗವಾಗಿದೆ. ಈ ಸಾಮ್ರಾಜ್ಯವಾದಿ ಧಾಳಿಯು ಸಮಾನ ರುಚಿಯ ಬ್ರಾಂಡಿನ ಉತ್ಪನ್ನಗಳು, ಅತ್ಯಂತ ಕೀಳುಮಟ್ಟದ ಕೊಳ್ಳುಬಾಕತನ ಹಾಗೂ ಒಬ್ಬರ ಶ್ರೇಷ್ಠತೆಯನ್ನು ಸ್ಥಾಪಿಸಲು ಹುಚ್ಚು ಪೈಪೋಟಿ ಹೀಗೆ ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಯುವಜನರ ಆಲೋಚನಾ ಪ್ರಕ್ರಿಯೆಗೆ ಹೊಸ ರೂಪ ಕೊಡುತ್ತಿರುವ ಸಂದರ್ಭದಲ್ಲೇ ಅವರನ್ನು ಬೇಜವಾಬ್ದಾರಿ, ಸಂವೇದನರಹಿತ, ಸ್ವಾರ್ಥಿಗಳನ್ನಾಗಿ ಪರಿವರ್ತಿಸುವ ಮೂಲಕ ಜನಸಮುದಾಯದಿಂದ ಯುವಕರನ್ನು ಪ್ರತ್ಯೇಕಿಸುವ ಕ್ರಿಯೆಗೆ ಸಾಮ್ರಾಜ್ಯವಾದ ಚಾಲನೆ ನೀಡಿದೆ.

ಜಾಗತೀಕರಣವು ಕ್ರಮೇಣವಾಗಿ ಶಿಕ್ಷಣ, ಸಾಹಿತ್ಯ ಹಾಗೂ ಸಂಸ್ಕೃತಿ ರಂಗಗಳಲ್ಲೂ ನುಸುಳುತ್ತಿದೆ. ಕೆಲವು ಬಾರಿ ಆಧುನಿಕತೆಯ ನಂತರ ಎಂಬ ವಾದದ (post modernism)ದ ಹೆಸರಿನಲ್ಲಿ ಮತ್ತೆ ಕೆಲವು ಬಾರಿ ಸಾಂಸ್ಕೃತಿಕ ರಾಷ್ಟ್ರೀಯವಾದದ ಮುಸುಕಿನಡಿಯಲ್ಲಿ ನಮ್ಮ ಸಾಮಾಜಿಕ ಸಾಂಸ್ಕೃತಿಕ ಬದುಕಿನ ವೈವಿಧ್ಯತೆ ಮತ್ತು ಅನೇಕತೆಗಳ ಮೇಲೆ ನೇರ ಧಾಳಿ ನಡೆಯುತ್ತಿದೆ. ಇವೆಲ್ಲವೂ ಖಾಸಗಿ ಹಣಕಾಸು ಬಂಡವಾಳ ಮತ್ತು ಅದರ ಒಕ್ಕೂಟದ ಕೈಯಲ್ಲಿನ ಪಕ್ಷಪಾತದ, ವಂಚನೆಯ ಹಾಗೂ ಸಾಮಾಜಿಕ ಅಸಮಾನತೆಯ ಸಾಧನಗಳು ಜಾಗತೀಕರಣದ ಪ್ರಭಾವದಡಿಯಲ್ಲಿ ನಡೆಯುತ್ತಿರುವ ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ ಮತ್ತು ಅದರೊಳಗೆ ಹುದುಗಿರುವ ಅಪಾಯಗಳ ಬಗ್ಗೆ ಎಚ್ಚರಿಸುವ ಯಾವುದೇ ಕಲೆ ಮತ್ತು ಸಾಹಿತ್ಯದ ತುಣುಕುಗಳು ವ್ಯವಸ್ಥಿತ ವ್ಯಾಪಾರೀ ಫ್ಯಾಶೀವಾದದ ಧಾಳಿಗೊಳಗಾಗುತ್ತಿವೆ.

ಪರಂಪರೆ, ಸಂಸ್ಕೃತಿ ಹಾಗೂ ರಾಷ್ಟ್ರೀಯ ಹಿರಿಮೆಗಳ ಹೆಸರಿನಲ್ಲಿ ಮೂಲಭೂತ ಹಕ್ಕುಗಳಾದ ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘಟನೆಯ ಸ್ವಾತಂತ್ರ್ಯ ಮತ್ತು ನಂಬಿಕೆಯ ಸ್ವಾತಂತ್ರ್ಯಗಳನ್ನು ನಿರಾಕರಿಸುವ ರಾಜಕೀಯ ಕ್ಷೇತ್ರದಲ್ಲಿ ಬೆಳೆಯುತ್ತಿವೆ. ಹಬೀಬ್ ತನ್ವೀರ್‌ರ “ಪೊಂಗಾ ಪಂಡಿತ್” ನಾಟಕದ ಮೇಲಿನ ಧಾಳಿ, ಎನ್.ಎಸ್.ಬೇಂದ್ರೆ ಹಾಗೂ ಚಿತ್ರವಾಸು ಮುಜುಯ್‌ದಾರರ ವರ್ಣಚಿತ್ರಗಳ ಮೇಲಿನಧಾಳಿ, ಮುಂಬಯಿ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾರತೀಯ ಡಾಕ್ಯುಮೆಂಟರಿ ಚಿತ್ರಗಳ ಪ್ರದರ್ಶನಕ್ಕೆ ಮುಂಚಿ ಸೆನ್ಸಾರ್ ಮಂಡಳಿಯ ಪರವಾನಗಿ ಪಡೆಯಬೇಕು ಎನ್ನುವ ಸಂಗತಿ ಕೆಲವು ಉದಾಹರಣೆಗಳಷ್ಟೆ. ಆದರೆ ಕಲಾವಿದರ ಐಕ್ಯತೆ ಹಾಗೂ ಸೌಹಾರ್ದತೆ ಸಂಘಪರಿವಾರದ ಇಂತಹ ಹೇಯ ಕೃತ್ಯ ಹಾಗೂ ಧಾಳಿಗಳನ್ನು ಹಿಮೆಟ್ಟಿಸುವಲ್ಲಿ ಸಮರ್ಥವಾಗಿದೆ ಎಂಬುದು ನಮಗೆ ಶಕ್ತಿ ನೀಡುವ ಸಂಗತಿ.

ಜನಪರ ರಂಗಭೂಮಿ ಕಲಾವಿದರ ಈ ಸಭೆ ಜಾತಿ ಮತ್ತು ಸಂಸ್ಕೃತಿಯ ಪ್ರಶ್ನೆಗಳನ್ನು ಅತ್ಯಂತ ಗಂಭೀರವಾಗಿ ಎತ್ತಿದೆ. ವರ್ಗ ವ್ಯವಸ್ಥೆಯ ಫಲವೇ ಈ ಜಾತಿ ವ್ಯವಸ್ಥೆಯಾಗಿದ್ದು ಅದು ದಲಿತ ಮತ್ತು ದುಡಿಯುವ ಜನಸಮುದಾಯದ ಸಹಜ ಆಸೆ ಆಕಾಂಕ್ಷೆಗಳ ದಾರಿಯಲ್ಲಿ ಅಡ್ಡ ಬರುತ್ತಿದೆ, ಈಗ ಜಾಗತೀಕರಣದ ಜತೆ ಶಾಮೀಲಾಗಿರುವ ಪುರೋಹಿತಶಾಹಿ ತನ್ನ ಪಕ್ಷಪಾತ, ದಬ್ಬಾಳಿಕೆ ಹಾಗೂ ಸುಲಿಗೆಯ ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಹೋಗಲು ತೀವ್ರ ಪ್ರಯತ್ನ ಮಾಡುತ್ತಿದೆ. ದಲಿತರು ಮತ್ತು ಮಹಿಳೆಯರ ಸೃಜನಾತ್ಮಕತೆಯನ್ನು ಸಬಲೀಕರಣದ ಮೂಲಕ ಮುಕ್ತಗೊಳಿಸುವ ಕರ್ತವ್ಯ ಜನಪರ ರಂಗಭೂಮಿ ಕಲಾವಿದರ ಮೇಲಿದೆ. ಭೂಮಿ ಮತ್ತು ಭೂಸಂಬಂಧಗಳನ್ನು ಬದಲಾಯಿಸುವ ವಿಷಯಗಳ ಜತೆಗೆ ತಳಕುಹಾಕುವುದರ ಮೂಲಕ ಮಾತ್ರ ಈ ಜಾತಿ ಪ್ರಶ್ನೆಗೆ ಒಂದು ಪರಿಹಾರ ಸಾಧ್ಯ. ನಮ್ಮ ಸಾಮಾಜಿಕ ಸಾಂಸ್ಕೃತಿಕ ಬದುಕಿನ ಮೇಲೆ ಜಾಗತೀಕರಣವು ತನ್ನ ಪ್ರಭಾವ ಬೀರುತ್ತಿರುವುದರಿಂದಾಗಿ ನಮ್ಮ ದೇಶದ ನಾಗರಿಕ ಬದುಕಿನ ವಾತಾವರಣ ಕುಗ್ಗುತ್ತಿದೆ. ಅದು ದ್ವೇಷದ ಮತ್ತು ಹಿಂಸೆಯ ರಾಜಕೀಯವನ್ನು ಹುಟ್ಟುಹಾಕಿದೆ ಮಾತ್ರವಲ್ಲ ರಾಜಕೀಯ ಭ್ರಷ್ಟತೆಗೆ ಮತ್ತು ರಾಜಕೀಯ ಅಪರಾಧಿಕರಣಕ್ಕೂ ಕಾರಣವಾಗಿದೆ. ಇವತ್ತಿನ ಸಂದರ್ಭದಲ್ಲಿ ಸಮಕಾಲೀನ ಸಾಮಾಜಿಕ ಸಂವೇದನಾಶೀಲತೆಯ ಸ್ಥಿತಿಯನ್ನು ಗಮನಿಸಿದ ಜನಪರ ನಾಟಕ ಚಳುವಳಿಯು ಅಂತಹ ವಿನಾಶಕಾರಿ ಹಾಗೂ ಪ್ರಗತಿವಿರೋಧಿ ಶಕ್ತಿಗಳನ್ನು ಎದುರಿಸಲು ಗಂಭೀರ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಕೋಮುವಾದಿ ಫ್ಯಾಸಿಸ್ಟರನ್ನು ಮತ್ತು ಸಾಮ್ರಾಜ್ಯವಾದಿಗಳು ನಮ್ಮ ಜನ ಸಂಸ್ಕೃತಿಯ ಮೇಲೆ ನಡೆಸುತ್ತಿರುವ ಧಾಳಿಯನ್ನು ಹಿಮೆಟ್ಟಿಸಲು ನಮ್ಮ ದೇಶದಲ್ಲಿನ ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸಬೇಕೆಂದು ಜನಪರ ರಂಗಭೂಮಿ ಕಾರ್ಯಕರ್ತರ ಈ ಸಭೆಯು ಕಳಕಳಿಯಿಂದ ಮನವಿ ಮಾಡಿದೆ.

ಹುತಾತ್ಮ ಭಗತಸಿಂಗ್‌ರ ದಿನವಾದ ಮಾರ್ಚ್ 23 ರಂದು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹುತಾತ್ಮ ದಿನಾಚರಣೆ ಆಚರಿಸಬೇಕೆಂದು ಸಭೆ ಕರೆ ನೀಡಿದೆ.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಜನವಿರೋಧಿ ಬಿಜೆಪಿ ನೇತೃತ್ವದ ‘ಎನ್‌ಡಿಎ ಕೂಟವನ್ನು ಸೋಲಿಸಬೇಕೆಂದು ಎಲ್ಲಾ ಪ್ರಜಾಪ್ರಭುತ್ವವಾದಿಗಳಿಗೂ ಸಭೆ ಕರೆ ನೀಡಿದೆ.

ಮುಚ್ಚಿಹೋದ ಗಣಿ : ಕುಸಿದ ಮನೆ, ಮನಸ್ಸುಗಳು

ಕೋಲಾರ ಚಿನ್ನದ ಗಣಿ ಎಂದರೆ ಅಲ್ಲಿ ಮೂಟೆ, ಮೂಟೆ ಚಿನ್ನ ಸಿಗುತ್ತದೆ ಎನ್ನುವುದೇ ನನಗೆ ಇಲ್ಲಿಗೆ ಬರುವವರೆಗೆ ಇದ್ದ ಚಿತ್ರಣ. ಇಲ್ಲಿ ಬಂದ ನಂತರ ನೋಡುತ್ತೇನೆ ಒಂದು ಗ್ರಾಮ ಚಿನ್ನಕ್ಕಾಗಿ ಟನ್‌ಗಳಷ್ಟು ಮಣ್ಣನ್ನು ಸೋಸುವುದು ನನ್ನ ಜನರ ಕೆಲಸ ಎಂದು ಫೆಬ್ರವರಿ 15 ರಂದು ಅಂಡರ್ಸನ್ ಪೇಟೆಯಲ್ಲಿ ಕೇಂದ್ರ ಸರ್ಕಾರದ ಜನ ವಿರೋದಿ ನೀತಿಗಳ ವಿರುದ್ಧ ಸಭೆಯನ್ನು ಉದ್ದೇಶಿಸಿ ತಮಿಳುನಾಡು ಪ್ರಗತಿಪರ ಬರಹಗಾರರ ರಾಜ್ಯ ಉಪಾಧ್ಯಕ್ಷರು, ತಮಿಳು ಟಿ.ವಿ. ಚಾನಲ್‌ಗಳಲ್ಲಿ ಮೂಡಿಬರುವ ಜನಪ್ರಿಯ ಕಾರ್ಯಕ್ರಮಗಳಿಂದ ಪ್ರಖ್ಯಾತರಾದ “ಚಿಂತಕರ ಛಾವಡಿ” ಖ್ಯಾತಿಯ ಮದುರೈ ಮದಕೂರು ರಾಮಲಿಂಗ ಮಾತನಾಡಿದರು.

ಕೇಂದ್ರ ಸರ್ಕಾರ ಬರಿ ಗಣಿಯನ್ನು ಮಾತ್ರ ಮುಚ್ಚಿಲ್ಲ ಗಣಿ ಕಾರ್ಮಿಕರ ಮನೆಗಳು ಮತ್ತು ಮನಸ್ಸುಗಳು ಸಹಾ ಮುಚ್ಚಿದೆ. ಗಣಿಗಳು, ಕಾರ್ಖಾನೆಗಳನ್ನು ಮುಚ್ಚುವ ತೀರ್ಮಾನ ತೆಗೆದುಕೊಂಡಿರುವುದು ಯಾರು ಬಿಜೆಪಿ/ ಎನ್.ಡಿ.ಎ ಮತ್ತು ಅದನ್ನು ಬೆಂಬಲಿಸುವ ಎ.ಡಿ.ಎಂ.ಕೆ, ನಿಮ್ಮ ಸ್ಥಳೀಯ ಶಾಸಕ ಕೂಡ ಎ.ಡಿ.ಎಂ.ಕೆ ಆಗಿರುವುದು ನೀವು ಗಮನಿಸಬೇಕಾಗಿದೆ ಎಂದರು.

ತಮಿಳುನಾಡಿನ ರೇಷನ್ ಅಂಗಡಿಗಳಲ್ಲಿ ರೇಷನ್ ಕೇಳಿದರೆ, ಕೆ.ಜಿ.ಎಫ್.ನ ತಮಿಳರಿಗೆ ಅಕ್ಕಿ ಕೊಡುತ್ತೇವೆಂದು ಹೇಳಿದರು, ಆದರೆ ನಿಮಗೆ ಸಿಕ್ಕಿರುವುದು ಬರಿ 30 ಕೆ.ಜಿ ಅಕ್ಕಿ ಎಂದು ತಿಳಿಯಿತು. ನಿಮಗೆ ಪ್ರತಿ ತಿಂಗಳು 30 ಕೆ.ಜಿ. ಅಕ್ಕಿ ಕೊಡುವುದಾದರೆ ನಮಗೆ ಸಂತೋಷ. ತಮಿಳುನಾಡು ಸರ್ಕಾರದ ಹತ್ತಿರ 30 ಕೆ.ಜಿ. ಅಕ್ಕಿ ಬೇಡಿಕೊಂಡು ಬರುವ ಬದಲಾಗಿ ಕರ್ನಾಟಕ ಸರ್ಕಾರದ ಮೇಲೆ ಒತ್ತಡ ಹಾಕಿ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ಎ.ಡಿ.ಎಂ.ಕೆ. ಕೇಂದ್ರದ ಬಿಜೆಪಿ ಸರ್ಕಾರದ ಮೇಲೆ ಒತ್ತಡ ಹಾಕಿ ಗಣಿಯನ್ನು ಪುನಃಶ್ಚೇತನಗೊಳಿಸುವ ಕೆಲಸ ಮಾಡಬೇಕು. ಬಿಜೆಪಿ ಅಥವಾ ಜಯಾಗಾಗಲಿ, ದಲಿತರು ಮಹಿಳೆಯರು, ಮಧ್ಯಮ ವರ್ಗದವರ ಬಗ್ಗೆ ಯಾವುದೇ ಕರುಣೆ ಇಲ್ಲವೆಂಬುದು 12 ಲಕ್ಷ ಜನ ಸರ್ಕಾರಿ ನೌಕರರನ್ನು ಒಂದೇ ದಿನ ಸಸ್ಪೆಂಡ್ ಮಾಡಿದ ಲೇಡಿ ಹಿಟ್ಲರ್. ಇತ್ತೀಚಿಗೆ ತಮಿಳುನಾಡಿನಲ್ಲಿ ಒಂದು ಕಾನೂನು ಜಾರಿಯಾಗಿದೆ. ಯಾರು ಕುರಿಕಂಬಳಿಗಳನ್ನು ಕಟ್ ಮಾಡಬಾರದು. ಇದು ಹಸುಗಳನ್ನು ಕೊಲ್ಲಬಾರದೆಂಬ ಆರ್.ಎಸ್.ಎಸ್. ನ ಒಂದುತ್ತದ ಸಿದ್ಧಾಂತವಾಗಿದೆ. ಮತಾಂತರ ನಿಷೇಧ ಕಾನೂನು ಜಾರಿಗೆ ತಂದಿದೆ. ಜನರ ಆಹಾರ ಪದ್ಧತಿ, ಆಚರಣೆ ಪದ್ಧತಿಗಳ ಮೇಲೆ ಹಿಡಿತ ಸಾಧಿಸಲು ಆರ್.ಎಸ್.ಎಸ್. ಕಂಚಿ ಶಂಕರ ಆಚಾರ್ಯರೆಂಬ ಸ್ವಾಮಿಗಳ ಮೂಲಕ ತಮಿಳುನಾಡಿನಲ್ಲಿ ಆಡಳಿತ ನಡೆಸುತ್ತಿದ್ದಾರೆ ಎಂದರು.

ವಾಜಪೇಯಿ ಸ್ವದೇಶಿ ಸಿದ್ಧಾಂತ ಹೇಳಿ ವಿದೇಶಿ ಕಂಪನಿಗಳಿಗೆ ಭಾರತದ ಸಮೃದ್ಧ ಬೊಕ್ಕಸ ಫಲವನ್ನು ಒಪ್ಪಿಸುವುದಕ್ಕೆ ತಯಾರು ಎಂಬುದನ್ನು ತಿಳಿಯಬೇಕು.

ದಿನನಿತ್ಯ ಟಿ.ವಿ.ಪತ್ರಿಕೆಯಲ್ಲಿ ಭಾರತ ಪ್ರಕಾಶಿಸುತ್ತಿದೆ ಎಂದು ಹೇಳುವ ಪ್ರಧಾನಿಗಳಿಗೆ ಕೆ.ಜಿ.ಎಫ್. ನಗರದಂತಹ ಪ್ರದೇಶಗಳಿಗೆ ಬಂದರೆ ಖಂಡಿತಾ. ಭಾರತ ಪ್ರಕಾಶಿಸುತ್ತಿಲ್ಲ ಬದಲಾಗಿ ಭಾರತ ಹೊತ್ತಿಕೊಂಡು ಉರಿಯುತ್ತಿದೆ ಎಂಬುದು ತಿಳಿಯುತ್ತದೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ಮಾಜಿ ಶಾಸಕ ಟಿ.ಎಸ್.ಮಣಿ ವಹಿಸಿದ್ದರು. ವೇದಿಕೆಯ ಮೇಲೆ, ಕಾರ್ಮಿಕ ಮುಖಂಡರಾದ ಪಿ.ಅರ್ಜುನನ್, ಪಿ.ಶ್ರೀನಿವಾಸನ್, ಆನಂದನ್, ತಾರಾನಾಥ, ಎ.ಆರ್.ಬಾಬು ಉಪಸ್ಥಿತರಿದ್ದರು. “ಪೂಬಾಲನ್ ಕಲಾ ಸಂಘಂ” ನ ಪ್ರಗತಿಶ್ವರನ್ ಅವರ ಕ್ರಾಂತಿಗೀತೆಗಳನ್ನು ಹಾಡಿದರು.

ವರದಿ- **ವಿ.ತಿರುಪತಿ**

ಈ ಪೋಸ್ಟರ್ ಜನರೆದುರು ನೀವೇಕೆ ತೆರೆದಿಡಬಾರದು?

‘ಒಂದು ಸುಳ್ಳನ್ನು ಮತ್ತೆ ಮತ್ತೆ ಹೇಳಬೇಕು, ಆ ಸುಳ್ಳು ದೊಡ್ಡದಾಗಿರಬೇಕು, ಆಗ ಆ ಸುಳ್ಳು ಸತ್ಯದಂತೆ ಗೋಚರವಾಗಿ ಜನ ನಂಬುತ್ತಾರೆ ಎಂಬ ಹಿಟ್ಲರನ ಪ್ರಚಾರ ಮಂತ್ರಿ ಗೋಬೆಲ್ಸ್‌ನ ಹಾದಿಯನ್ನೇ ಅನುಸರಿಸುತ್ತಿರುವ ಸಂಘ ಪರಿವಾರ - ಬಿಜೆಪಿ ‘ಭಾರತ ಬೆಳಗುತ್ತಿದೆ’ ಎಂಬ ಅಬ್ಬರದ ಪ್ರಚಾರದಿಂದ ದೇಶದ ಜನರ ಕಣ್ಣು-ಕಿವಿಗಳಿಗೆ ರಂಗಿನ ಮಂಕುಬೂದಿ ಎರಚಿದೆ. ಹಲವಾರು ಟಿವಿ, ಪತ್ರಿಕಾ ಮಾಧ್ಯಮಗಳು ಈ ಪುಂಗಿನಾದವನ್ನೇ ಉಸುರುತ್ತಿವೆ. ಕೆಲವರು ತಲೆಯಾಡಿಸಿ ಒಪ್ಪುತ್ತಲೂ ಇದ್ದಾರೆ. ಆದರೆ ನಿಜ ಸಂಗತಿ ಏನು?

ಈ ವ್ಯವಸ್ಥಿತ ವಂಚನೆ ಬಯಲಿಗೆಳೆಯಲು ‘ದುಡಿವ ಜನರ ಪ್ರಾಣ ಮಿತ್ರ’ ನಿರ್ಧರಿಸಿದೆ. ಈ ಸಂಚಿಕೆಯುದ್ದಲೇ ಅಂತಹ ಪೋಸ್ಟರ್ ನಿಮ್ಮ ಕೈಯಲ್ಲಿ.

ಓದಿ, ಬಳಿಕ ಅದನ್ನು ಕತ್ತರಿಸಿ ಜನನಿಬಿಡ ಪ್ರದೇಶದಲ್ಲಿ ಅಂಟಿಸಿ, ಇತರರಿಗೂ ಓದಿಸಬಾರದೇಕೆ?

- ಸಂ.



ಜಿ.ಎಸ್.ಮಣಿ

ಹಣದುಬ್ಬರ: ಸುಳ್ಳಿನಬ್ಬರ

ಹಣದುಬ್ಬರ ಪೂರ್ತಿ ಹತೋಟಿಯಲ್ಲಿದೆ. ಅದು ಶೇ. 4.5 ರಿಂದ ಶೇ 5 ರ ಒಳಗೆ ಇದೆ ಎಂದು ಕೇಂದ್ರದ ಹಣಕಾಸು ಮಂತ್ರಾಲಯ ಹೇಳುತ್ತಲೇ ಇದೆ. ವರ್ಷದಿಂದ ವರ್ಷಕ್ಕೆ ಈ ಹಣದುಬ್ಬರವನ್ನು ಅಳೆದರೆ ಅದು ಶೇ 5 ರ ಒಳಗೆ ಇದೆ ಎಂಬುದು ಅದರ ಅರ್ಥ. ಜನರ ಕಣ್ಣಿಗೆ ಮಂಕುಬೂದಿ ಎರಚುವ ಸುಳ್ಳು ಇದು. ದೇಶದ ಜನಸಾಮಾನ್ಯರಿಗೆ ಬೆಲೆ ಏರಿಕೆಯ ನೋವು ಅನುಭವಕ್ಕೆ ಬರುತ್ತದೆ. ಆದ್ದರಿಂದ ಈ ಸುಳ್ಳುಗಳು ನಂಬಿಕೆ ಹುಟ್ಟಿಸುವುದಿಲ್ಲ. ಕೆಳಗಿನ ಕೋಷ್ಟಕ ನೋಡಿದರೆ ಹಣದುಬ್ಬರದ ಸುಳ್ಳು ಸ್ಪಷ್ಟವಾಗುತ್ತದೆ.

ಒಟ್ಟಾರೆ ಆರ್ಥಿಕದ ಹಣದುಬ್ಬರ ಶೇ.6 ಕ್ಕೂ ಹೆಚ್ಚಿರುವುದು ಯಾರಿಗಾದರೂ ಕಾಣುತ್ತದೆ. ಹಣದುಬ್ಬರ ಹೆಚ್ಚಿದಂತೆಲ್ಲಾ ಅದನ್ನು ಮುಚ್ಚಿಹಾಕಲು ಎನ್‌ಡಿಎ ಸರ್ಕಾರ ಸುಳ್ಳಿನ ಉಬ್ಬರ ಹೆಚ್ಚಿಸುತ್ತದೆ ಎಂಬುದು ಗೊತ್ತಾಗುತ್ತದಲ್ಲವೆ?

ಸಗಟು ಬೆಲೆ ಸೂಚ್ಯಾಂಕ

	8.2.03	9.8.03	14.2.04	ವಾರ್ಷಿಕ ಹೆಚ್ಚಳ ಫೆಬ್ರವರಿ 03 ಆಗಸ್ಟ್ 03	ವಾರ್ಷಿಕ ಹೆಚ್ಚಳ ಆಗಸ್ಟ್ 03 ಫೆಬ್ರವರಿ 04	ಒಂದು ವರ್ಷದ ವಾರ್ಷಿಕ ಹೆಚ್ಚಳ
ಪ್ರಾಥಮಿಕ ವಸ್ತುಗಳು	176	179.70	182.10	4.20%	2.60	3.47
ತೈಲ, ವಿದ್ಯುತ್ ಕೀಲೆಣ್ಣೆ	244.1	249.50	263.30	4.42%	11.06	7.87
ಉತ್ಪಾದನೆ	150.20	154.30	159.70	5.46%	7.00	6.32
ಒಟ್ಟು	169.20	173.40	4.96	6.92%	6.03	

ಭ್ರಷ್ಟಾಚಾರ ಮತ್ತು ಭಯೋತ್ಪಾನೆಯ ಜಾಗತೀಕರಣ

ಜಾಗತೀಕರಣವಾದಿಗಳ ಪ್ರಕಾರ ಜಾಗತೀಕರಣದಿಂದ ಜಗತ್ತಿನ ಎಲ್ಲಾ ಜನರಿಗೂ ಲಾಭವಿದೆ. ಆದರೆ ವಿಶ್ವ ಕಾರ್ಮಿಕ ಸಂಘಟನೆಯ ವರದಿಯ ಪ್ರಕಾರ ಇದರ ಲಾಭಗಳು ಬಹಳ ಕಡಿಮೆ. ಇದರಿಂದಾಗುವ ಅಪಾಯಗಳು ಬಹಳ ಹೆಚ್ಚು.

ಇಂದು ಆಗುತ್ತಿರುವ ಜಾಗತೀಕರಣದಿಂದ ಭ್ರಷ್ಟಾಚಾರ ಮತ್ತು ಭಯೋತ್ಪಾದನೆ ಬೆಳೆಯುತ್ತಿದೆಯಂತೆ. ಇದನ್ನು ನಾವು ವಾಸ್ತವವಾಗಿಯೇ ಕಾಣುತ್ತಿದ್ದೇವೆ.

ಈ ವರದಿಯ ಪ್ರಕಾರ ಜಾಗತೀಕರಣದಿಂದಾಗಿ ಉತ್ಪಾದನೆ ಹೆಚ್ಚಿಲ್ಲ. ಜನರ ತಲಾ ಆದಾಯವೂ ಹೆಚ್ಚಿಲ್ಲ. ಅಲ್ಲದೆ ಈ ಆದಾಯದ ಸಮಾನ ಹಂಚಿಕೆಯೂ ಆಗುತ್ತಿಲ್ಲ.

ವ್ಯತಿರಿಕ್ತವಾಗಿ ಬಡವ ಮತ್ತು ಶ್ರೀಮಂತರ ನಡುವಿನ ಅಂತರ ಬಹಳವಾಗಿ ಹೆಚ್ಚುತ್ತಿದೆ. ವರದಿಯೇ ಹೇಳುವಂತೆ "ಈ ಜಾಗತೀಕರಣದಿಂದ ಮಗುವಿನ ಪಾದರಕ್ಷೆಯ ಬೆಲೆ ಕಡಿಮೆಯಾಗಿ ಮಗುವಿನ ತಂದೆ ತನ್ನ ಕೆಲಸವನ್ನೇ ಕಳೆದು ಕೊಂಡಿದ್ದರೆ, ಅದಕ್ಕೆ ಅರ್ಥವೇ ಇಲ್ಲ" ಜಾಗತೀಕರಣದಿಂದ ಇಂತಹದು ಆಗುತ್ತಿದೆ ಎಂದೇ ಈ ವರದಿ ಹೇಳುತ್ತದೆ.

"ನಿಜವಾದ ಜಾಗತೀಕರಣ ನ್ಯಾಯಯುತ ಮತ್ತು ಎಲ್ಲರನ್ನೂ ಒಳಗೊಳ್ಳುವಂತಹದ್ದಾಗಬೇಕೆಂದು ಅದು ಹೇಳುತ್ತದೆ.

ಜಾಗತೀಕರಣವನ್ನು ಸರಿಪಡಿಸುವುದು ಮನೆಯಿಂದಲೇ ಪ್ರಾರಂಭವಾಗಬೇಕು. ಹಲವು ಸುಧಾರಣೆಗಳನ್ನು ಈ ಪ್ರಕ್ರಿಯೆಯಲ್ಲಿಯೆ ಮಾಡಬೇಕೆನ್ನುತ್ತದೆ ಅದು.

ಆದರೆ ಸಾಮ್ರಾಜ್ಯಶಾಹಿ ಜನರಿಗೆ ಲಾಭದಾಯಕವಾಗುವ ಜಾಗತೀಕರಣ ಆಗಲು ಬಿಟ್ಟೀತೆ?

ಹಿತಾನುಭವವಿದ್ದರೆ ಅವಸರವೇಕೆ?

ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ 'ಭಾರತ ಪ್ರಕಾಶಿಸುತ್ತಿದೆ' ಮತ್ತು ಎಲ್ಲೆಲ್ಲೂ 'ಹಿತಾನುಭವ'ದ ಪ್ರಚಾರ ಮಾಡುತ್ತಿದೆ. ಭಾರತ ಯಾರಿಗೆ ಪ್ರಕಾಶಿಸುತ್ತಿದೆ ಎಂಬುದನ್ನು ಈಗ ಮಾಧ್ಯಮಗಳ ಸಹಿತ ಹಲವರು ಎತ್ತಿ ಎತ್ತಿ ತೋರಿಸಿದ್ದಾರೆ.


ಹಣಕಾಸು ಮಂತ್ರಿ ಜಸ್ವಂತ್ ಸಿಂಗ್ ಅವರು ದೇಶದೆಲ್ಲೆಡೆ ಹಿತಾನುಭವ ಇದೆ ಇದನ್ನು ಹಳ್ಳಿಯ ರೈತನಿಗೂ ಹೇಳಬೇಕು ಎಂದಿದ್ದಾರೆ. ಈ ಮಾತು ತಮಾಷೆಯಾಗಿದೆ. ಯಾಕೆಂದರೆ ಹಿತಾನುಭವ ಆಗುತ್ತಿದ್ದರೆ ಯಾರೂ ಯಾರಿಗೂ ಅದನ್ನು ಹೇಳಬೇಕಾಗಿಲ್ಲ. ಅದು ಅವರವರ ಅನುಭವಕ್ಕೆ ಬರುವಂತಹದ್ದು. ಅಂತಹ ಹಿತಾನುಭವ ಇದ್ದರೆ ಜನ ಅದನ್ನು ಹೇಳುತ್ತಿದ್ದರು. ಎನ್‌ಡಿಎಯ ಈ ಪ್ರಚಾರ ಈ ಕಾರಣಕ್ಕಾಗಿಯೇ ಅತ್ಯಂತ ಅಪ್ರಾಮಾಣಿಕವಾದದ್ದು ಎಂದು ಗೊತ್ತಾಗಿಬಿಡುತ್ತದೆ.

ಅಲ್ಲದೆ ಎನ್‌ಡಿಎಯ ಚುನಾವಣೆಗಾಗಿನ ತರಾತುರಿ. ಹಿತಾನುಭವ ನಿಜವಾದದ್ದಾಗಿ ಅದು ಬಹುಕಾಲ ಉಳಿಯುವಂತಹದ್ದಾಗಿದ್ದರೆ ಇವರಿಗೆ ಇಂತಹ ಅವಸರದ ಅವಶ್ಯಕತೆ ಏನಿತ್ತೋ? ಉತ್ತಮ ಮಳೆಯಾದ ಕಾರಣ ಸುಡುವ ಬಿಸಿಲಿನಲ್ಲಿದ್ದವರಿಗೆ ತಂಪಾಗಿರುವುದು ಸ್ವಲ್ಪಮಟ್ಟಿಗೆ ನಿಜ. ಈ ಭಾವನೆ ತಾತ್ಪೂರ್ತಿಕವಾದದ್ದು. ಆದ್ದರಿಂದಲೇ ಬಿಜೆಪಿ ಅವಸರಿಸುತ್ತಿರುವುದು.

ಇದಲ್ಲದೆ ಎನ್‌ಡಿಎ ಆಡಳಿತದ ದುಷ್ಪರಿಣಾಮಗಳು ಇನ್ನು ಮುಂದೆ ದುರಂತಗಳಂತೆ ತೆರೆದುಕೊಳ್ಳಲಿದೆ. ಅದಕ್ಕೂ ಮೊದಲು ಚುನಾವಣೆ ಗೆಲ್ಲುವ ಹುನ್ನಾರ ಅವರದು.

ಜನ ಇದಕ್ಕೆ ತಕ್ಕ ಉತ್ತರ ನೀಡದೆ ಹೋದಾರೆ? ಖಂಡಿತ ಇಲ್ಲ.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ದುಬಾರಿ ಕಬ್ಬಿಣದ ಘಟಕಗಳು

ವಿಶ್ವ ಆರೋಗ್ಯ ಸಂಸ್ಥೆಯು ಫೇರಸ್ ಸಲ್ಫೇಟ್ ಎಂಬ ಕಬ್ಬಿಣದ ಘಟಕವನ್ನು ಉಪಯೋಗಿಸಲು ಸೂಚಿಸುತ್ತದೆ.

ಈ ಕಬ್ಬಿಣದ ಘಟಕವುಳ್ಳ ರಕ್ತ ವೃದ್ಧಿಸುವ ಮಾತ್ರೆಗಳನ್ನು ತಯಾರಿಸಿ, ಲಾಭವನ್ನು ಸೇರಿಸಿಕೊಂಡು 10 ರಿಂದ 20 ಪೈಸೆಗೆ ಮಾರಲು ಸಾಧ್ಯ. ಆದರೆ ಮಾರುಕಟ್ಟೆಯಲ್ಲಿ ದೊರಕುವ ಕಬ್ಬಿಣದ ಮಾತ್ರೆಗಳ ಬೆಲೆ 1 ರೂ.ಯಿಂದ 5 ರೂ.ಗಳವರೆಗೆ, ಅಂದರೆ 25 ಪಟ್ಟು ದುಬಾರಿ.

ದುಬಾರಿ ಬೆಲೆಯನ್ನು ಸಮರ್ಥಿಸಿಕೊಳ್ಳಲು ಫೆರಸ್ ಸಲ್ಫೇಟ್ ಬದಲು ಬೇರೆ ಬೇರೆ ಕಬ್ಬಿಣದ ಘಟಕಗಳನ್ನು ಬಳಸಲಾಗುತ್ತದೆ ಹಾಗೂ ಹೀಗೆ ಉಪಯೋಗಿಸಿದ ಘಟಕ ಹೆಚ್ಚು ಪರಿಣಾಮಕಾರಿಯೆಂದು ಪ್ರತಿಪಾದಿಸುತ್ತವೆ. ಔಷಧಿ ಶಾಸ್ತ್ರದ ಬೈಬಲ್ ಎಂದೇ ಕರೆಯಲ್ಪಡುವ ಗುಡ್‌ಮನ್ ಗಿಲ್‌ಮನ್ ಎಂಬ ಔಷದಿ ಶಾಸ್ತ್ರದ ಪುಸ್ತಕ ಕಬ್ಬಿಣದ ಘಟಕದ ಬಗ್ಗೆ ಹೀಗೆ ಹೇಳುತ್ತದೆ. "ಫೆರಸ್ ಖನಿಜದ ಬದಲಾವಣೆಯಿಂದಾಗಿ, ಔಷಧಿ ಹೀರುವಿಕೆ, ಔಷಧಿಯು ಜೀವಕ್ಕೆ ದಕ್ಕುವಿಕೆ ಬದಲಾವಣೆಯಾಗುವುದಿಲ್ಲ. ಸಲ್ಫೇಟ್ ಫ್ಯೂಮರೇಟ್, ಸಕ್ಸಿನೇಟ್, ಗ್ಲೂಕೊನೇಟ್ ಹಾಗೂ ಇತರೇ ಕಬ್ಬಿಣದ ಖನಿಜಗಳು ಒಂದೇ ಪ್ರಮಾಣದಲ್ಲಿ ದೇಹದಿಂದ ಹೀರಲ್ಪಡುತ್ತದೆ.

ಇಂದು ಮಾರುಕಟ್ಟೆಯಲ್ಲಿ ಬೇರೆ ಬೇರೆ ತರಹದ ಕಬ್ಬಿಣದ ಖನಿಜಗಳು ದೊರಕುತ್ತಿದ್ದು, ಫೆರಸ್ ಸಲ್ಫೇಟ್‌ಗಿಂತ ಹೆಚ್ಚು ಪ್ರಯೋಜಕ ಎಂಬ ಮಾತಿಗೆ ಅರ್ಥವಿಲ್ಲ".

ಹೀಮಪ್ ಚ್ಯೂ ಮಾತ್ರೆಗಳಲ್ಲಿ ಐರನ್ ಮಾಲ್ಟೋಸ್ ಎಂಬ ಜಾತಿ ಸೂಚಕ ಔಷಧಿ ಇದೆ.

ಫೆಕಾಂಟಿನ್ ಎಫ್ ಮಾತ್ರೆಗಳಲ್ಲಿ ಫೆರಸ್‌ಗ್ಲೈಸೀನ್ ಸಲ್ಫೇಟ್ ಎಂಬ ಜಾತಿಸೂಚಕ ಔಷಧಿ ಇದೆ.

ಆಸ್ಟಿಫೆರ್ ಝಡ್ ಮಾತ್ರೆಗಳಲ್ಲಿ ಫೆರಸ್ ಫ್ಯೂಮರೇಟ್ ಜಾತಿಸೂಚಕ ಔಷಧಿ ಇದೆ.

ಟೆಲ್‌ಫೆರಾನ್ ಮಾತ್ರೆಗಳಲ್ಲಿ ಫೆರಸ್ ಅಮೈನೋವೇಟ್ ಜಾತಿಸೂಚಕ ಔಷಧಿ ಇದೆ.

ಸಿಪಾನ್ ಮಾತ್ರೆಗಳಲ್ಲಿ ಐರನ್ ಹೈಡ್ರಾಕ್ಸಿಪಾಲಿಮಲ್ಟೋಸ್ ಜಾತಿಸೂಚಕ ಔಷಧಿ ಇದೆ.

ಫೀಪಾಲ್ ಮಾತ್ರೆಗಳಲ್ಲಿ ಫೆರಸ್ ಸಲ್ಫೇಟ್ ಜಾತಿಸೂಚಕ ಔಷಧಿ ಇದೆ.

ಡೆಕ್ಸಾರೇಂಜ್ ಮಾತ್ರೆಗಳಲ್ಲಿ ಫೆರಿಕ್ ಅಮೋನಿಯಂ ಸಿಟ್ರೇಟ್ ಜಾತಿಸೂಚಕ ಔಷಧಿ ಇದೆ.

ಐರೆಕ್ಸ್ 12 ಮಾತ್ರೆಗಳಲ್ಲಿ ಐರನ್ ಕೋಲೀನ್ ಸಿಟ್ರೇಟ್ ಜಾತಿಸೂಚಕ ಔಷಧಿ ಇದೆ.

ಇತ್ತೀಚಿನವರೆಗೆ ಭಾರತದಲ್ಲಿ ಅನೇಕ ಕಂಪನಿಗಳು ಅನೇಕ ರಾಷ್ಟ್ರಗಳಲ್ಲಿ ನಿಷೇಧವಾದ ಹಿಮೊಗ್ಲೋಬಿನ್ ಎಂಬ ಪ್ರಾಣಿಜನ್ಯ ಪದಾರ್ಥವನ್ನು ಕಬ್ಬಿಣದ ಬದಲು ಉಪಯೋಗಿಸಿ ರಕ್ತದ ಟಾನಿಕ್‌ಗಳನ್ನು ತಯಾರಿಸುತ್ತಿದ್ದವು. ಅದನ್ನು ಔಷಧಿ ನಿಯಂತ್ರಣ ಇತ್ತೀಚೆಗೆ ನಿಯಂತ್ರಿಸಿದೆ. ಕಾರಣ ರಕ್ತ ವೃದ್ಧಿಸಲು ಅದು ಪರಿಣಾಮಕಾರಿಯಲ್ಲ ಹಾಗೂ ಅಲರ್ಜಿ ಉಂಟುಮಾಡಲು ಸಾಧ್ಯ. ಆದರೆ ದುಬಾರಿ ಘಟಕಗಳನ್ನೊಳಗೊಂಡ ರಕ್ತದ ಟಾನಿಕ್‌ಗಳು ನಿಷೇಧವಾಗದೇ ಇದ್ದುದು ವಿಷಾದಕರ.

ಸಿಗರ್ ಆಕ್ಟ್ ಜಾರಿಗೆ ಒತ್ತಾಯ

ಎಲ್ಲಾ ಬೀಡಿಗಳು ಕಾನೂನಿನ ವ್ಯಾಪ್ತಿಯಲ್ಲಿ ಇರಬೇಕು. ಎಲ್ಲಾ ಬೀಡಿಗಳಿಗೆ ಬೀಡಿ ಎಂಡ್ ಸಿಗರ್ ಆಕ್ಟ್ ಜಾರಿಗೊಳಿಸಬೇಕು ಎಂದು ಸಿ.ಐ.ಟಿ.ಯು. ಜಿಲ್ಲಾ ಉಪಾಧ್ಯಕ್ಷ ಯು.ಬಿ.ಲೋಕಯ್ಯ ಮಾತನಾಡುತ್ತಾ ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ 21ನೇ ವಾರ್ಷಿಕ ಮಹಾಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನಾಲ್ಕುವರೆ ಲಕ್ಷ ಬೀಡಿ ಕಾರ್ಮಿಕರು ಇಂದು ವಾರದಲ್ಲಿ 1-2 ಕಂಪನಿ ಕೆಲಸ ಮಾಡಿ ಉಳಿದ ದಿನಗಳಲ್ಲಿ ಯಾವುದೇ ಸವಲತ್ತುಗಳಿಲ್ಲದ ಬೀಡಿಗಳನ್ನು ಕಟ್ಟಿ ತೀರ ಕಷ್ಟಕರವಾದ ಜೀವನವನ್ನು ಸಾಗಿಸುತ್ತಿದ್ದಾರೆ. ಚುನಾವಣಾ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಡವರ ಹಾಗೂ ದುಡಿಯುವ ವರ್ಗದ ಜನರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಾ ದುಡಿಯುವ ವರ್ಗದ ಜನರ ಮತ ಸಿಕ್ಕಿದ ಮೇಲೆ ದೇಶದ ಮತ್ತು ವಿದೇಶಿ ಬಂಡವಾಳಗಾರರ ಪರವಾಗಿ ನಿಂತು ದೇಶದ ದುಡಿಯುವ ವರ್ಗದ ಜನರನ್ನು ತೀರ ಸಂಕಷ್ಟದ ಪರಿಸ್ಥಿತಿಗೆ ತಳ್ಳುತ್ತಿದ್ದಾರೆ. ಈ ಕಾರ್ಮಿಕರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ ರಾಜ್ಯ ಮತ್ತು ಕೇಂದ್ರ ಸರಕಾರಗಳು ಒಂದು ಕಡೆ ಧೂಮಪಾನ ನಿಷೇದ ಜಾರಿಗೊಳಿಸಿ 20 ಲಕ್ಷದವರೆಗಿನ ಬೀಡಿಗೆ ತೆರಿಗೆ ವಿನಾಯಿತಿ ಮಾಡಿ 20 ಕೋಟಿಗೂ ಹೆಚ್ಚು ಬೀಡಿಗಳನ್ನು ಯಾವುದೇ ಸವಲತ್ತುಗಳಿಲ್ಲದೆ ಕಟ್ಟಿಸಲು ಅವಕಾಶ ಮಾಡಿಕೊಟ್ಟಿತ್ತು. ಬೀಡಿ ಕಾರ್ಮಿಕರಿಗೆ ಈ ಸವಲತ್ತು ಯಾರ ಕೊಡುಗೆಯೂ ಅಲ್ಲ ಕಾರ್ಮಿಕರ ಸಂಘಟಿತ ಹೋರಾಟದ ಫಲವಾಗಿದೆ. ಈ ಸವಲತ್ತುಗಳನ್ನು ರಕ್ಷಿಸಬೇಕು ಎಲ್ಲಾ ಬೀಡಿ ಕಾರ್ಮಿಕರಿಗೆ ಲಾಗ್ ಪುಸ್ತಕದ ಮುಖಾಂತರ ಆರು ದಿನದ ಕೆಲಸ ಸಿಗಬೇಕಾದರೆ ಎಲ್ಲಾ ಬೀಡಿಗಳಿಗೆ ಬೀಡಿ ಎಂಡ್ ಸಿಗಾರ್ ಆಕ್ಟ್ ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.

ಇನ್ನೋರ್ವ ಮುಖ್ಯ ಅತಿಥಿಯಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಫೆಡರೇಷನ್‌ನ ಕಾರ್ಯದರ್ಶಿ ಸುಕುಮಾರ್‌ರವರು ಮಾತನಾಡುತ್ತಾ ಕೇಂದ್ರದಲ್ಲಿ ಬಿಜೆಪಿಯು ಸರಕಾರವು ಅಧಿಕಾರಕ್ಕೆ ಬರುವಾಗ ಪಿ.ಎಫ್.ಗೆ 12 ಶೇಕಡಾ ಇದ್ದ ಬಡ್ಡಿಯನ್ನು 2.5 ಶೇಕಡಾ ಕಡಿತಗೊಳಿಸಿ 9.5 ಶೇಕಡಕ್ಕೆ ಇಳಿಸಿತ್ತು ಸರಕಾರದ ಧೋರಣೆಯಿಂದ ಕಾರ್ಮಿಕರ ಕಾನೂನುಬದ್ಧ ಸವಲತ್ತುಗಳು ಒಂದೊಂದೆ ಕಳಚಿ ಬೀಳುವಂತೆ ಪರಿಸ್ಥಿತಿ ಬಂದೊದಗಿದೆ.

ಬಂಟ್ವಾಳ ಬೀಡಿ ಕೆಲಸಗಾರರ ಸಂಘದ ಉಪಾಧ್ಯಕ್ಷರಾದ ಶೀನ ಬಂಗೇರ ಈ ಸಭೆಗೆ ಶುಭಕೋರಿ ಮಾತನಾಡಿದರು. ಈ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಎಸ್.ಎ.ಹಸನಬ್ಬ ವಹಿಸಿದ್ದರು ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿ ಸದಾಶಿವದಾಸ್ ಸ್ವಾಗತಿಸುತ್ತಾ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಭೆಯಲ್ಲಿ ಎಸ್.ಎ.ಹಸನಬ್ಬ ಅಧ್ಯಕ್ಷರಾಗಿ ಭಾಸ್ಕರ ಆಚಾರಿ ಶ್ರೀಮತಿ ವೇದಾವತಿ ಶ್ರೀಮತಿ ಬೇಬಿನಾಯ್ಕ ಉಪಾಧ್ಯಕ್ಷರಾಗಿ ಕೆ.ಸದಾಶಿವದಾಸ್ ಕಾರ್ಯದರ್ಶಿಯಾಗಿ ಶ್ರೀಮತಿ ವಸಂತಿ ಎಸ್. ಕುಮಾರಿ ನಳಿನಾಕ್ಷಿ ಶ್ರೀಮತಿ ರಮಣಿ ಶ್ರೀಮತಿ ವಾರಿಜ ಜೊತೆ ಕಾರ್ಯದರ್ಶಿಗಳಾಗಿ ಸೋಮಯ್ಯ ಗೌಡ ಕೋಶಾಧಿಕಾರಿಯಾಗಿ 10 ಮಂದಿ ಪಧಾಧಿಕಾರಿಗಳು ಸೇರಿ 34 ಮಂದಿಯ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಕೆ.ಸದಾಶಿವದಾಸ್

'ಮುಷ್ಕರದ ಹಕ್ಕು ನಮ್ಮ ಹಕ್ಕು'

ಫೆಬ್ರವರಿ 24ರಂದು ನಡೆದ ಮುಷ್ಕರ ಸ್ವಾತಂತ್ರ್ಯ ನಂತರದ 7ನೇ ಅಖಿಲ ಭಾರತ ಮುಷ್ಕರವಾಗಿದೆ. ಈ ಹಿಂದೆ ನಡೆದ ಅಂತಾರ್ರಾಷ್ಟ್ರೀಯ ಮುಷ್ಕರಗಳು ಕಾರ್ಮಿಕರು, ನೌಕರರು ಹಾಗೂ ರೈತರ ನೇರ ಆರ್ಥಿಕ ಬೇಡಿಕೆಗಳಿಗಾಗಿ ನಡೆದ ದೇಶವ್ಯಾಪಿ ಮುಷ್ಕರಗಳಾಗಿವೆ. ಈ ಬಾರಿಯ ಮುಷ್ಕರವು ಐತಿಹಾಸಿಕ ಪ್ರಾಮುಖ್ಯತೆ "ಮುಷ್ಕರದ ಹಕ್ಕು ರಕ್ಷಣೆಗಾಗಿ'' ದೇಶವ್ಯಾಪಿ ಅಭೂತಪೂರ್ವವಾಗಿ ಯಶಸ್ವಿಯಾಗಿದೆ.

2003 ಅಗಸ್ಟ್ 6ರಂದು ತಮಿಳುನಾಡಿನ 12 ಲಕ್ಷ ಸರ್ಕಾರಿ ನೌಕರರು ಮತ್ತು ಶಿಕ್ಷಕರು 11 ದಿನಗಳ ಕಾಲ ಧೀರೋದಾತ್ತ ಮುಷ್ಕರವನ್ನು ನಡೆಸಿ ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳ ಧಾಳಿಯನ್ನು ವಿರೋಧಿಸಿದಾಗ ಜಯಲಲಿತ ಸರ್ಕಾರ ಸುಮಾರು 3 ಲಕ್ಷ ನೌಕರರನ್ನು ಏಕಾಏಕಿ ಟೆಸ್ಮಾ ಎಂಬ ಕರಾಳ ಕಾನೂನು ಬಳಸಿ ವಜಾ ಮಾಡಿದ ಹಿನ್ನಲೆಯಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು "ಮುಷ್ಕರದ ಹಕ್ಕು" ಸಂವಿಧಾನಬದ್ಧವಾಗಿ, ಕಾನೂನು ಬದ್ಧವಾಗಿ, ನೈತಿಕವಾಗಿ ಇಲ್ಲ ಎಂದು ತೀರ್ಪು ನೀಡಿದ ಹಿನ್ನಲೆಯಲ್ಲಿ ಈ ಮುಷ್ಕರ ನಡೆಸುವ ಅನಿವಾರ್ಯತೆ ಉಂಟಾಯಿತು. ಅಷ್ಟೇ ಅಲ್ಲ ಸುಪ್ರೀಂ ಕೋರ್ಟ್ ತೀರ್ಪಿನ ಬಗ್ಗೆ ಸಹಮತವೇನೂ ಇಲ್ಲ ಎಂದು ಭಾರತದ ಪ್ರಧಾನಿ ಎ.ಬಿ.ವಾಜಪೇಯಿ ಹೇಳಿಕೆ ನೀಡಿ ಮತ್ತೊಂದು ಕಡೆ ತದ್ವಿರುದ್ಧ ರೀತಿಯಲ್ಲಿ ಅಂತಾರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಓ)ಗೆ ಬರೆದ ಪತ್ರದಲ್ಲಿ ತಮಿಳುನಾಡು ಸರ್ಕಾರದ ಎಲ್ಲಾ ಕ್ರಮಗಳು, ಧಾಳಿಗಳನ್ನು ಹಾಗೂ ಸುಪ್ರೀಂ ಕೋರ್ಟ್‌ನ ತೀರ್ಪಿನ ಎಲ್ಲಾ ಅಂಶಗಳನ್ನು ಸಮರ್ಥನೆ ಮಾಡಿರುವುದು ಬಿಜೆಪಿ ಕೇಂದ್ರ ಸರ್ಕಾರದ ದ್ವಂದ್ವ ನೀತಿಯ ಹಿನ್ನಲೆಯಲ್ಲಿ ಆಳುವ ವರ್ಗಗಳಿಗೆ ತಕ್ಕ ಉತ್ತರ ನೀಡಿದ ಮುಷ್ಕರ ಇದಾಗಿದೆ.

ಐಎನ್‌ಟಿಯುಸಿ ಆರಂಭದಲ್ಲಿ ದೇಶವ್ಯಾಪಿ ಮುಷ್ಕರಕ್ಕೆ ಸಹಮತ ವ್ಯಕ್ತಪಡಿಸಿದರೂ ಮತ್ತು 26ನೇ ಸೆಪ್ಟೆಂಬರ್ 2003ರಂದು ನಡೆದ ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಮಾವೇಶದಲ್ಲಿ ಐಎನ್‌ಟಿಯುಸಿ ಅಧ್ಯಕ್ಷರಾದ ಸಂಜೀವರೆಡ್ಡಿ ಅವರೇ ಸಮಾವೇಶದ ಠರಾವನ್ನು ಮಂಡಿಸಿದರು ಮತ್ತು ಫೆಬ್ರವರಿ 24ರ ಮುಷ್ಕರದ ದಿನಾಂಕ ನಿಗದಿ ಪಡಿಸುವ ಸಭೆ ಐಎನ್‌ಟಿಯುಸಿ ಕಛೇರಿಯಲ್ಲಿ ಅದೇ ಸಂಜೀವರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದರೂ, ಕೊನೆಗೆ ಐಎನ್‌ಟಿಯುಸಿ ಮುಷ್ಕರದಲ್ಲಿ ಭಾಗವಹಿಸಲಿಲ್ಲ. ಆದರೂ ಮುಷ್ಕರ ಅತ್ಯಂತ ಯಶಸ್ವಿಯಾಗಿದೆ. ಅಲ್ಲದೆ ಬಿಎಂಸ್(ಸಂಘ ಪರಿವಾರದ ಭಾಗ) ಆರಂಭದಿಂದಲೂ ಕಾರ್ಮಿಕರ ಸಾಮೂಹಿಕ ಐಕ್ಯ ಹೋರಾಟಗಳ ಬೆನ್ನಿಗೆ ಚೂರಿ ಹಾಕುವ ನೀತಿಯನ್ನೇ ಅನುಸರಿಸುತ್ತಾ ಬಂದರೂ ಈ ಮುಷ್ಕರ ಯಶಸ್ವಿಯಾಗಿದೆ.

"ಮುಷ್ಕರದ ಹಕ್ಕು" ಸಂಘಟನಾ ಭಾಗವಾಗಿಯೇ ಸಂವಿಧಾನದ ಪರಿಚ್ಛೇದ 19(1)(9) ಅಡಿಯಲ್ಲಿ ಒಳಗೊಂಡಿದೆ ಎಂದು 1982ರಲ್ಲಿ 7 ನ್ಯಾಯಾಧೀಶರುಗಳನ್ನು ಒಳಗೊಂಡ ಸುಪ್ರೀಂಕೋರ್ಟ್ ಧರ್ಮಾಸನ ಸ್ಪಷ್ಟವಾಗಿ ತೀರ್ಪು ನೀಡಿದೆ.



ತಮಿಳುನಾಡಿನಲ್ಲಿ

ಆದರೇ ಇತ್ತೀಚಿನ ಸುಪ್ರೀಂಕೋರ್ಟ್ ತೀರ್ಪು ಜಾಗತೀಕರಣ ನೀತಿಗಳ ಪ್ರಭಾವದಡಿಯಲ್ಲಿ ಹೊರಬಂದಿರುವ ಕಾರಣ ಮುಂದೆ ಆಯ್ಕೆಯಾಗುವ ಸಂಸತ್ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಮೂಲಕ ಸೂಕ್ತ ಶಾಸನವನ್ನು ಅಂಗೀಕರಿಸಬೇಕು. ಈ ಚುನಾವಣೆಯಲ್ಲಿ ಜನರ ಮುಂದೆ ಮತ ಯಾಚನೆ ಮಾಡುವ ಎಲ್ಲಾ ರಾಜಕೀಯ ಪಕ್ಷಗಳು ಕಾರ್ಮಿಕರ ಹಕ್ಕುಗಳ ಬಗ್ಗೆ ಅವರ ಧೋರಣೆ ಏನೆಂಬುದನ್ನು ಸ್ಪಷ್ಟಪಡಿಸುವಂತೆ ಈ ಮುಷ್ಕರದ ಒಕ್ಕೊರಲಿನ ಸಂದೇಶವಾಗಿದೆ. ಬಡರೈತರ, ಕೂಲಿಕಾರರ, ನೌಕರರ ಜನವಿರೋಧಿ ರಾಜಕೀಯ ಶಕ್ತಿಗಳನ್ನು ಸೋಲಿಸಲು ಕೋಮುವಾದಿ ಬಿಜೆಪಿ ಎನ್‌ಡಿಎ ಮೈತ್ರಿ ಕೂಟಕ್ಕೆ ಬುದ್ಧಿ ಕಲಿಸುವುದು ಈ ಮುಷ್ಕರದ ಸಂದೇಶವಾಗಿದೆ.

ದಾವಣಗೆರೆಯಲ್ಲಿ ಪ್ರತಿಭಟನೆ

ದಾವಣಗೆರೆಯಲ್ಲಿ ಬ್ಯಾಂಕ್, ವಿಮೆ, ಔಷಧ ಮಾರಾಟ ಪ್ರತಿನಿಧಿಗಳ ಜಂಟಿ ಕ್ರಿಯಾಸಮಿತಿ ನೇತೃತ್ವದಲ್ಲಿ ನಾನೂರಕ್ಕೂ ಹೆಚ್ಚು ನೌಕರರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಮೈಸೂರು ಬ್ಯಾಂಕ್ ಎದುರು ಪ್ರತಿಭಟನೆ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಸ್ಥಳೀಯ ಕಾನೂನು ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಎಸ್.ಹೆಚ್.ಪಟೇಲರು ಮತ್ತು ಇತರ ಸಂಘಟನೆಗಳ ಮುಖಂಡರು ಮಾತನಾಡಿದರು.

ಜಿಲ್ಲೆಯ ಆರು ತಾಲ್ಲೂಕುಗಳ ಸುಮಾರು 300 ಗ್ರಾಮ ಪಂಚಾಯತ್ ನೌಕರರು ಮುಷ್ಕರದಲ್ಲಿ ಪಾಲ್ಗೊಂಡು, ದಾವಣಗೆರೆ ನಗರಸಭೆ ಆವರಣದಿಂದ ಹಲಿಗೆ ಬಡಿತ, ಘೋಷಣೆಗಳೊಂದಿಗೆ ಮೆರವಣಿಗೆ ನಡೆಸಿ ಜಿಲ್ಲಾ ಪಂಚಾಯತ್ ಕಛೇರಿಗೆ ಮುತ್ತಿಗೆ ಹಾಕಿದರು. ಪ್ರತಿಭಟನೆಯ ನೇತೃತ್ವವನ್ನು ಎ.ಎಸ್.ಮೂರ್ತಿ, ಕೆ.ಎಲ್.ಭಟ್, ಆರ್.ಸಿ.ಉನ್ನಿತ್ತನ್, ಬೈರೇಶ ಮೊದಲಾದವರು ವಹಿಸಿದ್ದರು. ಹರಿಹರದಲ್ಲಿ ಬ್ಯಾಂಕ್, ಎಲ್.ಐ.ಸಿಯಲ್ಲಿ ಮುಷ್ಕರ ನಡೆಯಿತು. ಬೀಡಿ ಕಾರ್ಮಿಕರು ಮೆರವಣಿಗೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಜಗಳೂರು- ಹರಪನಹಳ್ಳಿಯಲ್ಲಿ ಬ್ಯಾಂಕ್, ಎಲ್.ಐ.ಸಿ ನೌಕರರು ಮುಷ್ಕರ ನಡೆಸಿದ್ದರೆ ಹರಪನಹಳ್ಳಿಯಲ್ಲಿ ಎಸ್.ಎಫ್.ಐ ನೇತೃತ್ವದಲ್ಲಿ ಎಲ್ಲಾ ಕಾಲೇಜು ವಿದ್ಯಾರ್ಥಿಗಳು ಕಾಲೇಜ್ ಬಂದ್ ಮಾಡಿ ಮೆರವಣಿಗೆ ನಡೆಸಿದರು. ಬ್ಯಾಂಕ್, ಎಲ್‌ಐಸಿ ನೌಕರರು ಮೆರವಣಿಗೆ ನಡೆಸಿದರು.

ಜಿಲ್ಲೆಯ ಎಲ್ಲಾ ಬ್ಯಾಂಕ್ ಹಾಗೂ ಎಲ್‌ಐಸಿ ನೌಕರರು ಮುಷ್ಕರದಲ್ಲಿ ಪಾಲ್ಗೊಂಡು ಮುಷ್ಕರ ಯಶಸ್ವಿಗೊಳಿಸಿದ್ದಾರೆ.

ಉತ್ತರಕನ್ನಡ: ಮುಷ್ಕರದ ಹೋರಾಟ-ಬೆದರಿಕೆ ಬಗ್ಗಲಿಲ್ಲ

ಹೊ: ವಿಭಾಗಗಳು ಕೂಡ ಮೊದಲಬಾರಿಗೆ ಮುಷ್ಕರದ ಹಕ್ಕಿಗಾಗಿ ಬೀದಿಗಿಳಿದವು. ಹಂಚು ಕಾರ್ಖಾನೆಗಳು, ಗ್ರಾಮಪಂಚಾಯತ್ ನೌಕರರು, ಅಂಗನವಾಡಿ ನೌಕರರು, ಬ್ಯಾಂಕ್, ಎಲ್‌ಐಸಿ ನೌಕರರು ಸರ್ಕಾರಿ ನೌಕರರು, ಪ್ರಾಂತ ರೈತಸಂಘದ ಕಾರ್ಯಕರ್ತರು ಈ ಮುಷ್ಕರ ಯಶಸ್ವಿಗೊಳಿಸಿದರು. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಮುಷ್ಕರ ಹಮ್ಮಿಕೊಳ್ಳಲಾಗಿತ್ತು. ಬಹುತೇಕ ತಾಲೂಕುಗಳಲ್ಲಿ ಮೆರವಣಿಗೆ ಬಹಿರಂಗಸಭೆ ನಡೆದಿದೆ. ಅಂಗನವಾಡಿ ನೌಕರರು ಮುಷ್ಕರದಲ್ಲಿ ಪಾಲ್ಗೊಂಡಿದ್ದು, ಕೆಲವು ತಾಲೂಕುಗಳಲ್ಲಿ ಸ್ವತಂತ್ರವಾಗಿ ಅವರೇ ಮೆರವಣಿಗೆ ಬಹಿರಂಗಸಭೆ ನಡೆಸಿದ್ದಾರೆ.

ಕಾರವಾರ ನಗರದ ಮಾಲಾದೇವಿ ಮೈದಾನದಿಂದ ಹೊರಟ ಮೆರವಣಿಗೆ ಜಿಲ್ಲಾಧಿಕಾರಿ ಕಛೇರಿ ಎದುರು ಸಭೆಯಾಗಿ ಮಾರ್ಪಟ್ಟಿತು. ಅಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಬಿಐಬಿಇಎ ನ ವಿನೋದ ಮೇತ್ರಿ, ಎಐಐಇಎನ ಎಲ್.ಮಂಜುನಾಥ್, ಅಂಗನವಾಡಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಯಮುನಾ ಗಾಂವ್ಕರ್ ಮಾತನಾಡಿ "ಅಪಾರ ದುಡಿಯುವ ಜನರು ತ್ಯಾಗ, ಬಲಿದಾನಗಳ ಮೂಲಕ ಗಳಿಸಿಕೊಂಡ ಬದುಕುವ ಹಕ್ಕಿನ ಮುಷ್ಕರದ ಹಕ್ಕನ್ನು ಕಳೆದುಕೊಳ್ಳುವಂತಾಗಿದೆ. 'ಸುಪ್ರಿಂ ಕೋರ್ಟ್ ಹೇಳಿದೆ ಎನ್ನುವ ಕಾರಣಕ್ಕೆ ಇದು ಅಪ್ಯಾಯಮಾನವಲ್ಲ; ದೇವರಿಗೆ ಹಚ್ಚಿದ ದೀಪವಾದರೂ ಕೈಸುಡದೇ ಬಿಟ್ಟಿತೆ?" ಎಂದು ಪ್ರಶ್ನಿಸಿದರು ಮತ್ತು ಈ ಆದೇಶವನ್ನು ಹಿಮ್ಮೆಟ್ಟಿಸಬೇಕಾಗಿದೆ ಎಂದರು. ಹೋರಾಟವನ್ನು ಬೆಂಬಲಿಸಿ ಮಾಜಿ ಸಚಿವರಾದ ಪ್ರಭಾಕರ ರಾಣೆ, ಕೆಪಿಆರ್‌ಎಸ್‌ನ ಶಾಂತಾರಾಮ ನಾಯಕ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಎಂ.ವಿ.ನಾಯ್ಕ, ಗ್ರಾಮ ಪಂಚಾಯತ್ ನೌಕರರ ಸಂಘದ ಆರ್.ಎಂ.ಮುಲ್ಲಾ ಮಾತನಾಡಿದರು. ನೇತೃತ್ವವನ್ನು ಆನಂದು ನಾಯ್ಕ, ಎಂ.ವಿ.ನಾಯ್ಕ, ಪೌಲನಕರ, ಎ.ಆರ್.ಶೇಖ್, ದೀಪಕ್ ನಾಯ್ಕ, ಗಣಪತಿ ಭಾಗ್ವತ, ಶ್ರೀನಿವಾಸ, ತಾರಾನಾಯ್ಕ, ಜೋಸ್ ಥಾಮಸ್, ನರೇಶ, ಭಾರತಿ, ಪ್ರಮೋದ, ಮಮತಾ ನಾಯ್ಕ ವಹಿಸಿದ್ದರು. ಸುಭಾಸ್ ಕೊಪ್ಪೀಕರ್ ಕಾರ್ಯಕ್ರಮ ನಿರ್ವಹಿಸಿದರೆ ವಾಸುದೇವ ಶೇಟ್ ವಂದಿಸಿದರು.

ಹೊನ್ನಾವರ: ನಗರದಲ್ಲಿ ಮೆರವಣಿಗೆ ನಡೆಸಲಾಯಿತು. ಬ್ಯಾಂಕ್, ಎಲ್‌ಐಸಿ, ಹಂಚುಕಾರ್ಖಾನೆ, ಅಂಗನವಾಡಿ ಸಂಪೂರ್ಣ ಬಂದ್ ಮಾಡಿ ಮೆರವಣಿಗೆಯಲ್ಲಿ ಪಾಲ್ಗೊಂಡರು. 400 ರಷ್ಟಿದ್ದ ಮೆರವಣಿಗೆಕಾರರು ಹತ್ತಾರು ಪ್ಲೆಕಾರ್ಡ್ ಹಿಡಿದು ಘೋಷಣೆ ಕೂಗುತ್ತಾ ತಾಲೂಕಿಗೆ ಸಂದೇಶ ಸಾರಿದರು. ಸಭೆಯನ್ನುದ್ದೇಶಿಸಿ ಸಿಐಟಿಯು ಎಂ.ವಿ.ನ ತಿಲಕಗೌಡ, ಡಿವೈಎಫ್‌ಐ ವಿಠ್ಠಲ ಭಂಡಾರಿ, ಕೆನರಾಬ್ಯಾಂಕಿನ ಸುರೇಶಭಟ್ಟ ಎಐಟಿಯುಸಿಯ ಆರ್.ಎಸ್.ನಾಯ್ಕ ಮಾತನಾಡಿದರು. "ನ್ಯಾಯಬದ್ಧವಾದ ಬೇಡಿಕೆಗೆ ಯಾರೂ ಸ್ಪಂಧಿಸದಿದ್ದಾಗ ಅಂತಿಮ ಅಸ್ತ್ರವಾಗಿ ಮುಷ್ಕರ ಅನಿವಾರ್ಯವೆಂದರು. ಈ ತೀರ್ಪು ದುಡಿಯುವ ವರ್ಗದ ಮೇಲಿನ ದಾಳಿ ಎಂದು ಪರಿಗಣಿಸಬೇಕಾಗಿದೆ ಎಂದು ಹೇಳಿದರು. ಮೆರವಣಿಗೆ ನೇತೃತ್ವವನ್ನು ರಾಮಾಶಿವಗೌಡ, ತಿಮ್ಮಪ್ಪಗೌಡ, ಸುರೇಶ ನಾಯ್ಕ, ಮುನ್ವಿರ್ ಡಿಕೋನಾ, ದಾಮೋದರ ನಾಯ್ಕ, ಶಂಕರ ದೇವಾಡಿಗ, ಮಾಸ್ತಿ ನಾಯ್ಕ, ಸವಿತಾ, ಕಮಲಾಗೌಡ, ಮಹೇಶ ಭಂಡಾರಿ, ಮಾಸ್ತಿ ಗೌಡ, ಗಣಪತಿ ಶೆಟ್ಟಿ ವಹಿಸಿದ್ದರು.



ಅಂಕೋಲಾ ಐಸಿಡಿಎಸ್‌ನ ಹಳೆಯ ಯೋಜನೆಯಾದ ಅಂಕೋಲಾದ ಅಂಗನವಾಡಿ ನೌಕರರು ನಗರದ ಸತ್ಯಾಗ್ರಹ ಸ್ಮಾರಕ ಭವನದಿಂದ ತಹಶೀಲ್ದಾರರ ಕಛೇರಿ, ನಂತರ ಸಿಡಿಪಿಓ ಕಛೇರಿವರೆಗೆ ಮೆರವಣಿಗೆ ನಡೆಸಿದರು. ತಾಲೂಕಾ ಕಾರ್ಯದರ್ಶಿ ಲಲಿತಾ ಶಡಗೇರಿ ಎಸ್.ಎಫ್.ಐ.ನ ಜಿಲ್ಲಾ ಕಾರ್ಯದರ್ಶಿ ಮಂತಾ ನಾಯಕ, ಪ್ರಾಂತ ರೈತ ಸಂಘದ ಗೌರಿಶ ನಾಯಕ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಜೋಯ್ಡಾ ತಾಲ್ಲೂಕು ಗುಡ್ಡಗಾಡು ಪ್ರದೇಶವಾದರೂ ಹತ್ತಾರು ಕಿ.ಮಿ. ನಡೆದೇ ತಾಲೂಕಾ ಕೇಂದ್ರಕ್ಕೆ ಬಂದು ಅತ್ಯಂತ ಯಶಸ್ವಿ ಮೆರವಣಿಗೆ ಹಾಗೂ ಸಭೆ ನಡೆಸಿದರು. ಎರಡು ನೂರಕ್ಕೂ ಹೆಚ್ಚು ಜನ ಭಾಗವಹಿಸಿದ ಪ್ರತಿಭಟನೆಯ ನೇತೃತ್ವವನ್ನು ತಾಲೂಕಾ ಅಧ್ಯಕ್ಷೆ ಗಂಗಾಭಟ್, ಸಿಐಟಿಯು ಜಿಲ್ಲಾ ಮುಖಂಡ ಎಚ್.ಬಿ.ನಾಯಕ ವಹಿಸಿದ್ದರು.

ಭಟ್ಕಳದಲ್ಲಿ ಮೂರು ನೂರಕ್ಕೂ ಹೆಚ್ಚು ಅಂಗನವಾಡಿ ನೌಕರರು ಮೆರವಣಿಗೆ ಬಹಿರಂಗ ಸಭೆ ನಡೆಸಿದರು. ಭಟ್ಕಳ ತಾಲೂಕಾ ಅಧ್ಯಕ್ಷೆ ಶಕುಂತಲಾ ಶೆಟ್ಟಿ, ಮುಖಂಡರಾದ ಪದ್ಮಾ ಖಾರ್ವಿ, ಶಾಂತಿ ಮೊಗೇರ, ಶೋಭಾ, ಶಕುಂತಲಾ ಆಚಾರಿ ನೇತೃತ್ವದಲ್ಲಿದ್ದರು.

ಯಲ್ಲಾಪುರ: ಅಂಗನವಾಡಿ ನೌಕರರ ಮೆರವಣಿಗೆ ಸಭೆಯು ತಾಲ್ಲೂಕಾ ಅಧ್ಯಕ್ಷೆ ಪ್ರಭಾವತಿ ಹೆಗಡೆ, ಕಾರ್ಯದರ್ಶಿ ಜಯಶ್ರೀ ಜಕ್ಕಪ್ಪಗೋಳ, ಲಕ್ಷ್ಮಿ ಭಟ್ ನೇತೃತ್ವದಲ್ಲಿ ಯಶಸ್ವಿಯಾಯಿತು.


ಸಿದ್ದಾಪುರ : ಜಿಲ್ಲಾಧ್ಯಕ್ಷೆ ಸವಿತಾ ತನ್ಮಡ್ಗಿ ತಾಲೂಕಾ ಮುಖಂಡರಾದ ಶಾಂತಿಶೇಟ್, ಗೌರಿ, ರುಬಿಯಾ ಮುಂತಾದವರ ನೇತೃತ್ವದಲ್ಲಿ ನೂರೈವತ್ತಕ್ಕೂ ಹೆಚ್ಚು ಅಂಗನವಾಡಿ ನೌಕರರು ಪ್ರತಿಭಟನಾ ಮೆರವಣಿಗೆ ಸಭೆ ಯಶಸ್ವಿಗೊಳಿಸಿದರು.

ಕಾರವಾರ, ಹಳಿಯಾಳ, ಹೊನ್ನಾವರ, ಸಿರ್ಸಿಗಳಲ್ಲಿ ಜೆಸಿಟಿಯು ಮೆರವಣಿಗೆಯಲ್ಲಿ ಅಂಗನವಾಡಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮುಂಚೂಣಿಯಲ್ಲಿದ್ದರು. ಕುಮಟಾದಲ್ಲಿ ಅಂಗನವಾಡಿ ಕೇಂದ್ರಗಳನ್ನು ಮುಚ್ಚಿ ಪ್ರತಿಸಿಭಟಿಸಿದರು. ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಸರ್ವೆ ಕಾರ್ಯಕ್ರಮ ತಪ್ಪಿಸಿದರೆ ನೋಟಿಸ್ ನೀಡುತ್ತೇವೆ, ಮುಷ್ಕರ ರದ್ದಾಗಿದೆ, ಇತ್ಯಾದಿಯಾಗಿ ಬೆದರಿಕೆ ಒಡ್ಡಿದರೂ ಜಿಲ್ಲಾಡಳಿತದ ಮತ್ತು ಇಲಾಖೆಯ ತೀವ್ರ ಒತ್ತಡ ಲೆಕ್ಕಿಸದೆ ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರಗಳೂ ಬಂದ್ ಆಗಿದ್ದುದು ಸ್ವತಃ ಜಿಲ್ಲಾಧಿಕಾರಿಗಳ ಎದುರೇ ರ್‍ಯಾಲಿಯಲ್ಲಿ ಪಾಲ್ಗೊಂಡು ಬಹಿರಂಗ ಸಭೆ ನಡೆಸಿರುವುದು ಹೋರಾಟದ ಕೆಚ್ಚು ಮತ್ತು ಸಮಸ್ಯೆಯ ತೀವ್ರತೆಯನ್ನು ಪ್ರತಿಬಿಂಬಿಸುತ್ತದೆ.

ವರದಿ : **ಯಮುನಾ ಗಾಂವ್ಕರ್**

ಈ ಭಾರತ ಪ್ರಕಾಶಿಸುತ್ತಿರಬಹುದು...

- ನಗರ ಪ್ರದೇಶದ ಶೇಕಡಾ 20 ಅತ್ಯಂತ ಶ್ರೀಮಂತರ ತಲಾ ಬಳಕೆ ಶೇಕಡಾ 40 ರಷ್ಟು ಹೆಚ್ಚಾಗಿದೆ.
- ಗ್ರಾಮೀಣ ಪ್ರದೇಶದ ಶೇಕಡಾ 20 ಅತ್ಯಂತ ಶ್ರೀಮಂತರ ತಲಾ ಬಳಕೆ ಶೇಕಡಾ 20 ರಷ್ಟು ಹೆಚ್ಚಾಗಿದೆ
- ಅಂಬಾನಿ ಗುಂಪಿನ ವಹಿವಾಟು ಹತ್ತು ಪಟ್ಟು ಆಗಿ, ನಂಬರ್ 1 ಕೈಗಾರಿಕಾ ಗುಂಪು ಆಗಿದೆ.



- ಉದ್ಯಮಿಗಳು - ಶ್ರೀಮಂತರಿಂದ ಆದಾಯ ತೆರಿಗೆ - ಹಲವು ರೀತಿ ಸುಂಕಗಳ ಬಾಕಿ ಇಮ್ಮಡಿಯಾಗಿ 100 ಕೋಟಿ ರೂ. ಆಗಿದೆ.
- ಉದ್ಯಮಿಗಳು - ಶ್ರೀಮಂತರು ಒಂದು ಲಕ್ಷ ಕೋಟಿ ರೂ. ಸಾಲ ಪಾವತಿ ಮಾಡದೆ ಗುಳುಂ ಮಾಡಿದ್ದಾರೆ.
- ಶ್ರೀಮಂತರಿಗೆ ಬೇಕಾದ ಮೊಬೈಲ್, ಕಂಪ್ಯೂಟರ್, ಕಾರು ಇತ್ಯಾದಿ ಭೋಗ ವಸ್ತುಗಳ ವಿಪುಲತೆ - ವೈವಿಧ್ಯತೆ ಜಾಸ್ತಿಯಾಗಿದೆ - ಬೆಲೆ ಕಡಿಮೆಯಾಗುತ್ತಿದೆ

- ನಗರದ ಅತ್ಯಂತ ಬಡ ಶೇಕಡಾ 40 ಮತ್ತು ಗ್ರಾಮೀಣ ಪ್ರದೇಶದ ಅತ್ಯಂತ ಬಡ ಶೇಕಡಾ 80 ಜನರ ತಲಾ ಬಳಕೆ ಇಳಿದಿದೆ.
- ಹಸಿದ ಜನ ಎರಡು ಕೋಟಿಯಷ್ಟು ಹೆಚ್ಚಿದ್ದಾರೆ
- ಎರಡು ಕೋಟಿ ಸಣ್ಣ-ಮಧ್ಯಮ ಪ್ರಮಾಣದ ಉದ್ಯಮಗಳು ಮುಚ್ಚಿವೆ
- ಗ್ರಾಮೀಣ ಪ್ರದೇಶದ ಹತ್ತರಲ್ಲಿ ಎರಡು ಮನೆ ಜನ ಉಪವಾಸವಿದ್ದಾರೆ



ಈ ಭಾರತ ಸುಡುತ್ತಿದೆ.....



- ನಾಲ್ಕು ಕೋಟಿ ಉದ್ಯೋಗಾರ್ಥಿಗಳಲ್ಲಿ ಉದ್ಯೋಗ ಸಿಕ್ಕಿದ್ದು ಬರಿಯ ಒಂದು ಲಕ್ಷಕ್ಕೆ
- ಅತ್ಯಂತ ಮುಂದುವರೆದ ರಾಜ್ಯ ಪಂಜಾಬಿನಲ್ಲಿ ಒಂದೇ ವರ್ಷದಲ್ಲಿ ಮೂರು ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.
- ಆಂಧ್ರದ ಅನಂತಪುರ ಜಿಲ್ಲೆಯೊಂದರಲ್ಲೇ 1997-2001 ರಲ್ಲಿ ಆತ್ಮಹತ್ಯೆ ಮಾಡಿಕೊಂಡವರು 2000. ಕರ್ನಾಟಕದಲ್ಲಿ ಕಳೆದ ನಾಲ್ಕೂವರೆ ವರ್ಷದಲ್ಲಿ 650 ಕ್ಕೂ ಅಧಿಕ.
- ರೇಷನ್ ಆಹಾರ ಧಾನ್ಯಗಳ ಬೆಲೆ ಎರಡು ಪಟ್ಟಾಗಿದೆ. ದುಬಾರಿ ಬೆಲೆಯಿಂದ ಬಳಕೆ ಅರ್ಧಕ್ಕೆ ಇಳಿದಿದೆ.
- ಸೀಮೆ ಎಣ್ಣೆ ಬೆಲೆ ಮೂರು ಪಟ್ಟು ಆಗಿದೆ. ವಿದ್ಯುತ್ ಬೆಲೆ ಎರಡೂವರೆ ಪಟ್ಟು ಆಗಿದೆ.
- ಮೂರರಲ್ಲಿ ಎರಡು ಮನೆಗಳಲ್ಲಿ ವಿದ್ಯುತ್ತೇ ಇಲ್ಲ.

ಹೇಳಿ ! ಈ ಭಾರತ ಪ್ರಕಾಶಿಸುವುದಾದರೂ ಹೇಗೆ?

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್. ನಾಗರಾಜ್
ಸಂಪಾದಕರು: ಎಸ್.ವೈ. ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು- ಫೋನ್ ನಂ: 22236462
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH